**ಸಂಪುಟ:** 06 **ಸಂಚಿಕೆ:** 145 **ಪುಟಗಳು:** 08 **ಶುಕ್ರವಾರ** 07 ಆಗಸ್ಟ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

**ಮುಂಜಾನೆ ಮಾತು**

ಬದುಕಿನ ಎಲ್ಲಾ ಕಷ್ಟಗಳಿಗೂ
ಎರಡು ಬಗೆಯ
ಪರಿಹಾರವಿದೆ..
ಒಂದು ದುಡಿಮೆ,
ಇನ್ನೊಂದು
ತಾಳ್ಮೆ.

# ಉದಯ ವಾಹಿನಿ

ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

## ಯಶವಂತರಾಯಗೌಡ ರಾಜೀನಾಮೆ ವಾಪಸ್

• **ಉದಯವಾಹಿನಿ, ಬೆಂಗಳೂರು**

ಸಚಿವ ಸ್ಥಾನ ಸಿಗದ ಹಿನ್ನೆಲೆಯಲ್ಲಿ ರಾಜೀನಾಮೆ ನೀಡಿದ್ದ ಇಂಡಿ ಕ್ಷೇತ್ರದ ಶಾಸಕ ಯಶವಂತರಾಯಗೌಡ ಪಾಟೀಲ ಅವರು, ಪಕ್ಷದ ಹಿರಿಯ ನಾಯಕರ ಮನವೊಲಿಕೆಯ ಬಳಿಕ ತಮ್ಮ ರಾಜೀನಾಮೆಯನ್ನು ಹಿಂಪಡೆದಿರುವುದಾಗಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿರಿಯ ನಾಯಕರು ನನ್ನೊಂದಿಗೆ ಮಾತುಕತೆ ನಡೆಸಿ ಪರಿಸ್ಥಿತಿಯನ್ನು ವಿವರಿಸಿದ್ದಾರೆ. ಅವರ ಮಾತುಗಳಿಂದ ನನಗೆ ಸಮಾಧಾನವಾಗಿದೆ. ಆದ್ದರಿಂದ ರಾಜೀನಾಮೆ ಹಿಂಪಡೆದಿದ್ದೇನೆ. ಜನರ ಪ್ರೀತಿ ಇರುವವರೆಗೂ ಸಕ್ರಿಯ ರಾಜಕಾರಣದಲ್ಲಿ ಮುಂದುವರಿಯುತ್ತೇನೆ, ಎಂದರು. ಸಂಕಷ್ಟದ ಸಮಯದಲ್ಲೂ ನಾವು ಕಾಂಗ್ರೆಸ್ ಪಕ್ಷವನ್ನು ಕಟ್ಟಿದ್ದೇವೆ. ನನ್ನ ತಂದೆಯೂ ಅನೇಕ ಅಡೆತಡೆಗಳು ಮತ್ತು ಒತ್ತಡಗಳ ನಡುವೆಯೂ ಕಾಂಗ್ರೆಸ್ ಸಂಘಟನೆಯನ್ನು ಬಲಪಡಿಸಿದ್ದರು. ನಮ್ಮ ಕುಟುಂಬಕ್ಕೆ ಕಾಂಗ್ರೆಸ್ ಪಕ್ಷದೊಂದಿಗೆ ಭಾವನಾತ್ಮಕ ನಂಟಿದೆ ಎಂದು ಹೇಳಿದರು.

2023ರ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ಸಚಿವ ಸ್ಥಾನ ನೀಡುವ ಭರವಸೆ ನೀಡಲಾಗಿತ್ತು. ಇತ್ತೀಚೆಗೆ ಜುಲೈ 31ರಂದು ದೆಹಲಿಯಲ್ಲಿ ನಡೆದ ಮಹತ್ವದ ಸಭೆಯಲ್ಲಿ ತಮ್ಮನ್ನು ಸಚಿವರನ್ನಾಗಿ ಮಾಡುವ ನಿರ್ಧಾರ ಕೈಗೊಳ್ಳಲಾಗಿತ್ತು. ಆದರೆ ಕೊನೆಯ ಕ್ಷಣದಲ್ಲಿ ತಮ್ಮ ಹೆಸರನ್ನು ಕೈಬಿಟ್ಟಿದ್ದು ನೋವುಂಟು ಮಾಡಿತ್ತು. ಅವಕಾಶ ತಪ್ಪಿದರೆ ಆ ಕ್ಷಣವೇ ನಿರ್ಧಾರ ತೆಗೆದುಕೊಳ್ಳುತ್ತೇನೆ ಎಂದು ಮೊದಲೇ ಹೇಳಿದ್ದೆ. ಅದಕ್ಕಾಗಿಯೇ ರಾಜೀನಾಮೆ ನೀಡಿದ್ದೆ ಎಂದು ವಿವರಿಸಿದರು.

ಪಕ್ಷದಲ್ಲಿ ಅಸಮಾಧಾನ, ಅತೃಪ್ತಿಗಳು ಸಹಜ. ನನ್ನಂತೆಯೇ ಹಲವು ಹಿರಿಯ ನಾಯಕರಿಗೂ ಸಚಿವ ಸ್ಥಾನ ಸಿಕ್ಕಿಲ್ಲ. ಕೆಲವು ವಿಚಾರಗಳು ಅತ್ಯಂತ ಸೂಕ್ಷ್ಮವಾಗಿವೆ. ಅವುಗಳ ಬಗ್ಗೆ ಬಹಿರಂಗವಾಗಿ ಮಾತನಾಡುವುದಿಲ್ಲ. ವರಿಷ್ಠರ ಮಾತಿಗೆ ಗೌರವ ನೀಡಿ, ಪಕ್ಷದ ನಿರ್ಧಾರವನ್ನು ಒಪ್ಪಿಕೊಳ್ಳುತ್ತೇನೆ ಎಂದರು.ಮುಖ್ಯಮಂತ್ರಿ ಅವರ ಪರಿಶ್ರಮದಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ರಾಜ್ಯದಲ್ಲಿ ಬರ ಸೇರಿದಂತೆ ಹಲವು ಸವಾಲುಗಳಿವೆ. ಇಂತಹ ಸಂದರ್ಭದಲ್ಲಿ ಸರ್ಕಾರದೊಂದಿಗೆ ನಿಂತು ಕೆಲಸ ಮಾಡುತ್ತೇನೆ ಎಂದು ಅವರು ಹೇಳಿದರು. ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಸುಮಾರು 4,500 ಕೋಟಿ ಅನುದಾನ ನೀಡಿದೆ. ಅಗತ್ಯವಿರುವ ಅನೇಕ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದು, ಅನುದಾನದ ವಿಚಾರದಲ್ಲಿ ತಮಗೆ ಯಾವುದೇ ಅಸಮಾಧಾನ ಇಲ್ಲ ಎಂದು ತಿಳಿಸಿದರು.

## 899.35 ಕೋಟಿ ಬ್ಯಾಂಕ್ ಸಾಲ ದುರ್ಬಳಕೆ ಆರೋಪ

• **ಉದಯವಾಹಿನಿ, ಬೆಂಗಳೂರು**

ಎಸ್‌ಬಿಐ ಬ್ಯಾಂಕ್ ಒಕ್ಕೂಟಕ್ಕೆ 899.35 ಕೋಟಿ ರೂ. ವಂಚನೆ ಹಾಗೂ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಡಿ ಅಧಿಕಾರಿಗಳು ದೀಪಕ್ ಕೇಬಲ್ ಲಿ. ನಿರ್ದೇಶಕರ ಆಸ್ತಿಯನ್ನು ಜಪ್ತಿ ಮಾಡಿದ್ದಾರೆ. ಮಾರುಕಟ್ಟೆ ಮೌಲ್ಯದ ಸುಮಾರು 150 ಕೋಟಿ ರೂ. ಆಸ್ತಿಯನ್ನು ಜಪ್ತಿ ಮಾಡಲಾಗಿದೆ. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ. ವೆಂಕಟೇಶ್ವರ ರಾವ್, ನಿರ್ದೇಶಕಿ ಸತ್ಯವತಿ ಬಾಲ್ ಹಾಗೂ ಸಹವರ್ತಿ ಸಂಸ್ಥೆಗಳ ಹೆಸರಿನಲ್ಲಿರುವ ಸ್ಥಿರಾಸ್ತಿಯನ್ನು ಜಪ್ತಿ ಮಾಡಲಾಗಿದೆ. ಕಂಪನಿ ವಿರುದ್ಧ ಬ್ಯಾಂಕ್ ಸಾಲ ಪಡೆದು ಆ ಹಣವನ್ನು ಅಕ್ರಮವಾಗಿ ಬೇರೆಡೆಗೆ ವರ್ಗಾಯಿಸಿ, ದುರುಪಯೋಗ ಪಡಿಸಿಕೊಂಡ ಆರೋಪ ಕೇಳಿ ಬಂದಿತ್ತು. ಈ ಆರೋದ ಮೇಲೆ ಈ ವರ್ಷ ಮೇ ತಿಂಗಳಲ್ಲಿ ದೀಪಕ್ ಕೇಬಲ್ಸ್ ಮೇಲೆ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದರು. ಈ ವೇಳೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲನೆ ನಡೆಸಿದ್ದರು.ಅಲ್ಲದೇ ಕೋಟ್ಯಂತರ ರೂ. ಹಣ, ಆಸ್ತಿ ಜಪ್ತಿ ಮಾಡಲಾಗಿತ್ತು. ಇದೇ ವೇಳೆ ಕಂಪನಿ ಎಂಡಿ ವೆಂಕಟೇಶ್ವರ ರಾವ್ ಅವರನ್ನು ಬಂಧಿಸಲಾಗಿತ್ತು.

## ತಿಮ್ಮಾಪುರ್-ನಂಜಯ್ಯಮಠ ಆಡಿಯೋ ಬಗ್ಗೆ ಛಲವಾದಿ ದೂರು ಕೊಡಲಿ: ಪ್ರಿಯಾಂಕ್ ಖರ್ಗೆ

• **ಉದಯವಾಹಿನಿ, ಬೆಂಗಳೂರು**

ಮಾಜಿ ಸಚಿವ ತಿಮ್ಮಾಪುರ್-ನಂಜಯ್ಯಮಠ ಆಡಿಯೋ ವಿಚಾರವಾಗಿ ಛಲವಾದಿ ನಾರಾಯಣಸ್ವಾಮಿ ಅವರು ದೂರು ಕೊಡಲಿ ಅಂತ ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಆಡಿಯೋ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ತಿಮ್ಮಾಪುರ್ ಮತ್ತು ನಂಜಯ್ಯಮಠ ಸ್ಪಷ್ಟವಾಗಿ ಹೇಳಿದ್ದಾರೆ. ಆಡಿಯೋ ಛಲವಾದಿ ನಾರಾಯಣಸ್ವಾಮಿ ಅವರ ಬಳಿ ಇದೆ. ನಾನೇ ಈಗ ಗೃಹ ಸಚಿವ. ನನಗೆ ದೂರು ಕೊಡಿ. ಫಾರೆನ್ಸಿಕ್ ಲ್ಯಾಬ್‌ಗೆ ಕಳಿಸಿ ರಿಪೋರ್ಟ್ ತರಿಸುತ್ತೇನೆ. ನಿಮಗೆ ಎಲ್ಲಿಂದ ಬಂತು ಅಂತ ನೀವು ಹೇಳಿ, ಅವರು ಮಾತಾಡಿದ್ದಾರಾ ಇಲ್ಲವಾ ನಾನು ಹೇಳ್ತೀನಿ ಎಂದಿದ್ದಾರೆ. ಒಂದು ಕಂಪ್ಲೆಂಟ್ ಕೊಡಿ. ಸುಮ್ಮನೆ ಆಡಿಯೋ ಸಿಕ್ಕಿದೆ ಅಂತ ನಾವು ರಿಯಾಕ್ಟ್ ಮಾಡೋದು ಸರಿಯಲ್ಲ. ನಾರಾಯಣಸ್ವಾಮಿ ನನ್ನ ಬೆಸ್ಟ್ ಫ್ರೆಂಡ್, ದೂರು ಕೊಡಲಿ. ಅವರು ಹೇಳಿದ್ದನ್ನು ನಾವು ಗಂಭೀರವಾಗಿ ತಗೋಬೇಕು.

## ಸಿದ್ದರಾಮಯ್ಯ ಮೇಲೆ ಅಹಿಂದ ಶಾಸಕರ ಅಸಮಾಧಾನ

• **ಉದಯವಾಹಿನಿ, ಬೆಂಗಳೂರು**



ಸಂಪುಟ ಪುನಾರಚನೆ ಬೆನ್ನಲ್ಲೇ ಕರ್ನಾಟಕ ಕಾಂಗ್ರೆಸ್‌ನಲ್ಲಿ ಅಸಮಾಧಾನ ಸ್ಫೋಟಗೊಂಡಿದೆ. ಸಚಿವ ಸ್ಥಾನ ಸಿಕ್ಕಿಲ್ಲವೆಂದು ಹಲವು ಹಿರಿಯ-ಕಿರಿಯ ಶಾಸಕರು ಬೇಸರಗೊಂಡಿದ್ದು, ಅವರನ್ನ ಮನವೊಲಿಸುವ ಯತ್ನವೂ ಸಹ ನಡೆದಿದೆ. ಇದರ ಮಧ್ಯೆ ಇನ್ನೊಂದೆಡೆ ಅಹಿಂದ ಶಾಸಕರು ಮಾಜಿ ಸಿಎಂ ಸಿದ್ದರಾಮಯ್ಯ ಮೇಲೆ ಅಸಮಾಧಾನಗೊಂಡಿದ್ದಾರೆ. ಅದರಲ್ಲೂ ಮುಖ್ಯವಾಗಿ ತೀವ್ರ ಬೇಸರಗೊಂಡಿರುವ ಹೆಚ್ ಸಿ ಮಹದೇವಪ್ಪ ಅವರು ದೆಹಲಿಗೆ ಹಾರಿದ್ದಾರೆ. ಸಚಿವ ಸ್ಥಾನಕ್ಕೆ ಸಿದ್ದರಾಮಯ್ಯನವರು ತಮ್ಮ ಹೆಸರು ಶಿಫಾರಸು ಮಾಡಿದ್ದಾರೆ ಎಂದು ಹಲವು ಶಾಸಕರು ನಂಬಿದ್ದರು. ಆದ್ರೆ, ಸುರ್ಜೆವಾಲಾ ಜೊತೆಗೆ ಚರ್ಚೆ ವೇಳೆ ರಾಜ್ಯ ನಾಯಕರು ಶಿಫಾರಸು ಮಾಡಿದ್ದ ಹೆಸರುಗಳು ಬಹಿರಂಗವಾಗಿದ್ದು, ಈ ವೇಳೆ ಸಿದ್ದರಾಮಯ್ಯ ಕೆಲವೇ ಕೆಲವು ಹೆಸರುಗಳನ್ನು ಮಾತ್ರ ಶಿಫಾರಸು ಮಾಡಿದ್ದರು ಎನ್ನುವುದು ಗೊತ್ತಾಗಿದೆ. ಅಹಿಂದ ಶಾಸಕರ ಪರವಾಗಿ ಸಿದ್ದರಾಮಯ್ಯ ಪ್ರಬಲವಾದ ಮಂಡಿಸಿಲ್ಲ. ಸಿದ್ದರಾಮಯ್ಯ ತಮಗೆ ಸಚಿವ ಸ್ಥಾನ ಕೊಡಿಸುತ್ತಾರೆ ಎನ್ನುವ ನಂಬಿಕೆ ಇಟ್ಟುಕೊಂಡಿದ್ದರು. ಸಚಿವ ಸ್ಥಾನಕ್ಕೆ ತಮ್ಮ ಹೆಸರುಗಳನ್ನ ಶಿಫಾರಸ್ಸು ಮಾಡಿಲ್ಲ ಎನ್ನುವುದು ಗೊತ್ತಾಗುತ್ತಿದ್ದಂತೆಯೇ ಸಿದ್ದರಾಮಯ್ಯನವರ ನಡೆಗೆ ಅಸಮಾಧಾನಗೊಂಡಿದ್ದಾರೆ.

ಸಚಿವ ಸ್ಥಾನ ವಂಚಿತರ ಆಕ್ರೋಶ ಒಂದೆಡೆಯಾದರೆ, ಮತ್ತೊಂದೆಡೆ ಖಾತೆ ಹಂಚಿಕೆಯ ಕಗ್ಗಂಟು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ಹಿರಿಯ ನಾಯಕರನ್ನು ಕಾಡುತ್ತಿದೆ. ಸಚಿವ ಸ್ಥಾನ ಸಿಗದ ಕಾರಣಕ್ಕಾಗಿ ಬೆಂಗಳೂರಿನಲ್ಲಿ ಎಂ.ಕೃಷ್ಣಪ್ಪ, ಕೋಲಾರದಲ್ಲಿ ಎಸ್.ಎನ್.ನಾರಾಯಣ ಸ್ವಾಮಿ, ಕೆ.ವೈ.ನಂಜೇಗೌಡ, ಚಿಕ್ಕಬಳ್ಳಾಪುರದಲ್ಲಿ ಎಸ್.ಎನ್.ಸುಬ್ಬಾರೆಡ್ಡಿ, ರಾಯಚೂರಿನಲ್ಲಿ ಹಂಪನಗೌಡ ಬಾದರ್ಲಿ, ಬೆಳಗಾವಿಯಲ್ಲಿ ಲಕ್ಷ್ಮೀ ಹೆಬ್ಬಾಳ್ಕರ್, ಬಾಗಲಕೋಟೆಯಲ್ಲಿ ಆರ್.ಬಿ.ತಿಮ್ಮಾಪೂರ್ ಸೇರಿದಂತೆ ಹಲವರ ಸಿಟ್ಟು ತಣ್ಣಗಾಗಿಲ್ಲ. ಕರ್ನಾಟಕ ಕಾಂಗ್ರೆಸ್‌ನಲ್ಲಿ ಸಚಿವ ಸಂಪುಟ ವಿಸ್ತರಣೆಯ ಬಳಿಕ ಹಲವು ನಾಯಕರಿಗೆ ಉಂಟಾಗಿರುವ ಅಸಮಾಧಾನವನ್ನು ತಣಿಸಲು ಪಕ್ಷದ ಹೈಕಮಾಂಡ್ ಡ್ಯಾಮೇಜ್ ಕಂಟ್ರೋಲ್ ಕಾರ್ಯಾಚರಣೆ ಆರಂಭಿಸಿದೆ. ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ನೇತೃತ್ವದ ಸಚಿವ ಸಂಪುಟ ವಿಸ್ತರಣೆಯ ಎರಡು ದಿನಗಳ ಬಳಿಕ, ಎಐಸಿಸಿ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ಸಚಿವ ಸ್ಥಾನದಿಂದ ಕೈಬಿಡಲಾದ ಹಿರಿಯ ನಾಯಕರಾದ ಹೆಚ್.ಕೆ. ಪಾಟೀಲ್, ದಿನೇಶ್ ಗುಂಡೂರಾವ್ ಹಾಗೂ ಟಿ.ಬಿ. ಜಯಚಂದ್ರ ಅವರನ್ನು ಭೇಟಿ ಮಾಡಿ ಸಮಾಧಾನಪಡಿಸುವ ಪ್ರಯತ್ನ ನಡೆಸುತ್ತಿದ್ದಾರೆ. ಅವರು ಪಕ್ಷದ ಹಿರಿಯ ನಾಯಕರು. ನಾನು ಅವರೊಂದಿಗೆ ಮಾತುಕತೆ ನಡೆಸುತ್ತಿದ್ದೇನೆ ಎಂದು ಬಿ ಕೆ ಹರಿಪ್ರಸಾದ್ ತಿಳಿಸಿದ್ದಾರೆ. ಪಕ್ಷದೊಳಗಿನ ಬಿಕ್ಕಟ್ಟು ನಿರ್ವಹಣೆಯ ಭಾಗವಾಗಿ ಗುರುವಾರ ಇನ್ನಷ್ಟು ನಾಯಕರನ್ನು ಭೇಟಿ ಮಾಡುವ ಕಾರ್ಯಕ್ರಮವಿದೆ ಎಂದು ಅವರು ಹೇಳಿದ್ದಾರೆ.

## ಸಚಿವ ಸ್ಥಾನ ಸಿಗದ ಆಕ್ರೋಶ ಜೆಡಿಎಸ್ ಘರ್ ವಾಪ್ಸಿಯ ಮುನ್ಸೂಚನೆ ಕೊಟ್ರಾ 'ಕಾಂಗ್ರೆಸ್ ತಾಲ್ಲೂಕು ತಮ್ಮ ಶಾಸಕ'?

# ಕೈ ಜಾರಿದ ಮಂತ್ರಿಸ್ಥಾನ ಭುಗಿಲೆದ್ದ ಅಸಮಾಧಾನ

### ಆರು ಬಾರಿ ಶಾಸಕರಾದರೂ ಸಚಿವ ಸ್ಥಾನದ ಭಾಗ್ಯವಿಲ್ಲ

ತುಮಕೂರು ಜಿಲ್ಲೆಯ ಗುಬ್ಬಿ ಕ್ಷೇತ್ರದ ಶಾಸಕರಾಗಿರುವ ಎಸ್.ಆರ್. ಶ್ರೀನಿವಾಸ್ ಮೂಲತಃ, ಜೆಡಿಎಸ್ ಪಾರ್ಟಿಯಿಂದ ಮೂರು ಬಾರಿ ಶಾಸಕರಾದವರು. 2004ರಿಂದ ಸತತವಾಗಿ ಚುನಾವಣೆ ಗೆದ್ದು ಬರುತ್ತಿರುವ ಶ್ರೀನಿವಾಸ್, ಮೊದಲು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಕಂಡವರು. ಇದಾದ ನಂತರ, 2008, 2013 ಮತ್ತು 2018ರ ಚುನಾವಣೆಯಲ್ಲಿ ಜೆಡಿಎಸ್ ಟಿಕೆಟಿನಿಂದ ಸ್ಪರ್ಧಿಸಿ ಗೆಲುವು ಕಂಡವರು. ಇದಾದ ನಂತರ, ಎಚ್.ಡಿ.ಕುಮಾರಸ್ವಾಮಿ ಜೊತೆ ಮನಸ್ತಾಪವಾಗಿ ಇವರು, ಕಳೆದ ಅಂದರೆ 2023ರ ಚುನಾವಣೆಯಲ್ಲಿ ಕಾಂಗ್ರೆಸ್ಸಿನಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು.

### ನನ್ನನ್ನು ಮಂತ್ರಿಯನ್ನಾಗಿ ಮಾಡಿದ್ದು ಕುಮಾರಸ್ವಾಮಿ ಒಬ್ಬರೇ

ಒಕ್ಕಲಿಗ ಸಮುದಾಯದ ಗುಬ್ಬಿ ಶ್ರೀನಿವಾಸ್ ಎಂದೇ ಹೆಸರಾಗಿರುವ ಇವರು, ಸಚಿವರಾಗಿಯೂ ಕೆಲಸ ನಿರ್ವಹಿಸಿದ್ದರು. 2018ರ ಜೆಡಿಎಸ್ - ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ, ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ವೇಳೆ, ಪ್ರಾಥಮಿಕ ಶಿಕ್ಷಣ ಸಚಿವರಾಗಿದ್ದವರು. 2023ರ ಚುನಾವಣೆ ಗೆದ್ದ ವೇಳೆ, ಇವರಿಗೆ ಸಚಿವ ಸ್ಥಾನದ ಗ್ಯಾರಂಟಿಯನ್ನು ನೀಡಲಾಗಿತ್ತು. ಅದು ಈಡೇರಿರಲಿಲ್ಲ, ಬದಲಿಗೆ ಅವರಿಗೆ ನಿಗಮ ಮಂಡಳಿಯ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಡಿಕೆ ಶಿವಕುಮಾರ್ ಅವರ ಸಚಿವ ಸಂಪುಟ ವಿಸ್ತರಣೆಯ ವೇಳೆಯೂ, ಅವರಿಗೆ ಸ್ಥಾನ ಸಿಗಲಿಲ್ಲ. ಈಗ, ನನ್ನನ್ನು ಮಂತ್ರಿಯನ್ನಾಗಿ ಮಾಡಿದ್ದು ಕುಮಾರಸ್ವಾಮಿ ಒಬ್ಬರೇ ಎಂದು ಶ್ರೀನಿವಾಸ್ ಹೇಳಿದ್ದಾರೆ. ಆ ಮೂಲಕ, ತಮ್ಮ ಮುಂದಿನ ಹೆಜ್ಜೆ ಜೆಡಿಎಸ್ ಕಡೆ ಎನ್ನುವ ಸಂದೇಶವನ್ನು ಕಾಂಗ್ರೆಸ್ ನಾಯಕರಿಗೆ ರವಾನಿಸಲು ಮುಂದಾದ್ರಾ ಎನ್ನುವ ಚರ್ಚೆ ಆರಂಭವಾಗಿದೆ.





**ಡಿಕೆ ಶಿ ಸಚಿವ ಸಂಪುಟ ವಿಸ್ತರಣೆಯ ವೇಳೆಯೂ, ಸ್ಥಾನ ಸಿಗಲಿಲ್ಲ**

- ಹಿರಿಯ ನಾಯಕರ ಮುನಿಸು, ಕಾಂಗ್ರೆಸ್'ಡ್ಯಾಮೇಜ್ ಕಂಟ್ರೋಲ್'
- ಮನವೊಲಿಕೆಗೆ ಸಿಎಂ, ಸುರ್ಜೇವಾಲಾ, ಹರಿಪ್ರಸಾದ್ ದೌಡು
- ಒಂದೆಡೆ ಸಚಿವ ಸ್ಥಾನ ವಂಚಿತರ ಆಕ್ರೋಶ,
- ಖಾತೆ ಹಂಚಿಕೆ ಕಗ್ಗಂಟು



• **ಉದಯವಾಹಿನಿ, ಬೆಂಗಳೂರು**

ಗದಗ ಜಿಲ್ಲೆಯ ಹುಲಕೋಟಿಯಲ್ಲಿ ಹೆಚ್.ಕೆ. ಪಾಟೀಲ್ ಅವರನ್ನು ಸಚಿವ ಸಂಪುಟದಿಂದ ಕೈಬಿಟ್ಟಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತವಾಗುತ್ತಿದೆ. ದಿನೇಶ್ ಗುಂಡೂರಾವ್ ಕೂಡ ತಮಗೆ ಸಚಿವ ಸ್ಥಾನ ಏಕೆ ನೀಡಲಿಲ್ಲ ಎಂಬುದನ್ನು ಯಾರೂ ವಿವರಿಸಿಲ್ಲ ಎಂದು ಬಹಿರಂಗವಾಗಿ ಹೇಳಿದ್ದು, ಬೆಂಗಳೂರಿನ ಗಾಂಧಿನಗರ ಕ್ಷೇತ್ರದಲ್ಲೂ ಅವರ ಬೆಂಬಲಿಗರು ಅಸಮಾಧಾನಗೊಂಡಿದ್ದಾರೆ. ಆಳಂದ ಶಾಸಕ ಬಿ.ಆರ್. ಪಾಟೀಲ್ ತಮ್ಮ ಬೆಂಬಲಿಗರಿಗೆ ಬರೆದ ಪತ್ರದಲ್ಲಿ, ನಾನು ಇನ್ನೂ ಭರವಸೆ ಕಳೆದುಕೊಂಡಿಲ್ಲ ಎಂದು ಹೇಳುತ್ತಾ, ತಮ್ಮ 50 ವರ್ಷಗಳ ರಾಜಕೀಯ ಜೀವನ ಹಾಗೂ ರಾಹುಲ್ ಗಾಂಧಿ ರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದ ಆಳಂದದ 'ಮತ ಕಳವು' ಪ್ರಕರಣದಲ್ಲಿನ ತಮ್ಮ ಪಾತ್ರವನ್ನು ಉಲ್ಲೇಖಿಸಿದ್ದಾರೆ. ಕಾಂಗ್ರೆಸ್‌ನಲ್ಲಿ ಸಚಿವ ಸ್ಥಾನದಿಂದ ವಂಚಿತರಾದವರ ಪಟ್ಟಿ ದೊಡ್ಡದಾಗಿದೆ. ಹಿರಿಯ ನಾಯಕರಾದ ಆರ್.ವಿ. ದೇಶಪಾಂಡೆ ಹಾಗೂ ಎಂ. ಕೃಷ್ಣಪ್ಪ ಸೇರಿದಂತೆ ಹಲವರಿಗೆ ಸಚಿವ ಸ್ಥಾನ ಸಿಕ್ಕಿಲ್ಲ. ಇವರಲ್ಲಿ ಪ್ರತಿಯೊಬ್ಬರನ್ನೂ ವೈಯಕ್ತಿಕವಾಗಿ ಭೇಟಿ ಮಾಡಿ ಮನವೊಲಿಸುವ ಪ್ರಯತ್ನ ನಡೆಸಲು ಪಕ್ಷ ನಿರ್ಧರಿಸಿದ್ದು, ಈ ಪ್ರಕ್ರಿಯೆಗೆ ಕನಿಷ್ಠ ಒಂದು ತಿಂಗಳು ಬೇಕಾಗಬಹುದು ಎಂದು ಮೂಲಗಳು ತಿಳಿಸಿವೆ.

ಪಕ್ಷಕ್ಕೆ ಆಗುವ ಡ್ಯಾಮೇಜ್ ಕಂಟ್ರೋಲ್ ನಿಯಂತ್ರಣಕ್ಕೆ ತಂತ್ರ ಎರಡು ಹಂತಗಳಲ್ಲಿ ನಡೆಯುತ್ತಿದೆ. ಅಸಮಾಧಾನಗೊಂಡಿರುವ ಶಾಸಕರು ಸಾಮಾಜಿಕ ಜಾಲತಾಣಗಳಲ್ಲಿ ಅಸಮಾಧಾನ ವ್ಯಕ್ತಪಡಿಸದೆ, 2028ರ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿಗಾಗಿ ಕೆಲಸ ಮಾಡುವಂತೆ ಹಿರಿಯ ನಾಯಕರು ಖಾಸಗಿಯಾಗಿ ಮನವಿ ಮಾಡುತ್ತಿದ್ದಾರೆ. ಮತ್ತೊಂದೆಡೆ, ಹೈಕಮಾಂಡ್‌ನ ಪ್ರತಿನಿಧಿಗಳು ನೇರವಾಗಿ ಅವರ ನಿವಾಸಗಳಿಗೆ ಭೇಟಿ ನೀಡಿ ಸಮಾಧಾನಪಡಿಸುತ್ತಿದ್ದಾರೆ. ಈ ಮಟ್ಟದ ಸಂಪರ್ಕ ಅಭಿಯಾನವೇ ಇತ್ತೀಚಿನ ಸಂಪುಟ ವಿಸ್ತರಣೆ ಪಕ್ಷದೊಳಗೆ ಎಷ್ಟು ಅಸಮಾಧಾನ ಮೂಡಿಸಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.


ಜನಾಭಿಪ್ರಾಯದ ದೃಷ್ಟಿಯಿಂದ ಇದು ಪಕ್ಷಕ್ಕೆ ದೊಡ್ಡ ಹಿನ್ನಡೆ. ಇದು ಅತ್ಯಂತ ಕೆಟ್ಟ ಸಂದೇಶ ನೀಡುತ್ತಿದೆ ಎಂದು ರಾಜಕೀಯ ವಿಶ್ಲೇಷಕ ಬಿ.ಎಸ್. ಮೂರ್ತಿ ಅಭಿಪ್ರಾಯಪಟ್ಟಿದ್ದಾರೆ. ಆಡಳಿತದ ಸಾಧನೆಗಳನ್ನು ಜನರಿಗೆ ತಲುಪಿಸುವ ಬದಲು ಪಕ್ಷದ ಉನ್ನತ ನಾಯಕರು ತಮ್ಮದೇ ಹಿರಿಯ ನಾಯಕರನ್ನು ಸಮಾಧಾನಪಡಿಸುವ ಪರಿಸ್ಥಿತಿ ಎದುರಾಗಿರುವುದನ್ನು ಅವರು ಉಲ್ಲೇಖಿಸಿದ್ದಾರೆ.

### ಬಂಗಾರಪೇಟೆ ಬಂದ್

ರಾಜ್ಯ ಸಚಿವ ಸಂಪುಟ ವಿಸ್ತರಣೆಯಾದ ಬೆನ್ನಲ್ಲೆ ಸಚಿವ ಸ್ಥಾನ ಸಿಗದ ಶಾಸಕರ ಅಸಮಾಧಾನ ಮುಂದುವರೆದಿದೆ. ಕೋಲಾರ ಚಿಕ್ಕಬಳ್ಳಾಪುರದಲ್ಲಿ ಆಕ್ರೋಶ ವ್ಯಕ್ತವಾಗಿದ್ದು ಬಂಗಾರಪೇಟೆ ಪಟ್ಟಣವನ್ನ ಬಂದ್ ಮಾಡಲಾಗಿದೆ. ಬಂಗಾರಪೇಟೆ ಶಾಸಕ ಎಸ್.ಎನ್.ನಾರಾಯಣಸ್ವಾಮಿಗೆ ಸಚಿವ ಸ್ಥಾನ ಕೈತಪ್ಪಿದ್ದಕ್ಕೆ ಅಸಮಾಧಾನ ಭುಗಿಲೆದ್ದಿದ್ದು . ಇಂದು ಬಂಗಾರಪೇಟೆ ಬಂದ್‌ಗೆ ಬೆಂಬಲಿಗರು ಹಾಗೂ ಕಾರ್ಯಕರ್ತರು ಕರೆ ನೀಡಿವೆ. ತುರ್ತು ಸೇವೆ ಹೊರತು ಪಡಿಸಿ ಉಳಿದೆಲ್ಲಾ ಸೇವೆಗಳು ಬಂದ್ ಆಗಿದ್ದು ಅಂಗಡಿ ಮುಂಗಟ್ಟುಗಳು ಮುಚ್ಚಿವೆ.

### ಹೆಬ್ಬಾಳ್ಕರ್ ಪರ ಬೀದಿಗಿಳಿದ ಅಭಿಮಾನಿಗಳು

ಬೆಳಗಾವಿ ಗ್ರಾಮೀಣ ಕ್ಷೇತ್ರದ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಸಚಿವ ಸ್ಥಾನ ಕೈ ತಪ್ಪಿರುವ ಹಿನ್ನೆಲೆಯಲ್ಲಿ ಆಕ್ರೋಶ ಮತ್ತಷ್ಟು ಭುಗಿಲೆದ್ದಿದೆ. ಅವರ ಅಭಿಮಾನಿಗಳು ಪಂಜಿನ ಮೆರವಣಿಗೆ ನಡೆಸಿ, ತಮ್ಮ ನಾಯಕಿಗೆ ಮಂತ್ರಿಗಿರಿ ನೀಡುವಂತೆ ಒತ್ತಾಯಿಸಿದರು. ಬೆಳಗಾವಿ ತಾಲ್ಲೂಕಿನ ಹಿರೇಬಾಗೇವಾಡಿ ಗ್ರಾಮದಲ್ಲಿ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಅಡಿವೇಶ ಇಟಗಿ ನೇತೃತ್ವದಲ್ಲಿ ಇಲ್ಲಿನ ಬಸವೇಶ್ವರ ವೃತ್ತದಿಂದ ರಾಷ್ಟ್ರೀಯ ಹೆದ್ದಾರಿವರೆಗೆ ಕೈ ಕಾರ್ಯಕರ್ತರು, ಮುಖಂಡರು ಪಂಜಿನ ಮೆರವಣಿಗೆ ನಡೆಸಿದರು. ಕೈಯಲ್ಲಿ ಲಕ್ಷ್ಮೀ ಹೆಬ್ಬಾಳ್ಕರ್ ಭಾವಚಿತ್ರದ ಪೋಸ್ಟರ್, ಪಂಜು ಹಿಡಿದು ಪ್ರತಿಭಟಿಸಿದ ಬೆಂಬಲಿಗರು ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ನಮ್ಮ ಅಕ್ಕನಿಗೆ ಮಂತ್ರಿ ಸ್ಥಾನ ಕೊಡಲೇಬೇಕು ಅಂತಾ ಘೋಷಣೆ ಕೂಗಿದರು. ಬಸವೇಶ್ವರ ವೃತ್ತದಿಂದ ಮುಂದೆ ರಾಷ್ಟ್ರೀಯ ಹೆದ್ದಾರಿ ತಡೆಯಲು ಪ್ರತಿಭಟನಾಕಾರರು ಮುಂದಾದರು. ಈ ವೇಳೆ, ಪೊಲೀಸರು ಅವರನ್ನು ತಡೆದರು. ಆಗ ಪೊಲೀಸರ ಜೊತಗೆ ಹೆಬ್ಬಾಳ್ಕರ್ ಬೆಂಬಲಿಗರು ಮಾತಿನ ಚಕಮಕಿ ಕೂಡ ನಡೆಸಿದರು.ಪ್ರತಿಭಟನೆಯ ನೇತೃತ್ವ ವಹಿಸಿದ್ದ ಅಡಿವೇಶ ಇಟಗಿ ಮಾತನಾಡಿ, ಲಕ್ಷ್ಮೀ ಹೆಬ್ಬಾಳ್ಕರ್ ಅವರು ಕರ್ನಾಟಕ ರಾಜ್ಯ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಪಕ್ಷದ ಸಂಘಟನೆಗೂ ಮಹತ್ವದ ಕೊಡುಗೆ ನೀಡಿದ್ದಾರೆ. ಅವರ ಅನುಭವ, ಜನಪರ ಕಾರ್ಯ ಹಾಗೂ ಪಕ್ಷದ ನಿಷ್ಠೆಯನ್ನು ಪರಿಗಣಿಸಿ ಸಚಿವ ಸ್ಥಾನ ನೀಡುವುದು ನ್ಯಾಯಸಮ್ಮತ. ರಾಜ್ಯದ ಜನರ ಆಶಯವನ್ನು ಕಾಂಗ್ರೆಸ್ ಹೈಕಮಾಂಡ್ ಗೌರವಿಸಿ, ಶೀಘ್ರದಲ್ಲೇ ಅವರಿಗೆ ಸಚಿವ ಸ್ಥಾನ ಘೋಷಿಸಬೇಕು. ಇಲ್ಲವಾದರೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.



### ಖಾತೆ ಹಂಚಿಕೆ ಇಲ್ಲ: ಅಶೋಕ



ನೂತನ ಸಚಿವರ ಪ್ರಮಾಣ ವಚನ ಸ್ವೀಕಾರ ಮುಗಿದು ಮೂರು ದಿನಗಳೇ ಕಳೆದಿವೆ. ಆದರೆ ಖಾತೆಗಳ ಹಂಚಿಕೆಯಾಗಿಲ್ಲ. ಪೇಮೆಂಟ್ ಆಗಿಲ್ಲವೆಂದು ತಡೆ ಹಿಡಿದಿದ್ದೀರೋ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಶ್ನಿಸಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅಶೋಕ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು 'ಡಮ್ಮಿ ಸಿಎಂ',' ರಬ್ಬರ್ ಸ್ಟ್ಯಾಂಪ್' ಸಿಎಂ ಎಂದು ಲೇವಡಿ ಮಾಡಿದ್ದಾರೆ. 'ನೂತನ ಸಚಿವರ ಪ್ರಮಾಣ ವಚನ ಸ್ವೀಕಾರ ಮುಗಿದು ಮೂರು ದಿನಗಳೇ ಕಳೆದಿವೆ.

## ಎಸ್‌ಐಆರ್ ಗಡುವು ವಿಸ್ತರಣೆಗೆ ಸಚಿವ ಮಾಗಡಿ ಬಾಲಕೃಷ್ಣ ಆಗ್ರಹ

• **ಉದಯವಾಹಿನಿ, ಬೆಂಗಳೂರು**

ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ಕನಿಷ್ಠ ಒಂದು ತಿಂಗಳ ಕಾಲ ವಿಸ್ತರಣೆ ಮಾಡಬೇಕು. ಬೂತ್ ಮಟ್ಟದ ಅಧಿಕಾರಿಗಳಿಗೆ (ಬಿಎಲ್‌ಒ) ಸಮರ್ಪಕ ತರಬೇತಿ ನೀಡದ ಕಾರಣ ರಾಜ್ಯದ ಹಲವು ಕಡೆ ತಾಂತ್ರಿಕ ಹಾಗೂ ಆಡಳಿತಾತ್ಮಕ ಗೊಂದಲಗಳು ಉಂಟಾಗಿವೆ ಎಂದು ನೂತನ ಸಚಿವ ಮಾಗಡಿ ಬಾಲಕೃಷ್ಣ ಹೇಳಿದ್ದಾರೆ. ಕೆಪಿಸಿಸಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಎಲ್‌ಒಗಳಿಗೆ ಸಮರ್ಪಕ ತರಬೇತಿ ನೀಡಲಾಗಿಲ್ಲ. ಅನೇಕ ಕಡೆಗಳಲ್ಲಿ ಮಾಹಿತಿ ಅಪ್ಲೋಡ್ ಮಾಡಲು ಸಾಧ್ಯವಾಗುತ್ತಿಲ್ಲ. ಅಧಿಕಾರಿಗಳೇ ಸ್ವತಃ ಕಲಿತು ಕೆಲಸ ಮಾಡುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ಸಾರ್ವಜನಿಕರ ಮತದಾನದ ಹಕ್ಕು ರಕ್ಷಣೆ ಆಗಬೇಕಾದರೆ. ಎಸ್‌ಐಆರ್ ಪ್ರಕ್ರಿಯೆಯನ್ನು ಕನಿಷ್ಠ ಒಂದು ತಿಂಗಳ ಕಾಲ ವಿಸ್ತರಣೆ ಮಾಡಬೇಕು ಎಂದು ಒತ್ತಾಯಿಸಿದರು.

ಎಸ್‌ಐಆರ್ ಪ್ರಕ್ರಿಯೆ ಕರ್ನಾಟಕದಲ್ಲಿ ಮಾತ್ರ ನಡೆಯುತ್ತಿಲ್ಲ. ದೇಶದ ವಿವಿಧ ರಾಜ್ಯಗಳಲ್ಲೂ ನಡೆದಿದೆ. ಆದರೆ ಕರ್ನಾಟಕದಲ್ಲಿ ಹಲವು ತಾಂತ್ರಿಕ ಹಾಗೂ ಪ್ರಾಯೋಗಿಕ ಸಮಸ್ಯೆಗಳು ಎದುರಾಗಿವೆ. ಆದ್ದರಿಂದ ಚುನಾವಣಾ ಆಯೋಗ ಈ ಪ್ರಕ್ರಿಯೆಗೆ ಹೆಚ್ಚುವರಿ ಕಾಲಾವಕಾಶ ನೀಡಬೇಕು ಎಂದು ಹೇಳಿದರು.ಬಿಡದಿ ಟೌನ್‌ಶಿಪ್ ವಿಚಾರವಾಗಿ ಬಿಜೆಪಿ ಪಾದಯಾತ್ರೆ ನಡೆಸುವ ಕುರಿತು ಪ್ರತಿಕ್ರಿಯಿಸಿದ ಅವರು, ಅವರಿಗೆ ಶುಗರ್, ಬಿಪಿ ಜಾಸ್ತಿಯಾಗಿರಬಹುದು.

ವಾಕಿಂಗ್ ಮಾಡುವುದು ಆರೋಗ್ಯಕ್ಕೆ ಒಳ್ಳೆಯದು. ಅಶೋಕ್, ನಿಖಿಲ್ ಸೇರಿದಂತೆ ಎಲ್ಲರೂ ಪಾದಯಾತ್ರೆ ಮಾಡಲಿ. ತಾವೇ ರೂಪಿಸಿದ ಯೋಜನೆ ವಿರುದ್ಧವೇ ಪಾದಯಾತ್ರೆ ಮಾಡುತ್ತೇವೆ ಎನ್ನುತ್ತಿದ್ದಾರೆ. ಅವರಿಗೆ ಶುಭವಾಗಲಿ, ವಾಕಿಂಗ್ ಮಾಡಿ ಆರೋಗ್ಯ ಸುಧಾರಿಸಿಕೊಳ್ಳಲಿ



ಎಂದು ವ್ಯಂಗ್ಯವಾಡಿದರು. ಇದೇ ವೇಳೆ ಮಾತನಾಡಿದ ಕುಣಿಗಲ್ ಶಾಸಕ ಡಾ. ಹೆಚ್.ಡಿ. ರಂಗನಾಥ್, ಎಸ್‌ಐಆರ್ ಪ್ರಕ್ರಿಯೆಯಲ್ಲಿ ವ್ಯಾಪಕ ಗೊಂದಲ ಉಂಟಾಗಿದೆ ಎಂದು ಆರೋಪಿಸಿದರು.

ಕುಣಿಗಲ್ ಕ್ಷೇತ್ರದಲ್ಲೇ ಸುಮಾರು 2.5 ಲಕ್ಷ ಮತದಾರರಿದ್ದಾರೆ. ಡಿಜಿಟಲ್ ದಾಖಲೆಯಲ್ಲಿ ಕೇವಲ 1.2 ಲಕ್ಷ ಮತದಾರರ ಮಾಹಿತಿ ಮಾತ್ರ ಇದೆ. ಸುಮಾರು 17 ಸಾವಿರ ಮತದಾರರ ವಿವರ ನ್ಯೂನತೆಯ ಪಟ್ಟಿಗೆ ಹೋಗಿದೆ. ಮತ್ತೊಂದು 17 ಸಾವಿರ ಮತದಾರರ ಮಾಹಿತಿ ಎಎಸ್‌ಡಿಡಿಒ ವಿಭಾಗಕ್ಕೆ ಹೋಗಿದೆ. ಸುಮಾರು 34 ಸಾವಿರ ಮತದಾರರ ಮಾಹಿತಿ ಗೊಂದಲದಲ್ಲಿದೆ. ಒಂದು ಕ್ಷೇತ್ರದಲ್ಲೇ ಇಷ್ಟೊಂದು ಸಮಸ್ಯೆ ಇದ್ದರೆ ರಾಜ್ಯದ ಸ್ಥಿತಿ ಏನಾಗಿರಬಹುದು ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಸುಮಾರು ಒಂದು ಕೋಟಿ ಮತದಾರರ ಮಾಹಿತಿ ಅಲಭ್ಯ ಸ್ಥಿತಿಗೆ ಹೋಗಿದೆ. ಈ ಗೊಂದಲಗಳನ್ನು ಚುನಾವಣಾ ಆಯೋಗ ತಕ್ಷಣ ಸರಿಪಡಿಸಬೇಕು. ಇಲ್ಲವಾದರೆ ಮತದಾನದ ಹಕ್ಕನ್ನೇ ಕಸಿದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ಎಚ್ಚರಿಸಿದರು.

ಮತದಾರರ ಮಾಹಿತಿ ದಾಖಲಿಸುವಲ್ಲಿ ಅನೇಕ ತಾಂತ್ರಿಕ ದೋಷಗಳಾಗಿವೆ ಎಂದು ಆರೋಪಿಸಿದ ಅವರು, ತಂದೆ-ತಾಯಿಯ ಹೆಸರು ದಾಖಲಿಸಬೇಕಾದಲ್ಲಿ ಚಿಕ್ಕಮ, ದೊಡ್ಡಮ ಸೇರಿದಂತೆ ಸಂಬಂಧವಿಲ್ಲದವರ ಹೆಸರುಗಳನ್ನು ದಾಖಲಿಸಲಾಗುತ್ತಿದೆ.

ಶಿವಮೊಗ್ಗದಲ್ಲಿರುವ ವ್ಯಕ್ತಿಯ ಹೆಸರು ಕುಣಿಗಲ್ ಕ್ಷೇತ್ರದಲ್ಲಿ ಕಾಣಿಸುತ್ತಿದೆ. ಇಂತಹ ತಾಂತ್ರಿಕ ದೋಷಗಳಿಂದ ಸಾಮಾನ್ಯ ಜನರಲ್ಲಿ ಚುನಾವಣಾ ಆಯೋಗದ ಮೇಲೆಯೇ ಅನುಮಾನ ಮೂಡಿದೆ ಎಂದು ಹೇಳಿದರು.

## ಡೀಪ್‌ಟೆಕ್ ಬೆಳವಣಿಗೆಗೆ 5 ಪ್ರಮುಖ ಅಡಿಪಾಯ: ಸಚಿವ ಪ್ರಿಯಾಂಕ್ ಖರ್ಗೆ

• **ಉದಯವಾಹಿನಿ, ಬೆಂಗಳೂರು**

ಪ್ರತಿಭೆಗೆ ಸಾಣೆ ಹಿಡಿಯುವ, ಸಂಶೋಧನೆಗೆ ಒತ್ತು ನೀಡುವ, ನವೋದ್ಯಮಗಳಿಗೆ ಬೆಂಬಲ, ಆಡಳಿತದಲ್ಲಿ ಹೊಸ ತಂತ್ರಜ್ಞಾನಗಳ ಅಳವಡಿಕೆ ಹಾಗೂ ಜಾಣ ಆಡಳಿತ ಎಂಬ 5 ಪ್ರಮುಖ ಅಡಿಪಾಯಗಳ ಮೇಲೆ ರಾಜ್ಯದಲ್ಲಿನ ಡೀಪ್‌ಟೆಕ್ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಾಗುವುದು ಎಂದು ಗೃಹ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಇ-ಆಡಳಿತ ಸಚಿವ ಪ್ರಿಯಾಂಕ್ ಖರ್ಗೆ ಅವರು ತಿಳಿಸಿದರು. ಸಾಫ್ಟ್‌ವೇರ್ ಹಾಗೂ ಸೇವಾ ಸಂಸ್ಥೆಗಳ ರಾಷ್ಟ್ರೀಯ ಒಕ್ಕೂಟವು (ನಾಸ್ಕಾಂ) ಗುರುವಾರ ನಗರದಲ್ಲಿ ಆಯೋಜಿಸಿದ್ದ 'ಫ್ಯೂಚರ್ ಫೋರ್ಜ್ ಚಾರ್ಟಿಂಗ್ ಇಂಡಿಯಾಸ್ ಡೀಪ್‌ಟೆಕ್ ಆರ್ಕಿಟೆಕ್ಚರ್' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸರ್ಕಾರ ಕೈಗಾರಿಕೆ ಹಾಗೂ ಶಿಕ್ಷಣ ಸಂಸ್ಥೆಗಳ ನಡುವಣ ನಿಕಟ ಸಹಭಾಗಿತ್ವವೇ ಕರ್ನಾಟಕವನ್ನ ದೇಶದ ಪ್ರಮುಖ ತಂತ್ರಜ್ಞಾನ ಕೇಂದ್ರವನ್ನಾಗಿ ರೂಪಿಸಿದ್ದು, ಇದೇ ಮಾದರಿ ಆಧರಿಸಿ ಕೃತಕ ಬುದ್ಧಿಮತ್ತೆ ಯಂತ್ರ ಕಲಿಕೆ (ಮಷಿನ್ ಲರ್ನಿಂಗ್-ಎಂಎಲ್), ರೋಬೋಟ್ ವಿಜ್ಞಾನ (ರೋಬೋಟಿಕ್ಸ್), ಕ್ವಾಂಟಮ್ ಕಂಪ್ಯೂಟಿಂಗ್ (ಕ್ಯುಸಿ) ಮತ್ತು ಜೈವಿಕ ತಂತ್ರಜ್ಞಾನದಂತಹ (ಬಿಟಿ) ಅತ್ಯಾಧುನಿಕ ಹಾಗೂ ಸುಧಾರಿತ ತಂತ್ರಜ್ಞಾನ (ಡೀಪ್‌ಟೆಕ್) ಕ್ಷೇತ್ರವನ್ನ ಬಲಪಡಿಸಲಾಗುವುದು ಎಂದರು.

ನಿಪುಣ ಕರ್ನಾಟಕ ಯೋಜನೆಯ ಮೂಲಕ ಕೃತಕ ಬುದ್ಧಿಮತ್ತೆ, ಸೈಬರ್ ಸುರಕ್ಷತೆ, ತಯಾರಿಕೆ ಹಾಗೂ ಜೀವ ವಿಜ್ಞಾನ ಕ್ಷೇತ್ರಗಳಲ್ಲಿ ಕೌಶಲ ಹಾಗೂ ಪ್ರತಿಭೆ ಅಭಿವೃದ್ಧಿಗೆ ಉತ್ತೇಜನ ನೀಡಲಾಗುತ್ತಿದೆ.

ಕೈಗಾರಿಕೆ ಹಾಗೂ ಶೈಕ್ಷಣಿಕ ಸಂಸ್ಥೆಗಳ ಸಹಭಾಗಿತ್ವದಲ್ಲಿ



ಸ್ಥಾಪಿಸಲಾಗಿರುವ ರಾಜ್ಯದ 20ಕ್ಕೂ ಹೆಚ್ಚು ಶ್ರೇಷ್ಠತಾ ಕೇಂದ್ರಗಳು ಸಂಶೋಧನೆಯನ್ನ ವಾಣಿಜ್ಯ ಉತ್ಪನ್ನಗಳಾಗಿ ಪರಿವರ್ತಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದು, ಇದುವರೆಗೆ 1,000 ಕ್ಕೂ ಹೆಚ್ಚು ಬೌದ್ಧಿಕ ಆಸ್ತಿ ಹಕ್ಕುಗಳು (ಸೃಷ್ಟಿಯಾಗಿವೆ.

ಎಲಿವೇಟ್ ಹಾಗೂ ಎಲಿವೇಟ್ ನೆಕ್ಸ್ಟ್ ಯೋಜನೆಗಳ ಮೂಲಕ 1,500 ನವೋದ್ಯಮಗಳಿಗೆ ಅನುದಾನ ನೀಡಲಾಗಿದ್ದು, ಡೀಪ್ ಟೆಕ್ ಸ್ಟಾರ್ಟ್‌ಅಪ್‌ಗಳಿಗೆ 1 ಕೋಟಿ ರೂ.ವರೆಗೆ ನೆರವು ನೀಡಿ, ಮಾರ್ಗದರ್ಶನ ಹಾಗೂ ಜಾಗತಿಕ ಮಾರುಕಟ್ಟೆಗಳ ಸಂಪರ್ಕ ಕಲ್ಪಿಸಲಾಗುತ್ತಿದೆ. ಸರ್ಕಾರವೂ ಹೊಸ ತಂತ್ರಜ್ಞಾನಗಳ ಮೊದಲ ಬಳಕೆದಾರನಾಗುವ 'ಗವರ್ನ್‌ಮೆಂಟ್ ಫಸ್ಟ್' ಪರಿಕಲ್ಪನೆಯಡಿ ಆರೋಗ್ಯ, ಕೃಷಿ, ನಗರಾಡಳಿತ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ನವೋದ್ಯಮಗಳು ಅಭಿವೃದ್ಧಿಪಡಿಸಿರುವ ಪರಿಹಾರಗಳನ್ನು ಪ್ರಯೋಗಾತ್ಮಕವಾಗಿ ಅಳವಡಿಸಿಕೊಳ್ಳುತ್ತಿದೆ.


ಇ-ಆಡಳಿತದಿಂದ ಜಾಣ ಆಡಳಿತ (ಐ-ಜಿ) ವ್ಯವಸ್ಥೆಯತ್ತ ರಾಜ್ಯ ಸಾಗುತ್ತಿದ್ದು, ಕೃತಕ ಬುದ್ಧಿಮತ್ತೆ ಹಾಗೂ ಡಿಜಿಟಲ್ ತಂತ್ರಜ್ಞಾನಗಳನ್ನು ಬಳಸಿಕೊಂಡು ಸಾರ್ವಜನಿಕ ಸೇವೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ, ದಕ್ಷ ರೀತಿಯಲ್ಲಿ ಒದಗಿಸಲು ಉದ್ದೇಶಿಸಲಾಗಿದೆ.

# ಹೈಕಮಾಂಡ್ ನಿರ್ಧಾರಕ್ಕೆ ಬೇಜಾರು..! ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡಲು ಒಪ್ಪಿದ ಬಸವರಾಜ ಹೊರಟ್ಟಿ

• **ಉದಯವಾಹಿನಿ, ಬೆಂಗಳೂರು**

ನನ್ನ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸಲು ಸರ್ಕಾರ ಮುಂದಾಗಿರುವ ಹಿನ್ನೆಲೆ ನಾನು ಆ.14ರಂದು ರಾಜೀನಾಮೆ ನೀಡಲು ತೀರ್ಮಾನಿಸಿದ್ದೇನೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದ್ದಾರೆ. ಸಿಎಂ ಡಿ.ಕೆ.ಶಿವಕುಮಾರ್ ಅವರು ಸಂಪುಟ ಸಚಿವರ ಜೊತೆಗೂಡಿ ಸಭಾಪತಿ ಬಸವರಾಜ ಹೊರಟ್ಟಿಯನ್ನು ಭೇಟಿಯಾಗಿದ್ದರು. ಭೇಟಿ ವೇಳೆ ಸಿಎಂ ಡಿಕೆಶಿ ರಾಜಕೀಯ ವಿದ್ಯಾಮಾನಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಜೊತೆಗೆ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಮನವಿ ಮಾಡಿದ್ದಾರೆ. ಹೈಕಮಾಂಡ್‌ನಿಂದ ನಮಗೆ ಒತ್ತಡ ಇದೆ. ನಿಮ್ಮ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸುವ ಚಿಂತನೆ ಇದೆ ಎಂದು ತಿಳಿಸಿರುವುದಾಗಿ ಬಸವರಾಜ ಹೊರಟ್ಟಿ ಅವರಿಗೆ ವಿವರಿಸಿದ್ದಾರೆ.

ಅವಿಶ್ವಾಸ ನಿರ್ಣಯ ಮಂಡನೆ ಮಾಡುವುದಾದರೆ ಮಾಡಿ. ಪೀಠದ ಗೌರವ ಉಳಿಸಲು ನಾನು ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ತಿಳಿಸಿದ್ದೇನೆ. ಗೌರವಯುತವಾಗಿ ನಾನು ಹುದ್ದೆ ಬಿಡುತ್ತೇನೆ. ಆ.14ರಂದು ರಾಜೀನಾಮೆ ನೀಡಲು ತೀರ್ಮಾನಿಸಿದ್ದೇನೆ. ಸದನದದಲ್ಲಿ ಚರ್ಚೆಯಾಗಿ ಅವಿಶ್ವಾಸ ನಿರ್ಣಯ ಬಹುಮತದೊಂದಿಗೆ ನನ್ನ ಸೋಲಿಸಿದರೆ, ನನ್ನ ಗೌರವ ಏನಾಗುತ್ತದೆ. ಹೀಗಾಗಿ ನಾನಾಗಿಯೇ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ. ಇಂದಲ್ಲ ನಾಳೆಯಾದರೂ ಈ ಹುದ್ದೆ ಬಿಡಲೇ ಬೇಕು. ನಿಮಗೆ ಇಷ್ಟ ಇಲ್ಲ ಎಂದ ಮೇಲೆ, ಸದನದಲ್ಲಿ



ಇರುವುದು ಬೇಡ ಎಂಬ ಅಭಿಪ್ರಾಯ ಬಂದ ಮೇಲೆ ನಾನು ಕುರ್ಚಿಯಲ್ಲಿ ಕುಳಿತುಕೊಳ್ಳುವುದಿಲ್ಲ. ನಾನು ರಾಜೀನಾಮೆ ನೀಡುತ್ತೇನೆ ಎಂದು ಸಿಎಂ ಡಿಕೆಶಿ ಬಳಿ ಹೇಳಿದ್ದೇನೆ ಎಂದು ತಿಳಿಸಿದರು. ಸಚಿವರು ನನ್ನನ್ನೇ ಮುಂದುವರಿಸಲು ಮನವಿ ಮಾಡಿದರು. ಅವರು ಸದನ ನಡೆಸಿಕೊಂಡು ಹೋಗುತ್ತಾರೆ. ಅವರು ಪಕ್ಷಾತೀತವಾಗಿದ್ದಾರೆ ಎಂದು ಅಭಿಪ್ರಾಯ ಹೇಳಿದರು. ಆದರೆ, ಸಿಎಂ ಡಿಕೆಶಿ ನನ್ನದೇನು ಇಲ್ಲ, ನನಗೂ ಅವರ ಬಗ್ಗೆ ಗೌರವ ಇದೆ. ಹೈಕಮಾಂಡ್ ಹೇಳಿರುವುದರಿಂದ ನನಗೆ ಏನೂ ಮಾಡಲು ಆಗಲ್ಲ ಎಂದಿದ್ದಾರೆ ಎಂದು ತಿಳಿಸಿದರು. ನಾನು 18 ಜನ ಮುಖ್ಯಮಂತ್ರಿಗಳನ್ನು ನೋಡಿದ್ದೇನೆ. 10-12 ಸಭಾಪತಿಗಳನ್ನು ನೋಡಿದ್ದೇನೆ. ಮೊಟ್ಟ ಮೊದಲ ಬಾರಿಗೆ ಈ ರೀತಿ ಆಗಿದೆ. ಇದರಿಂದ ಸಹಜವಾಗಿ ನನಗೆ ಬೇಸರವಾಗಿದೆ. ನಾನು ಹೀಗೆ ರಾಜೀನಾಮೆ ನೀಡುತ್ತೇನೆ ಎಂಬ ನಿರೀಕ್ಷೆ ಇರಲಿಲ್ಲ. ನನ್ನ ಮೇಲೆ ಯಾವುದೇ ಕಪ್ಪು ಚುಕ್ಕೆ ಇಲ್ಲ. ಸದನದಲ್ಲಿ ಎಲ್ಲರನ್ನೂ ಸಮಾನವಾಗಿ ನೋಡಿದ್ದೇನೆ. ಎಲ್ಲರೂ ನನ್ನ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಹಾಗಿದ್ದಾಗ ನನ್ನ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಗೆ ಮುಂದಾಗಿರುವುದು ನನಗೆ ನೋವು ತರಿಸಿದೆ ಎಂದು ಬೇಸರ ಹೊರಹಾಕಿದರು. ನಾಲ್ಕು ಸ್ಥಾನಗಳಿಗೆ ನಡೆದ ಚುನಾವಣೆಯ ನಂತರ ಪರಿಷತ್‌ನಲ್ಲಿ ಕಾಂಗ್ರೆಸ್ ಬಹುಮತ ಗಳಿಸಿದೆ.

ಸದಸ್ಯನನ್ನು ಸಭಾಪತಿಯನ್ನಾಗಿ ನೇಮಿಸಲು ನಿರ್ಧರಿಸಿ, ಈಗಾಗಲೇ ಆ ಸ್ಥಾನಕ್ಕೆ ಹಿರಿಯ ಸದಸ್ಯ ಸಲೀಂ ಅಹ್ಮದ್ ಅವರ ಹೆಸರನ್ನು ಅಂತಿಮಗೊಳಿಸಿದೆ. ಸಭಾಪತಿಯನ್ನು ಬದಲಾಯಿಸದೇ ಮುಂದುವರೆಸುವಂತೆ, ಸತೀಶ್ ಜಾರಕಿಹೊಳಿ, ಚೆಲುವರಾಯಸ್ವಾಮಿ, ಜಮೀರ್ ಅಹಮದ್ ಖಾನ್, ಯು.ಟಿ. ಖಾದರ್, ಎನ್.ಎ. ಹ್ಯಾರೀಸ್ ಅವರ ಒತ್ತಾಯದ ಹೊರತಾಗಿಯೂ, ಸಿಎಂ ಡಿ.ಕೆ.ಶಿವಕುಮಾರ್‌ರವರು ತಮ್ಮ ನಿರ್ಧಾರ ಬದಲಿಸದೇ, 'ಇದು ವರಿಷ್ಠರ ತೀರ್ಮಾನ, ಹಾಗಾಗಿ ತಾವು ಸಭಾಪತಿ ಸ್ಥಾನ ತ್ಯಾಗ ಮಾಡಬೇಕೆಂದು ಮನವಿ ಮಾಡಿದ್ರು,' ಎಂದು ಹೊರಟ್ಟಿ ಅಸಮಾಧಾನ ವ್ಯಕ್ತಪಡಿಸಿದರು.

### ಬಿಜೆಪಿ ಟೀಕೆ

ಈ ಬೆಳವಣಿಗೆಯನ್ನು ಟೀಕಿಸಿದ ಬಿಜೆಪಿ, ಇದು ಪೂರ್ವನಿದರ್ಶನಕ್ಕೆ ವಿರುದ್ಧ ಎಂದಿದೆ. ಪರಿಷತ್ ಸಭಾಪತಿ ಸ್ಥಾನವು ಸಾಂವಿಧಾನಿಕ ಹುದ್ದೆಯಾಗಿದ್ದು, ಪಕ್ಷದ ಬಲವನ್ನು ಅವಲಂಬಿಸಿ ಅವರನ್ನು ಪದಚ್ಯುತಗೊಳಿಸುವುದು ಸರಿಯಲ್ಲ ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ ತಿಳಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 110.93₹/L | ಡೀಸೆಲ್ : 98.80₹/L | ಬಂಗಾರ: ₹ 14,973 /Gram 24ct ₹ 13,725/Gram 22ct | ಬೆಳ್ಳಿ: ₹235.00/

## ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಅಭಿಷೇಕ ವಿಶೇಷ ಅಲಂಕಾರ ಮತ್ತು ಅನ್ನದಾನ ಸೇವೆ

• ಉದಯವಾಹಿನಿ, ಬೆಂಗಳೂರು

ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲ ಮಹಾ ಸಂಸ್ಥಾನ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಪ್ರಸ್ತುತ ಪೀಠಾಧಿಪತಿಗಳಾದ ಪರಮಪೂಜ್ಯ 1008 ಶ್ರೀ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಬೆಂಗಳೂರು ಜಯನಗರ 5ನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಪ್ರತಿ ಗುರುವಾರದಂತೆ ಸಹ ಈ ಗುರುವಾರವು ದಿನಾಂಕ 06/08/26 ರಂದು ಅಭಿಷೇಕ ವಿಶೇಷ ಅಲಂಕಾರ ಮತ್ತು ಅನ್ನದಾನ ಸೇವೆ ನೆರವೇರಿಸಿದರು, ತದನಂತರ ಗುರು ರಾಯರ ಬೃಂದಾವನಕ್ಕೆ ವಿಶೇಷ ಪುಷ್ಪಗಳಿಂದ ಅಲಂಕಾರವನ್ನು ಮಾಡಲಾಗಿ ನಂತರ ಮಹಾಮಂಗಳಾರತಿಯು ನೆರವೇರಿತು ಈ ಸಂದರ್ಭದಲ್ಲಿ ಸಹಸ್ರಾರು ಭಕ್ತರು ಗುರು ರಾಯರ ಸನ್ನಿಧಿಗೆ ಆಗಮಿಸಿ ದೀಪಗಳನ್ನು ಬೆಳಗಿಸಿ ಪ್ರಾರ್ಥನೆಯನ್ನು ಸಲ್ಲಿಸಿ ಅನ್ನದಾನದ ಸೇವೆಯಲ್ಲಿ ಭಾಗವಹಿಸಿ ಪರಿಮಳ ಪ್ರಸಾದ ಶೇಷ ವಸ್ತ್ರ ಮತ್ತು ತೀರ್ಥ ಫಲ ಮಂತ್ರಾಕ್ಷತೆ ಯನ್ನು ಸ್ವೀಕರಿಸಿ ಶ್ರೀಗುರು ರಾಘವೇಂದ್ರ ಸ್ವಾಮಿಗಳವರ ಅನುಗ್ರಹಕ್ಕೆ ಪಾತ್ರರಾದರು ಈ ಎಲ್ಲಾ ಕಾರ್ಯಕ್ರಮಗಳು ಸಹಸ್ರಾರು ಭಕ್ತರು ಗುರು ರಾಯರ ಸನ್ನಿಧಿಗೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಜರುಗಿದವು


ಉದಯವಾಹಿನಿ ಚಿತ್ರ

## ಉಚಿತ ವಿದ್ಯುತ್ ಭರವಸೆ ಜಾರಿಗೊಳಿಸಲು ಕೋರಿ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಚುನಾವಣೆಗೂ ಮುನ್ನ ಘೋಷಣೆ ಮಾಡಿದ್ದ 200 ಯುನಿಟ್ ಉಚಿತ ವಿದ್ಯುತ್ ಭರವಸೆ ಸಂಪೂರ್ಣ ಜಾರಿಗೊಳಿಸುವುದು ಮತ್ತು ಪ್ರತಿ ತಿಂಗಳು ವಿದ್ಯುತ್ ಬಿಲ್ ನೀಡುತ್ತಿರುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿ ಆದೇಶಿಸಿದೆ. ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ನಿವಾಸಿ ಎಲ್.ಕೃಷ್ಣಮೂರ್ತಿ ಎಂಬುವರು ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನೀಡಿದ ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಕೆ.ಎಸ್.ಹೇಮಲೇಖಾ ಅವರಿದ್ದ ನ್ಯಾಯಪೀಠ, ಅರ್ಜಿಯನ್ನು ವಜಾಗೊಳಿಸಿದೆ. ಆದೇಶದ ವಿಸ್ತೃತ ಪ್ರತಿ ಇನ್ನಷ್ಟೇ


ಉದಯವಾಹಿನಿ ಚಿತ್ರ

ಲಭ್ಯವಾಗಬೇಕಾಗಿದೆ. ಅರ್ಜಿಯಲ್ಲೇನಿತ್ತು 2023ರ ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ಪಕ್ಷದ ಮುಖಂಡರು ರಾಜ್ಯದ ಪ್ರತಿಯೊಬ್ಬ ನಾಗರಿಕರಿಗೆ 200 ಯುನಿಟ್ ವರೆಗೆ ಉಚಿತ ವಿದ್ಯುತ್ ನೀಡುವುದಾಗಿ ಭರವಸೆ ನೀಡಲಾಗಿತ್ತು.

ಆದರೆ, ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರ ಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ ಏಕಾಂಗಿಯಾಗಿ ವಾಸಿಸುತ್ತಿದ್ದು, ಆರಂಭದಲ್ಲಿ ಕೆಲವು ತಿಂಗಳು ಶೂನ್ಯ ಬಿಲ್ ಬಂದಿದ್ದರೂ, ನಂತರದ ತಿಂಗಳುಗಳಲ್ಲಿ ಮೇ ತಿಂಗಳಲ್ಲಿ 27 ರೂ., ಜೂನ್‌ನಲ್ಲಿ 39 ರೂ., ಜುಲೈ, ಆಗಸ್ಟ್ ಹಾಗೂ ಸೆಪ್ಟೆಂಬರ್‌ನಲ್ಲಿ ತಲಾ 53 ರೂ.ಗಳಂತೆ ಬಿಲ್ ಬರುತ್ತಿದ್ದು, ಪಾವತಿಸಬೇಕಾಗುತ್ತಿದೆ.

ಈ ಸಂಬಂಧ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ (ಸೆಸ್ಕಾಂ) ಸಿಬ್ಬಂದಿ ಹಾಗೂ ಕಿರಿಯ ಇಂಜಿನಿಯರ್‌ಗಳನ್ನು ಸಂಪರ್ಕಿಸಿದಾಗ ಸರಿಯಾದ ಮಾಹಿತಿ ನೀಡುತ್ತಿಲ್ಲ. ಆದ್ದರಿಂದ ಸರ್ಕಾರದ ಉಚಿತ ವಿದ್ಯುತ್ ಭರವಸೆ ಹಾಗೂ ಗೆಜೆಟ್ ಅಧಿಸೂಚನೆಯಂತೆ 200 ಯುನಿಟ್‌ವರೆಗಿನ ವಿದ್ಯುತ್ ಬಳಕೆಗೆ ಸಂಪೂರ್ಣ ವಿನಾಯಿತಿ ನೀಡುವಂತೆ ಹಾಗೂ ಚುನಾವಣಾ ಭರವಸೆಗಳನ್ನು ಈಡೇರಿಸಲು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಚಿವರಿಗೆ ನಿರ್ದೇಶನ ನೀಡುವಂತೆ ಅರ್ಜಿಯಲ್ಲಿ ಕೋರಲಾಗಿದೆ.

## ಸಚಿವ ಸ್ಥಾನ ಸಿಗದ ಬೇಸರ ಇದೆ, ಅದನ್ನು ನುಂಗಿಕೊಂಡು, ಜೀರ್ಣಿಸಿಕೊಂಡು ಮುಂದೆ ಹೋಗಬೇಕಾಗುತ್ತದೆ: ಎ.ಎಸ್.ಪೊನ್ನಣ್ಣ

• ಉದಯವಾಹಿನಿ, ಬೆಂಗಳೂರು

ನನಗೂ ಕೂಡ ಸಚಿವ ಸ್ಥಾನ ಸಿಗದಿರುವುದರಿಂದ ಬೇಸರ ಆಗಿದೆ. ಅದನ್ನು ನುಂಗಿಕೊಂಡು, ಜೀರ್ಣಿಸಿಕೊಂಡು ಮುಂದೆ ಹೋಗಬೇಕಾಗುತ್ತದೆ ಎಂದು ವಿಧಾನಸಭೆಯ ಉಪ ಸಭಾಧ್ಯಕ್ಷ ಎ. ಎಸ್. ಪೊನ್ನಣ್ಣ ತಿಳಿಸಿದರು. ವಿಧಾನಸೌಧದಲ್ಲಿ ಗುರುವಾರ ಮಾಧ್ಯಮವದರೊಂದಿಗೆ ಮಾತನಾಡಿದ ಅವರು, ಮಂತ್ರಿ ಮಂಡಲದಲ್ಲಿ ನನ್ನನ್ನು ಸೇರಿಸಿಕೊಳ್ಳುವ ವಿಶ್ವಾಸ ಇತ್ತು. ಸಿಎಂ ಕಾನೂನು ಸಲಹೆಗಾರನಾಗಿ ನಿಷ್ಠೆಯಿಂದ ಸೇವೆ ಸಲ್ಲಿಸಿದ್ದೇನೆ. ನಿಸ್ವಾರ್ಥವಾಗಿ ಹಲವು ಶಾಸಕರನ್ನು ಕಾನೂನಿನ ಗಂಡಾಂತರಗಳಿಂದ ಪಾರು ಮಾಡಿದ್ದೇನೆ. ಆದರೂ ನನಗೆ ಮಂತ್ರಿಮಂಡಲದಲ್ಲಿ ಅವಕಾಶ ಕೊಟ್ಟಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಪಕ್ಷ ಕೆಲವು ಮಾನದಂಡದ ಮೇಲೆ ತೀರ್ಮಾನ ಮಾಡಿದೆ. ಅದಕ್ಕೆ ನಾನು ತಲೆಬಾಗಿ ಕೆಲಸ ಮಾಡುತ್ತೇನೆ. ಡೆಪ್ಯುಟಿ ಸ್ಪೀಕರ್ ಹುದ್ದೆ ನಿಭಾಯಿಸುತ್ತೇನೆ, ನಿರ್ವಹಿಸುತ್ತೇನೆ. ಇವತ್ತು ಸಿಎಂ ಪರವಾಗಿ ಪ್ರತಿಯೊಬ್ಬ ಶಾಸಕರು ನಿಲ್ಲಬೇಕಾಗುತ್ತದೆ. ಸಿದ್ದರಾಮಯ್ಯ ಕೂಡ ಸಿಎಂ ಸ್ಥಾನ ತ್ಯಜಿಸಿದ್ದಾರೆ. ಅವರು ಪಕ್ಷದಲ್ಲಿ ದೊಡ್ಡ ನಾಯಕರು. ಸಿಎಂ ಹಾಗೂ ಸಿದ್ದರಾಮಯ್ಯ ನಾಯಕತ್ವದಲ್ಲಿ ಮುಂದೆ ಪಕ್ಷಕ್ಕೆ ಒಳ್ಳೆಯ ಭವಿಷ್ಯವಿದೆ ಎಂದು ಅಭಿಪ್ರಾಯಪಟ್ಟರು. ವಿರೋಧ ಪಕ್ಷದವರು ಸಹಜವಾಗಿ ಸರ್ಕಾರಕ್ಕೆ ಮುಜುಗರ ತರುವ ಕೆಲಸ ಮಾಡುತ್ತಾರೆ. ಅದನ್ನು ಎದುರಿಸಿ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ನಾನು ಕೂಡ ಕೊಡಗು ಭಾಗಕ್ಕೆ ಕೊಟ್ಟಿಲ್ಲ ಎಂದು ಹೇಳಬಹುದು. ಆದರೆ ಪಕ್ಷಕ್ಕೆ ತಮ್ಮದೇ ಆದ ರಾಜಕೀಯ ಲೆಕ್ಕಾಚಾರಗಳ ಮೇಲೆ ತೀರ್ಮಾನ ಮಾಡಿರುತ್ತದೆ. ನನಗೂ ಕೂಡ ಬೇಸರ ಆಗಿದೆ, ಅದನ್ನು ನುಂಗಿಕೊಂಡು, ಜೀರ್ಣಿಸಿಕೊಂಡು ಮುಂದೆ ಹೋಗಬೇಕಾಗುತ್ತದೆ ಎಂದು ಎ ಎಸ್ ಪೊನ್ನಣ್ಣ ಹೇಳಿದ್ರು.

## ಪ್ರಶ್ನೆ ಪತ್ರಿಕೆ ಸಿದ್ಧಪಡಿಸಲು ಭದ್ರತೆ, ಗೌಪ್ಯತೆ ಕಾಯ್ದುಕೊಳ್ಳಲು ಎಐ ಬಳಸಲು ಸಿಎಂ ಮನವಿ

### ಐಟಿ ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಆಂಥ್ರೋಪಿಕ್ ನಿಯೋಗದೊಂದಿಗೆ ಮುಖ್ಯಮಂತ್ರಿಗಳನ್ನು ಗುರುವಾರ ಭೇಟಿ ಮಾಡಿ, ಕೃತಕ ಬುದ್ಧಿಮತ್ತೆಯ (ಎಐ) ಬಳಕೆ ಬಗ್ಗೆ ಚರ್ಚಿಸಿದರು.

• ಉದಯವಾಹಿನಿ, ಬೆಂಗಳೂರು

ಆಡಳಿತ, ಉನ್ನತ ಶಿಕ್ಷಣ, ಆರೋಗ್ಯ ರಕ್ಷಣೆ, ಸಂಶೋಧನೆ ಹಾಗೂ ರಾಜ್ಯದ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯಲ್ಲಿ ಕೃತಕ ಬುದ್ಧಿಮತ್ತೆಯ (ಎಐ) ಬಳಕೆ ಹೆಚ್ಚಿಸಲು ಸುದೀರ್ಘ ಸಹಭಾಗಿತ್ವ ಸಾಧಿಸುವ ಕುರಿತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಂಥ್ರೋಪಿಕ್' ಸಂಸ್ಥೆಯ ನಿಯೋಗದೊಂದಿಗೆ ಚರ್ಚೆ ನಡೆಸಿದರು. ರಾಜ್ಯದಲ್ಲಿ ಎಐ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಪ್ರಕ್ರಿಯೆಯಲ್ಲಿ ಜಾಗತಿಕ ಎಐ ನಾಯಕರನ್ನು ತೊಡಗಿಸಿಕೊಳ್ಳಲು, ಐಟಿ ಬಿಟಿ ಸಚಿವ ಸಚಿವ ಪ್ರಿಯಾಂಕ್ ಖರ್ಗೆ ಅವರು ಆಂಥ್ರೋಪಿಕ್ ನಿಯೋಗದೊಂದಿಗೆ ಮುಖ್ಯಮಂತ್ರಿಗಳನ್ನು ಗುರುವಾರ ಭೇಟಿ ಮಾಡಿದರು. ಜವಾಬ್ದಾರಿಯುತ ಬಳಕೆ, ಡೇಟಾ ಗೌಪ್ಯತೆ ಮತ್ತು ಡೇಟಾ ಸಾರ್ವಭೌಮತ್ವವನ್ನು ಖಚಿತಪಡಿಸಿಕೊಳ್ಳುವ ಮೂಲಕ, ಸರ್ಕಾರ ಹಾಗೂ ಉದ್ಯಮಗಳಿಗಾಗಿ ಅನ್ವಯಿಕ ಎಐ ಪರಿಹಾರಗಳ ಪ್ರಯೋಜನಕಾರಿ ಅಳವಡಿಕೆಯ ಕುರಿತು ಈ ಸಭೆಯಲ್ಲಿ ಪ್ರಮುಖವಾಗಿ ಚರ್ಚಿಸಲಾಯಿತು. ಆರೋಗ್ಯ ರಕ್ಷಣೆ ಮತ್ತು ಲೈಫ್ ಸೈನ್ಸಸ್ ಕ್ಷೇತ್ರಗಳಲ್ಲಿ ಎಐ ಬಳಕೆ, ಹಾಗೂ ಭಾರತೀಯ ವಿಜ್ಞಾನ ಸಂಸ್ಥೆಯ ಸಹಯೋಗದೊಂದಿಗೆ ವೈಜ್ಞಾನಿಕ ಸಂಶೋಧನೆಗಾಗಿ ಎಐ ಬಳಸುವ ಕುರಿತು ಚರ್ಚೆಗಳು ನಡೆದವು. ಉನ್ನತ ಶಿಕ್ಷಣದಲ್ಲಿ ಎಐ ಆಧಾರಿತ ಸಂಶೋಧನೆ ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳಿಗೆ ಬೆಂಬಲ ನೀಡಲು ಆಂಥ್ರೋಪಿಕ್ ನಿಯೋಗವು ಆಸಕ್ತಿ ವ್ಯಕ್ತಪಡಿಸಿತು.

ಉದ್ಯಮಗಳಲ್ಲಿ ಎಐ ಅಳವಡಿಕೆ, ಡೇಟಾ ಸ್ಥಳೀಯತೆ ಮತ್ತು ಸಾರ್ವಭೌಮ ಸರ್ಕಾರಿ ಡೇಟಾವನ್ನು ರಾಜ್ಯದೊಳಗಿನ ಸರ್ವರ್‌ಗಳಲ್ಲೇ ಸಂಗ್ರಹಿಸುವುದನ್ನು ಖಚಿತಪಡಿಸಿಕೊಳ್ಳುವ ಬಗ್ಗೆಯೂ ಪ್ರಮುಖವಾಗಿ ಚರ್ಚಿಸಲಾಯಿತು. ರಾಜ್ಯ ಸರ್ಕಾರವು ತನ್ನ ಸರ್ಕಾರಕ್ಕೆ ಮೊದಲ ಆದ್ಯತೆ ನೀತಿಯನ್ನು ಪುನರುಚ್ಚರಿಸಿತು. ಎಐ ಆಧಾರಿತ ಸಾರ್ವಜನಿಕ ಪರಿಹಾರಗಳ ಅಭಿವೃದ್ಧಿಗೆ ಅನುಕೂಲವಾಗುವಂತೆ ಸರ್ಕಾರಿ ಡೇಟಾಸೆಟ್‌ಗಳನ್ನು ಸುರಕ್ಷಿತವಾಗಿಡುವ ಬಗ್ಗೆ ಚರ್ಚಿಸಿದರು.

ಇ-ಆಡಳಿತ, ಗೃಹ ಇಲಾಖೆ ಹಾಗೂ ಇತರ ಸರ್ಕಾರಿ ಸಂಸ್ಥೆಗಳಲ್ಲಿ ಎಐ ಅನ್ವಯಿಕೆಗಳನ್ನು ಗುರುತಿಸಲು ಇಲಾಖಾವಾರು ಕಾರ್ಯಪಡೆಗಳನ್ನು ರಚಿಸುವ ಕುರಿತೂ ಸಭೆಯಲ್ಲಿ ಪರಿಶೀಲಿಸಲಾಯಿತು. ಸೈಬರ್ ಬೆದರಿಕೆಗಳ ವಿರುದ್ಧದ ಸುರಕ್ಷತಾ ಕ್ರಮಗಳು, ನಾಗರಿಕರ ಡೇಟಾ ಮತ್ತು ಗೌಪ್ಯತೆಯ ರಕ್ಷಣೆ ಸೇರಿದಂತೆ ಜವಾಬ್ದಾರಿಯುತ ಎಐ ಪದ್ಧತಿಗಳನ್ನು ಭವಿಷ್ಯದ ಯೋಜನಾ ಅಳವಡಿಕೆಗಳ ಅಗತ್ಯ ಅಂಶಗಳಾಗಿ ಚರ್ಚಿಸಲಾಯಿತು.

ಕರ್ನಾಟಕದ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಗೆ ಬೆಂಬಲ ನೀಡಲು, ವಿಶೇಷವಾಗಿ ಡೀಪ್-ಟೆಕ್ ಕ್ಷೇತ್ರದಲ್ಲಿರುವ ರಾಜ್ಯದ 20,000 ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳಿಗೆ ಆಂಥ್ರೋಪಿಕ್‌ನಿಂದ ಬೆಂಬಲ ವಿಸ್ತರಿಸುವ ಬಗ್ಗೆ ಪರಿಶೀಲಿಸಲಾಯಿತು. ತೆರಿಗೆ ಸಂಗ್ರಹಣೆ ಮತ್ತು ಸಾರ್ವಜನಿಕ ಸೇವಾ ವಿತರಣೆಯಂತಹ ಕ್ಷೇತ್ರಗಳಲ್ಲಿ ಎಐ ಅನ್ವಯಿಕೆಗಳನ್ನು ಪ್ರಾಯೋಗಿಕ ಯೋಜನೆಗಳಾಗಿ ಗುರುತಿಸಲಾಯಿತು. ಎಐ ತಂತ್ರಜ್ಞಾನಗಳನ್ನು ವಿಶಾಲವಾದ ಸಾಮಾಜಿಕ ಒಳಿತಿಗಾಗಿ ಬಳಸಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರೇತರ ಸಂಸ್ಥೆಗಳು ಮತ್ತು ಸಾರ್ವಜನಿಕ ಸಂಸ್ಥೆಗಳೊಂದಿಗಿನ ಸಹಭಾಗಿತ್ವದ ಕುರಿತೂ ಸಭೆಯು ಪರಿಶೀಲಿಸಿತು.


ಉದಯವಾಹಿನಿ ಚಿತ್ರ

ಸಭೆಯಲ್ಲಿ ಹಿರಿಯ ಐಎಎಸ್ ಅಧಿಕಾರಿಗಳಾದ ಡಾ. ಮಂಜುಳಾ ಎನ್., ಮುನೀಶ್ ಮೌದ್ಗಿಲ್ ಹಾಗೂ ಸಿಎಂ ಹಣಕಾಸು ಸಲಹೆಗಾರ ಎಲ್.ಕೆ.ಅತೀಕ್, ಆಂಥ್ರೋಪಿಕ್ ಸಂಸ್ಥೆಯ ಪರವಾಗಿ ಅಂತಾರಾಷ್ಟ್ರೀಯ ನೀತಿ ವಿಭಾಗದ ಮುಖ್ಯಸ್ಥ ಮೈಕೆಲ್ ಸೆಲ್ಲಿಟೋ, ರಾಜ್ಯ ಸರ್ಕಾರವು ತನ್ನ ಸರ್ಕಾರಕ್ಕೆ ಮೊದಲ ಆದ್ಯತೆ ನೀತಿಯನ್ನು ಪುನರುಚ್ಚರಿಸಿತು. ಅಂತಾರಾಷ್ಟ್ರೀಯ ಮಾರುಕಟ್ಟೆಗಳ ವ್ಯವಸ್ಥಾಪಕ ನಿರ್ದೇಶಕ ಕ್ರಿಸ್ ಸಿಯೌರಿ, ಭಾರತದ ವ್ಯವಸ್ಥಾಪಕ ನಿರ್ದೇಶಕಿ ಐರಿನಾ ಘೋಷ್, ಭಾರತದ ನೀತಿ ವಿಭಾಗದ ಮುಖ್ಯಸ್ಥ ಆಮ್ಲಾನ್ ಮೊಹಾಂತಿ ಮತ್ತು ಸಾರ್ವಜನಿಕ ವಲಯ, ಆರೋಗ್ಯ ಹಾಗೂ ಶಿಕ್ಷಣ ವಿಭಾಗದ ಗೋ-ಟು-ಮಾರ್ಕೆಟ್ ಉಸ್ತುವಾರಿ ಸಮರ್ಥ್ ಮಸ್ಸೋನ್ ಅವರು ಉಪಸ್ಥಿತರಿದ್ದರು.

**ಪರೀಕ್ಷೆ ಪ್ರಕ್ರಿಯೆಯಲ್ಲಿ ಎಐ**

ಸರ್ಕಾರಿ ವ್ಯವಸ್ಥೆಗಳಲ್ಲಿ ನಡೆಯುವ ವಂಚನೆಗಳನ್ನು ತಡೆಯಲು ಹಾಗೂ ವಿವಿಧ ಸರ್ಕಾರಿ ಸಂಸ್ಥೆಗಳು ಮತ್ತು ಶಿಕ್ಷಣ ಸಂಸ್ಥೆಗಳು ನಡೆಸುವ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವಲ್ಲಿ ದಕ್ಷತೆ, ಭದ್ರತೆ ಮತ್ತು ಗೌಪ್ಯತೆಯನ್ನು ಹೆಚ್ಚಿಸಲು ಕೃತಕ ಬುದ್ಧಿಮತ್ತೆ ಹೇಗೆ ನೆರವಾಗುತ್ತದೆ ಎಂಬುದರ ಕುರಿತು ಮುಖ್ಯಮಂತ್ರಿಗಳು ಆಂಥ್ರೋಪಿಕ್‌ನ ತಾಂತ್ರಿಕ ಸಲಹೆ ಕೋರಿದರು. ಎಐ ಶಿಕ್ಷಣ ಮತ್ತು ಸಂಶೋಧನೆಯನ್ನು ಬಲಪಡಿಸಲು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಸೇರಿದಂತೆ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಆಂಥ್ರೋಪಿಕ್‌ನ ಕ್ಲಾಡ್ ಎಐ ವೇದಿಕೆಯ ಲಭ್ಯತೆಗೆ ರಿಯಾಯಿತಿ/ಸಬ್ಸಿಡಿ ನೀಡುವಂತೆ ಮುಖ್ಯಮಂತ್ರಿಗಳು ಪ್ರಸ್ತಾಪಿಸಿದರು. ಸಿಎಂ 100 ದಿನಗಳ' ಮೈಲಿಗಲ್ಲನ್ನು ಈ ಸಹಯೋಗದೊಂದಿಗೆ ಸಾಧಿಸುವ ಕುರಿತೂ ಚರ್ಚಿಸಲಾಯಿತು.



ಪ್ರಸ್ತಾವಿತ ಎಐ ವಿಶ್ವವಿದ್ಯಾಲಯ ಬೃಹತ್ ಮಟ್ಟದ ಕೌಶಲ್ಯಾಭಿವೃದ್ಧಿ ಯೋಜನೆಗಳು ಮತ್ತು ಡೀಪ್-ಟೆಕ್ ಅನ್ವೇಷಣೆಗಳಿಗೆ ನೀಡುವ ಬೆಂಬಲ ಒಳಗೊಂಡಂತೆ ಸಮಗ್ರ ಎಐ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ರಾಜ್ಯದ ದೃಷ್ಟಿಕೋನವನ್ನು ಮುಖ್ಯಮಂತ್ರಿ ವಿವರಿಸಿದರು. ದೇಶದಲ್ಲೇ ಅತಿದೊಡ್ಡ ಎಐ ಪ್ರಮಾಣೀಕೃತ ಪ್ರತಿಭಾವಂತರನ್ನು ರೂಪಿಸಲು, ರಾಜ್ಯದ ನಿಪುಣ' ಕಾರ್ಯಕ್ರಮದಡಿ 'ಕ್ಲಾಡ್‌ಸರ್ಟಿಫಿಕೇಶನ್ ಸೇರಿದಂತೆ ಎಐ-ಸಂಬಂಧಿತ ಸರ್ಟಿಫಿಕೇಶನ್ ಕೋರ್ಸ್‌ಗಳನ್ನು ಪರಿಚಯಿಸುವ ಬಗ್ಗೆ ಚರ್ಚಿಸಿದರು.

## ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಟ್ವಿಸ್ಟ್: ಮಾಫಿ ಸಾಕ್ಷಿ ಹೇಳಿಕೆ ನೀಡಲು ಮುಂದಾದ ಮೂವರು ಆರೋಪಿಗಳು


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ರೋಚಕ ತಿರುವು ಸಿಕ್ಕಿದೆ. ಪ್ರಕರಣದಲ್ಲಿ ಮಾಫಿ ಸಾಕ್ಷಿ ನುಡಿಯುವುದಾಗಿ ಮೂವರು ಆರೋಪಿಗಳು ನ್ಯಾಯಾಲಯದ ಮೊರೆ ಹೋಗಿದ್ದಾರೆ. ಕೊಲೆ ಪ್ರಕರಣ ಎ-13ನೇ ಆರೋಪಿ ಪ್ರದೂಷ್ ರಾವ್ ಮಾಫಿ ಸಾಕ್ಷಿಯನ್ನಾಗಿ ಪರಿಣಗಣಿಸುವಂತೆ ಸಿಸಿಹೆಚ್-59 ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಮತ್ತೊಂದೆಡೆ ಪ್ರಕರಣದಲ್ಲಿ ಎ-10 ಆರೋಪಿ ರವಿಶಂಕರ್ ಹಾಗೂ ಎ-10 ವಿನಯ್ ಮಾಫಿ ಸಾಕ್ಷಿ ಹೇಳಿಕೆ ನೀಡುವುದಾಗಿ ಅರ್ಜಿ ಸಲ್ಲಿಸುವುದಾಗಿ ಅವರ ಪರ ವಕೀಲರು ವಾದ ಮಂಡಿಸಿದ್ದಾರೆ.

ಸಿಆರ್‌ಪಿಸಿ ಸೆಕ್ಷನ್ 307ರ ಅಡಿಯಲ್ಲಿ ಅರ್ಜಿ ಸಲ್ಲಿಸಿದ ವಾದ ಮಂಡಿಸಿದ ಪ್ರದೋಷ್ ಪರ ವಕೀಲ ದಿವಾಕರ್, ಹತ್ಯೆ ಪ್ರಕರಣದಲ್ಲಿ ನನ್ನ ಕಕ್ಷಿದಾರರನ್ನು ಮಾಫಿ ಸಾಕ್ಷಿಯಾಗಿ ಪರಿಗಣಿಸಬೇಕು. ಆತ ನ್ಯಾಯಾಲಯದ ಮುಂದೆ ಹೇಳಿಕೆ ನೀಡಲಿದ್ದು, ನ್ಯಾಯಾಲಯವು ಕ್ಷಮಾದಾನ ನೀಡಬೇಕು. ಆರೋಪಿಗಳಾದ ರವಿಶಂಕರ್ ಹಾಗೂ ವಿನಯ್ ಪರ ವಾದ ಮಂಡಿಸಿದ ವಕೀಲರು, ನಮ್ಮ ಕಕ್ಷಿದಾರರು ಸಹ ಮಾಫಿ ಸಾಕ್ಷಿಯಾಗಲು ತಯಾರಿದ್ದಾರೆ. ಈ ಕುರಿತಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗುವುದು ಎಂದು ಹೇಳುತ್ತಿದ್ದಂತೆ ಆಕ್ಷೇಪಿಸಿದ ಪ್ರದೂಷ್ ಪರ ವಕೀಲರು, ನಾವು ಮೊದಲು ಅರ್ಜಿ ಹಾಕಿದ್ದೇವೆ. ಅವರ ಅರ್ಜಿ ವಿಲೀನಗೊಳಿಸದೆ ನಮ್ಮ ಅರ್ಜಿಯನ್ನು ಪರಿಗಣಿಸಬೇಕು. ಸಾಕ್ಷಿಗೆ ರಕ್ಷಣೆ ನೀಡಿ, ಆದಷ್ಟು ಬೇಗ ಮಾಫಿ ಸಾಕ್ಷಿ ಹೇಳಿಕೆಗೆ ಅವಕಾಶ ನೀಡಿ. ಇದು ಪ್ರಾಸಿಕ್ಯೂಷನ್‌ಗೆ ನೆರವಾಗಲಿದೆ ಎಂದರು. ನ್ಯಾಯಾಲಯ ನೀಡಿರುವ ಸೂಚನೆ ಹಿನ್ನೆಲೆಯಲ್ಲೇ ಪ್ರಾಸಿಕ್ಯೂಷನ್ ಪರ ವಾದ ಆರಂಭಿಸಿದ ಎಸ್‌ಪಿಪಿ ಪ್ರಸನ್ನ ಕುಮಾರ್, ಮೊದಲಿಗೆ ಆರೋಪಿ ಸಲ್ಲಿಸಿದ್ದ ಅರ್ಜಿ ಬಗ್ಗೆ ವಿಚಾರಣೆ ನಡೆಸಬೇಕು.

## ಕ್ರೀಡಾ ಕೂಟವು ಮಕ್ಕಳಲ್ಲಿ ಕ್ರೀಡಾ ಸ್ಫೂರ್ತಿ

• ಉದಯವಾಹಿನಿ, ಬೆಂಗಳೂರು

ಶ್ರೀರಂಗನಾಥ ಕಲಾ ಟ್ರಸ್ಟ್ ವತಿಯಿಂದ ಆಯೋಜಿಸಲಾದ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಕಪ್ ಕ್ರಿಕೆಟ್ ಟೂರ್ನಮೆಂಟ್‌ನ ಎರಡನೇ ವರ್ಷದ ಸ್ಪರ್ಧೆ ಯಶಸ್ವಿಯಾಗಿ ನೆರವೇರಿತು.

ರಾಮಗೊಂಡನಹಳ್ಳಿ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಸತತ ಎರಡನೇ ವರ್ಷ ಚಾಂಪಿಯನ್ ಪಟ್ಟವನ್ನು ಕಬಳಿಸಿದರು. ದ್ವಿತೀಯ ಬಹುಮಾನವನ್ನು ಬ್ಲುಮ್ ಮೂನ್ ಶಾಲೆ, ಚನ್ನಸಂದ್ರ ಪಡೆದುಕೊಂಡಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ವೈದೇಹಿ ಆಸ್ಪತ್ರೆಯ ಡಾ. ಫೈರೋಜ್‌ಖಾನ್, ಸಮಾಜಸೇವಕ ಸಂತೋಷ್ ಜೊತೆಗೆ ಟ್ರಸ್ಟ್‌ನ ಅಧ್ಯಕ್ಷರು ಚಂದ್ರಶೇಖರ್ ಮೂರ್ತಿ ಹಾಗೂ ಉಪಾಧ್ಯಕ್ಷೆ ಶ್ರೀಮತಿ ಕಮಲ ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ


ಈ ಕ್ರೀಡಾ ಕೂಟವು ಮಕ್ಕಳಲ್ಲಿ ಕ್ರೀಡಾಸ್ಫೂರ್ತಿ ಮತ್ತು ಆರೋಗ್ಯಕರ ಸ್ಪರ್ಧಾತ್ಮಕ ಮನೋಭಾವವನ್ನು

## ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಪಿಓಪಿ ಗಣೇಶ ಸ್ಥಾಪನೆಗಿಲ್ಲ ಅವಕಾಶ

• ಉದಯವಾಹಿನಿ, ಬೆಂಗಳೂರು

ಸೆಪ್ಟೆಂಬರ್ 14ರಂದು ನಾಡಿನಾದ್ಯಂತ ಆಚರಿಸಲಾಗುವ ಗಣೇಶ ಹಬ್ಬದ ವೇಳೆ ನಿಷೇಧಿತ ಪ್ಲಾಸ್ಟರ್ ಆಫ್ ಪ್ಯಾರಿಸ್ ನಿರ್ಮಿತ, ರಾಸಾಯನಿಕ ಬಣ್ಣ ಲೇಪಿತ ಗಣೇಶ ಮೂರ್ತಿಗಳ ವಿಸರ್ಜನೆಗೆ ಅವಕಾಶ ನೀಡದೆ, ಪರಿಸರಸ್ನೇಹಿ ಬಣ್ಣರಹಿತ ಮಣ್ಣಿನ ಗಣಪತಿ ಪೂಜಿಸಲು ಪ್ರೇರೇಪಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ.ಖಂಡ್ರೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಇಲಾಖೆಯ ಕಾರ್ಯದರ್ಶಿಗೆ ಲಿಖಿತ ಸೂಚನೆ ನೀಡಿರುವ ಸಚಿವರು, ಗಣೇಶ ಪರಿಸರ (ಮಣ್ಣಿನಿಂದ)ದಿಂದ ಹುಟ್ಟಿದ ದೇವರಾಗಿದ್ದು, ಜಲಮೂಲಗಳ ಸಂರಕ್ಷಣೆಯ ದೃಷ್ಟಿಯಿಂದ ಪರಿಸರಸ್ನೇಹಿ ಮಣ್ಣಿನ ಗೌರಿ, ಗಣೇಶ ಮೂರ್ತಿಗಳ ಪೂಜೆ ಹಾಗೂ


ಉದಯವಾಹಿನಿ ಚಿತ್ರ

ವಿಸರ್ಜನೆಗೆ ಮಾತ್ರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅವಕಾಶ ನೀಡುವಂತೆ ಕ್ರಮ ವಹಿಸಲು ತಿಳಿಸಿದ್ದಾರೆ. ಹಬ್ಬದ ಸಂಭ್ರಮದಲ್ಲಿ ಯಾವುದೇ ಸಮುದಾಯದ ಧಾರ್ಮಿಕ ಭಾವನೆಗಳಿಗೆ ನೋವಾಗದ ರೀತಿಯಲ್ಲಿ ಈಗಿನಿಂದಲೇ ಪಿಓಪಿ ಗಣೇಶ ಮೂರ್ತಿಗಳ ತಯಾರಿಕೆ, ದಾಸ್ತಾನು, ಸಾಗಾಟ ಮತ್ತು ಮಾರಾಟಕ್ಕೆ ಕಡಿವಾಣ ಹಾಕಲು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನೆರವು ಪಡೆಯುವಂತೆ ಸೂಚಿಸಿರುವ ಅವರು, ಸಾರ್ವಜನಿಕರಿಗೂ ಈ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯವನ್ನು ಪಂಚಾಯಿತಿಗಳ ಮಟ್ಟದಲ್ಲಿ ಮಾಡಲು ಆದೇಶ ನೀಡಿದ್ದಾರೆ.

ಕ್ಯಾಲ್ಸಿಯಂ, ಸಲ್ಫೇಟ್, ಹೆಮಿಹೈಡ್ರೇಟ್ ಯುಕ್ತ ಪುಡಿಯಿಂದ ತಯಾರಿಸುವ ಮೂರ್ತಿಗಳಲ್ಲಿ ಗಂಧಕ, ರಂಜಕ, ಜಿಪ್ಸಮ್ ಮತ್ತು ಮ್ಯಾಗ್ನೀಷಿಯಂ ಸೇರಿದಂತೆ ಅನೇಕ ಅಪಾಯಕಾರಿ ಅಂಶಗಳಿರುವುದರ ಜೊತೆಗೆ ಪಾದರಸ, ಕ್ಯಾಡ್ಮಿಯಂ, ಸೀಸ ಮತ್ತು ಇಂಗಾಲ ಒಳಗೊಂಡ ರಾಸಾಯನಿಕ ಬಣ್ಣ ಲೇಪಿಸುವುದರಿಂದ ಪರಿಸರಕ್ಕೆ ಹಾನಿಯಾಗುತ್ತದೆ ಎಂದೂ ಲಿಖಿತ ಸೂಚನೆಯಲ್ಲಿ ಖಂಡ್ರೆ ತಿಳಿಸಿದ್ದಾರೆ.

ಪಿಓಪಿ ಮೂರ್ತಿಗಳನ್ನು ಕೆರೆ, ಬಾವಿ, ನದಿ ಸೇರಿದಂತೆ ಜಲ ಮೂಲಗಳಲ್ಲಿ ವಿಸರ್ಜಿಸಿದಾಗ ಭಾರ ಲೋಹ ಕರಗಿ ಜನ ಜಾನುವಾರುಗಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.

## ಕಂಡಕ್ಟರ್ ವಜಾಗೊಳಿಸಿದ್ದ ಕ್ರಮ ರದ್ದು: ಸಂಪೂರ್ಣ ಬಾಕಿ ವೇತನ ನೀಡುವಂತೆ ಹೈಕೋರ್ಟ್ ಸೂಚನೆ

• ಉದಯವಾಹಿನಿ, ಬೆಂಗಳೂರು

ಕಾಯ್ದೆಯ ನಿಯಮಗಳನ್ನು ಅನುಸರಿಸದೆ ನಿರ್ವಾಹಕರೊಬ್ಬರನ್ನು ವಜಾಗೊಳಿಸಿದ್ದ ಕೆಎಸ್‌ಆರ್‌ಟಿಸಿ ಕ್ರಮವನ್ನು ರದ್ದುಗೊಳಿಸಿರುವ ಹೈಕೋರ್ಟ್, ನೌಕರನಿಗೆ ವಜಾಗೊಂಡ ದಿನದಿಂದ ಮರುನೇಮಕಗೊಂಡ ದಿನದವರೆಗಿನ ಸಂಪೂರ್ಣ ಬಾಕಿ ವೇತನ ಪಾವತಿಸುವಂತೆ ನಿರ್ದೇಶನ ನೀಡಿದೆ. ಕೆಎಸ್‌ಆರ್‌ಟಿಸಿ ಕೋಲಾರ ವಿಭಾಗದಲ್ಲಿ ನಿರ್ವಾಹಕರಾಗಿದ್ದ ಎಂ.ಕೆ.ಮೊಹಮ್ಮದ್ ಇಸ್ಮಾಯಿಲ್ ಎಂಬವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನಂತ್ ರಾಮನಾಥ ಹೆಗಡೆ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿತು. ಅಲ್ಲದೆ, ಕಾನೂನುಬದ್ಧ ನಿಯಮಗಳನ್ನು ಪಾಲಿಸದೆ ವಜಾಗೊಳಿಸಿದ ಸಂದರ್ಭದಲ್ಲಿ, ನೌಕರನನ್ನು ಸೇವೆಯಿಂದ ತೆಗೆದುಹಾಕಿದ ದಿನದಿಂದ ಮರು ನೇಮಕದವರೆಗಿನ ಅವಧಿಗೆ ಬಾಕಿ ವೇತನ ನಿರಾಕರಿಸಲು ಕಾರ್ಮಿಕ ನ್ಯಾಯಾಲಯಕ್ಕೆ ಅಧಿಕಾರವಿಲ್ಲ. ಅರ್ಜಿದಾರ ನೌಕರನಿಗೆ ವಜಾ ದಿನದಿಂದ ಮರುನೇಮಕದವರೆಗೆ ಕೆಲಸದಲ್ಲಿ ಮುಂದುವರಿದಂತೆ ಪರಿಗಣಿಸಿ ಎಲ್ಲಾ ಸೌಲಭ್ಯಗಳು ಹಾಗೂ ಪೂರ್ಣ ವೇತನವನ್ನು ಮೂರು ತಿಂಗಳೊಳಗೆ ಪಾವತಿಸುವಂತೆ ಕೆಎಸ್‌ಆರ್‌ಟಿಸಿಗೆ ನಿರ್ದೇಶಿಸಲಾಗಿದೆ.

## ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ: ಕೇರಳದಲ್ಲಿ ಮತ್ತೋರ್ವ ಆರೋಪಿ ಬಂಧಿಸಿದ ಎನ್‌ಐಎ: ಈವರೆಗೂ 25 ಆರೋಪಿಗಳ ಬಂಧನ

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣದ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ದಳ -ಅಧಿಕಾರಿಗಳು ಕೇರಳದ ಕೊಚ್ಚಿಯಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಯನ್ನ ಬಂಧಿಸಿದ್ದಾರೆ. ಈ ಮೂಲಕ ಹತ್ಯೆ ಪ್ರಕರಣದಲ್ಲಿ ಈವರೆಗೂ ಒಟ್ಟು 25 ಮಂದಿ ಆರೋಪಿಗಳನ್ನ ಬಂಧಿಸಿದಂತಾಗಿದೆ. ಎಂ.ಆರ್.ಉಮರ್ ಫಾರೂಕ್ ಬಂಧಿತ. ಕೇರಳದ ಕೊಚ್ಚಿಯಲ್ಲಿ ತಲೆಮರೆಸಿಕೊಂಡಿರುವ ಬಗ್ಗೆ ವಿಶ್ವಸನೀಯ ಮೂಲಗಳಿಂದ ಮಾಹಿತಿ ಸಂಗ್ರಹಿಸಿದ ಎನ್ ಐಎ, ಆರೋಪಿಯನ್ನ ಪತ್ತೆ ಹಚ್ಚಿ ಬಂಧಿಸಿದೆ. ಈತನ ಬಂಧನಕ್ಕಾಗಿ


ಉದಯವಾಹಿನಿ ಚಿತ್ರ

ರೆಡ್ ಕಾರ್ನರ್ ಹೊರಡಿಸಲಾಗಿತ್ತು. ಅಲ್ಲದೇ ವಾರಂಟ್ ಜಾರಿ ಮಾಡಲಾಗಿತ್ತು. ಈತನ ಬಗ್ಗೆ ಮಾಹಿತಿ ಅಥವಾ ಸುಳಿವು ನೀಡಿದವರಿಗೆ 4 ಲಕ್ಷ ನಗದು ಬಹುಮಾನ ನೀಡುವುದಾಗಿ ಘೋಷಿಸಲಾಗಿತ್ತು. ಖಚಿತ ಮಾಹಿತಿ ಮೇರೆಗೆ ಆರೋಪಿಯನ್ನ ಬಂಧಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಎನ್‌ಐಎ ತಿಳಿಸಿದೆ. ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣದಲ್ಲಿ ಸಂಚು ರೂಪಿಸಿದ ಆರೋಪದಡಿ ಉಮರ್ ವಿರುದ್ಧ ನ್ಯಾಯಾಲಯಕ್ಕೆ ಚಾರ್ಜ್ ಶೀಟ್ ಸಲ್ಲಿಸಲಾಗಿತ್ತು. ಇದೇ ಪ್ರಕರಣದಲ್ಲಿ ಹತ್ಯೆ ಮಾಡಿದ್ದ ಮುಖ್ಯ ಆರೋಪಿಗಳಿಗೆ ಆಶ್ರಯ ನೀಡಿದ ಆರೋಪದಡಿ ಆಂಧ್ರಪ್ರದೇಶ ಪೊಲೀಸರು ನೀಡಿದ ಮಾಹಿತಿ ಮೇರೆಗೆ ಕಳೆದ ತಿಂಗಳು ಕೇರಳ ಹಾಗೂ ತಮಿಳುನಾಡಿನಲ್ಲಿ ಅಬ್ದುಲ್ ನಾಸಿರ್ ಮತ್ತು ನೌಶಾದ್ ಅವರನ್ನ ಬಂಧಿಸಿತ್ತು. ಇದೀಗ ಉಮರ್‌ನನ್ನ ಬಂಧಿಸಲಾಗಿದೆ. ಪ್ರವೀಣ್ ನೆಟ್ಟಾರು ಹತ್ಯೆ ಮಾಡುವ ಸಂಬಂಧ ಸಂಚಿನ ಭಾಗವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಟೌನ್‌ನಲ್ಲಿ ನಿಷೇಧಿತ ಪಿಎಫ್ಐ ಕಚೇರಿಯಲ್ಲಿ ಇತರ ಆರೋಪಿಗಳೊಂದಿಗೆ ಸಭೆ ಸೇರಿದ್ದ.

ಹತ್ಯೆಗಾಗಿ ಬೆಳ್ಳಾರೆ ಗ್ರಾಮದ ಸಂಭ್ಯಾವ ಗುರಿ ನಿಗದಿಪಡಿಸಲು ಆರೋಪಿಗಳಿಗೆ ತನ್ನ ಬೈಕ್ ನೀಡಿದ್ದ. ಹತ್ಯೆ ಬಳಿಕ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಮುಂದಾಗಿದ್ದ ವ್ಯಕ್ತಿಯನ್ನ ಕೊಲೆಗೆ ಸಂಚು ರೂಪಿಸಿದ್ದ ಎಂದು ವಿಚಾರಣೆ ವೇಳೆ ತಿಳಿದುಬಂದಿದೆ ಎಂದು ಎನ್‌ಐಎ ತಿಳಿಸಿದೆ.

## ಹರಿನಾಮ ಸಂಕೀರ್ತನೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ಈಜುಕೊಳ ಬಡಾವಣೆಯ ಸುಧೀಂದ್ರನಗರದ 6ನೇ ಅಡ್ಡರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಆಗಸ್ಟ್ 7, ಶುಕ್ರವಾರ ಸಂಜೆ 6-30ಕ್ಕೆ ಶ್ರೀಮತಿ ಸುಷ್ಮಾ ಜೋಯಿಸ್ ಇವರಿಂದ ಹರಿನಾಮ ಸಂಕೀರ್ತನೆ ಗಾಯನ ಕಾರ್ಯಕ್ರಮ ಏರ್ಪಡಿಸಿದ್ದು, ಇವರ ಗಾಯನಕ್ಕೆ ಹಾರ್ಮೋನಿಯಂ ವಾದನದಲ್ಲಿ ಶ್ರೀ ರಾಮು ಕೊಡೇಕಲ್ ಮತ್ತು ತಬಲಾ ವಾದನದಲ್ಲಿ ಶ್ರೀ ಭೀಮಾಶಂಕರ್ ಸಹಕರಿಸಲಿದ್ದಾರೆ ಎಂದು ಟಿಟಿಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ|| ಪಿ. ಭುಜಂಗರಾವ್ ತಿಳಿಸಿದ್ದಾರೆ.

## ಸಚಿವ ಸ್ಥಾನ ಸಿಗದಿರುವುದಕ್ಕೆ ಬ್ರಾಹ್ಮಣ ಮಹಾಸಭಾ ಪ್ರತಿಭಟನೆ

### ಕಳೆದ ಮೂರು ದಶಕಗಳಿಂದ ಇದೇ ಮೊದಲ ಬಾರಿಗೆ ಬ್ರಾಹ್ಮಣ ಸಮುದಾಯಕ್ಕೆ ರಾಜ್ಯದಲ್ಲಿ ಸಚಿವ ಸ್ಥಾನ ನೀಡಲಾಗಿಲ್ಲ ಎಂದು ಬ್ರಾಹ್ಮಣ ಮಹಾಸಭಾ ಅಸಮಾಧಾನ

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್ ಸರ್ಕಾರದ ಸಚಿವ ಸಂಪುಟದಲ್ಲಿ ಬ್ರಾಹ್ಮಣ ಸಮುದಾಯಕ್ಕೆ ಪ್ರಾತಿನಿಧ್ಯ ನೀಡದಿರುವುದನ್ನು ಖಂಡಿಸಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಇಂದು ನಗರದ ಫ್ರೀಡಂ ಪಾರ್ಕ್ ನಲ್ಲಿ ಪ್ರತಿಭಟನೆ ನಡೆಸಿತು. ಸ್ವಾತಂತ್ರ್ಯಾ ನಂತರದ ಕರ್ನಾಟಕದ ರಾಜಕೀಯ ಇತಿಹಾಸ ಅಥವಾ ಕಳೆದ ಮೂರು ದಶಕಗಳಿಂದ ಇದೇ ಮೊದಲ ಬಾರಿಗೆ ಬ್ರಾಹ್ಮಣ ಸಮುದಾಯಕ್ಕೆ ಸಚಿವ ಸ್ಥಾನ ನೀಡಲಾಗಿಲ್ಲ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು. ಆದರೆ, ಮೂವರು ಬ್ರಾಹ್ಮಣ ಶಾಸಕರ ಪೈಕಿ ಯಾರೊಬ್ಬರಿಗೂ ಸಂಪುಟದಲ್ಲಿ ಸ್ಥಾನ ಸಿಕ್ಕಿಲ್ಲ. ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಬ್ರಾಹ್ಮಣರು ಸುಮಾರು ಶೇ.2 ರಿಂದ 3 ರಷ್ಟಿದ್ದಾರೆ ಎಂದು ತಿಳಿಸಿದರು. ಸಮುದಾಯದ ಮೂವರು ಶಾಸಕರನ್ನು ಹೊರಗಿಟ್ಟು ಸಚಿವ ಸ್ಥಾನ ನೀಡದಿರುವುದು ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ರಾಜಕೀಯ ಸಮಾನತೆಯ ಮೇಲೆ ಪ್ರಶ್ನೆಗಳನ್ನು ಮೂಡಿಸುತ್ತದೆ ಎಂದು ಹಿರಿಯ ವಕೀಲ ದಿವಾಕರ್ ತಿಳಿಸಿದರು. ಸಮಾನತೆ ಎಂಬುದು ಕೇವಲ ಭಾಷಣಕ್ಕೆ ಸೀಮಿತವಲ್ಲ. ಕಾಂಗ್ರೆಸ್ ಅಥವಾ ಬಿಜೆಪಿ ಇರಲಿ, ಎಲ್ಲಾ ರಾಜಕೀಯ ಪಕ್ಷಕ್ಕೂ ಎಲ್ಲಾ ಸಮುದಾಯಗಳ ಅವಶ್ಯಕತೆ ಇದೆ. ಸಮಾಜದ ಇತರ


ಉದಯವಾಹಿನಿ ಚಿತ್ರ

ವರ್ಗಗಳಿಗೆ ನೀಡಲಾಗುವ ಪರಿಗಣನೆ ಮತ್ತು ಸೌಲಭ್ಯಗಳನ್ನು ಬ್ರಾಹ್ಮಣರೂ ಪಡೆಯಬೇಕು ಎಂದರು. ಈ ಪ್ರತಿಭಟನೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ವೈಯಕ್ತಿಕಗೊಳಿಸಿ, ನೇರ ವಿರೋಧವನ್ನು ವ್ಯಕ್ತಪಡಿಸುವುದಿಲ್ಲ. ಅವರನ್ನು ಸರ್ಕಾರದ ನಿರ್ಧಾರದಲ್ಲಿ ನ್ಯಾಯಸಮ್ಮತವಾಗಿ ನಡೆಸಿಕೊಳ್ಳಬೇಕಿದೆ. ಬ್ರಾಹ್ಮಣರು ಕೇವಲ ಪಿಎ, ಪಿಎಸ್, ಪಿಆರ್, ಸೆಕ್ರೆಟರಿಯಾಗಿ ಮಾತ್ರ ಅವರಿಗೆ ಬೇಕಾಗಿದೆ. ಇದರ ಹೊರತು ಸಚಿವರಾಗಿ ಅಲ್ಲ. ಸಚಿವರು ಯಾವುದೇ ತಾರತಮ್ಯವಿಲ್ಲದೆ ಎಲ್ಲಾ ನಾಗರಿಕರಿಗೆ ಸೇವೆ ಸಲ್ಲಿಸಬೇಕು ಮತ್ತು ನ್ಯಾಯಯುತ ಬೇಡಿಕೆಗಳಿಗೆ ಅವುಗಳ ಅರ್ಹತೆಯ ಆಧಾರದ ಮೇಲೆ ಸ್ಪಂದಿಸಬೇಕು ಎಂದರು. ನಿಜವಾದ ನಾಯಕರು ಜನರ ಅಗತ್ಯಗಳನ್ನು ಅರ್ಥ ಮಾಡಿಕೊಂಡು ಪಾರದರ್ಶಕವಾಗಿ ಕಾರ್ಯನಿರ್ವಹಿಸಬೇಕು. ನಾಗರಿಕರು ತಮ್ಮ ನ್ಯಾಯಸಮ್ಮತ ಬೇಡಿಕೆಗಳನ್ನು ಪದೇ ಪದೇ ಬೇಡಬಾರದು ಎಂದು ಹೇಳಿದರು. ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಮಹಿಳಾ ಮೋರ್ಚಾದ ಪ್ರಧಾನ ಕಾರ್ಯದರ್ಶಿ ರಮ್ಯಾ ಮಾತನಾಡಿ,

ಸಿಎಂ ಡಿ.ಕೆ.ಶಿವಕುಮಾರ್ ಅವರ ಸಂಪುಟದಲ್ಲಿ ಬಹುತೇಕ ಎಲ್ಲಾ ಸಚಿವ ಸ್ಥಾನ ಭರ್ತಿಯಾಗಿದೆ. ವಿವಿಧ ಸಮುದಾಯಗಳ ನಾಯಕರಿಗೆ ಅವಕಾಶ ಕಲ್ಪಿಸಲಾಗಿದೆ. ಮುಸ್ಲಿಂ ಸಮುದಾಯದ ಪ್ರಾತಿನಿಧ್ಯ ಮೂವರು ಸಚಿವರ ಮಟ್ಟಕ್ಕೆ ಏರಿಕೆಯಾಗಿದೆ.

**ಶಾಂತಿಯುತ ಹೋರಾಟ**

ನಮ್ಮ ಪ್ರತಿಭಟನೆ ಕಾಂಗ್ರೆಸ್ ಪಕ್ಷದ ನಿರ್ಧಾರದ ಕುರಿತಾಗಿದೆ. ಪಕ್ಷವು ಬ್ರಾಹ್ಮಣ ಸಮುದಾಯಕ್ಕೆ ಪ್ರಾತಿನಿಧ್ಯ ನೀಡದಿರುವ ಕುರಿತಾಗಿದೆ. ಇದು ರಾಜಕೀಯದಲ್ಲಿ ನಮ್ಮ ಸ್ಥಾನದ ಹಕ್ಕಿನ ಕುರಿತು ಶಾಂತಿಯುತ ಹೋರಾಟ. ಸಂಪುಟದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡದಿರುವುದೂ ಕೂಡ ನಮ್ಮ ಕಾಳಜಿಯಾಗಿದೆ. ಈ ಎರಡು ವಿಚಾರವನ್ನು ಸರ್ಕಾರದ ಗಮನಕ್ಕೆ ತರುವುದು ನಮ್ಮ ಉದ್ದೇಶ ಎಂದು ಪರಿಸರ ಚಂದ್ರಶೇಖರ್ ತಿಳಿಸಿದರು. ಮಹಾಸಭಾದ ಮತ್ತೊಬ್ಬ ಸದಸ್ಯ ಅರುಣ್ ಕುಮಾರ್ ಶರ್ಮಾ ಮಾತನಾಡಿ, ಬ್ರಾಹ್ಮಣರು ಇಂದು ನಿಜವಾದ ಅಲ್ಪಸಂಖ್ಯಾತ ಸಮುದಾಯವಾಗಿದೆ. ಕಳೆದ 30 ವರ್ಷಗಳಿಂದ ಈ ಸಮುದಾಯವು ಸತತವಾಗಿ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ಪಡೆದುಕೊಂಡು ಬಂದಿದೆ. ಹಾಗಾಗಿ, ಸದ್ಯ ಸಂಪುಟದಲ್ಲಾದ ಪ್ರಾತಿನಿಧ್ಯದ ಸಮಸ್ಯೆ ಸರಿಪಡಿಸುವಂತೆ ಕಾಂಗ್ರೆಸ್ ನಾಯಕತ್ವವನ್ನು ಒತ್ತಾಯಿಸಿದರು. ದಿನೇಶ್ ಗುಂಡೂರಾವ್ ಅಥವಾ ಆರ್.ವಿ.ದೇಶಪಾಂಡೆ ಅವರಿಗೆ ಸಚಿವ ಸ್ಥಾನ ನೀಡಬೇಕು. ಇನ್ನೂ ಒಂದು ಸಚಿವ ಸ್ಥಾನ ಖಾಲಿ ಇದ್ದು, ಸಿಎಂ ನಮ್ಮ ಪ್ರಾತಿನಿಧ್ಯದ ಪ್ರಾಮುಖ್ಯತೆಯನ್ನು ಅರ್ಥ ಮಾಡಿಕೊಂಡು ಸೂಕ್ತ ನಿರ್ಧಾರ ಕೈಗೊಳ್ಳುವ ವಿಶ್ವಾಸವಿದೆ. ನಮ್ಮ ಬೇಡಿಕೆಯನ್ನು ನಿರಾಕರಿಸಿದಲ್ಲಿ, ಈ ಪ್ರತಿಭಟನೆಯನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಮತ್ತೊಬ್ಬ ಸದಸ್ಯರು, ಬ್ರಾಹ್ಮಣರು ವಿಶಾಲ ಹಿಂದೂ ಜನಸಂಖ್ಯೆಯ ಭಾಗವಾಗಿದ್ದರೂ, ಅವರು ಸಂಖ್ಯೆಯ ದೃಷ್ಟಿಯಿಂದ ಪ್ರತ್ಯೇಕ ಅಲ್ಪಸಂಖ್ಯಾತ ಗುಂಪಾಗಿಯೇ ಉಳಿದಿದ್ದಾರೆ. ರಾಜಕೀಯ ಪಕ್ಷಗಳು ಪ್ರತಿಯೊಂದು ಸಮುದಾಯದ ಕೊಡುಗೆಯೊಂದಿಗೆ ಕಾರ್ಯನಿರ್ವಹಿಸುತ್ತವೆ ಎಂದರು.

ಅಂತರಾಳದಿಂದ.. EDITORIAL

# ಶಾಲಾ ಮಕ್ಕಳ ಮನೋಸ್ಥೈರ್ಯ ಹೆಚ್ಚಿಸುವ ಕಾರ್ಯವಾಗಲಿ



ರಾಜ್ಯದ ಸರಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಮನೋ ಆರೋಗ್ಯ ಸಮಸ್ಯೆಗಳ ಪರಿಣಾಮಕಾರಿ. ನಿರ್ವಹಣೆಗಾಗಿ ರಾಜ್ಯದ ಎಲ್ಲಾ ಶೈಕ್ಷಣಿಕ ಬ್ಲಾಕ್‌ಗಳಲ್ಲಿ ಮಾನಸಿಕ ಆರೋಗ್ಯ ಸಲಹೆಗಾರರನ್ನು ನೇಮಕ ಮಾಡಲು ರಾಜ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ತೀರ್ಮಾನಿಸಿದೆ. ವಿದ್ಯಾರ್ಥಿಗಳಲ್ಲಿನ ಮಾನಸಿಕ ಒತ್ತಡವನ್ನು ನಿವಾರಿಸಿ ಅವರು ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವಂತೆ ಮಾಡುವ ಮೂಲಕ ಫಲಿತಾಂಶ ಸುಧಾರಣೆಗೆ ಇಲಾಖೆ ಮುಂದಾಗಿದೆ. ಎಸೆಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪಬ್ಲಿಕ್ ಪರೀಕ್ಷೆಗಳು ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದ 2 ಮಹತ್ವದ ಘಟ್ಟಗಳಾಗಿವೆ. ಈ ಹಂತದಲ್ಲಿ ವಿದ್ಯಾರ್ಥಿಗಳು ಅತ್ಯಧಿಕ ಅಂಕಗಳನ್ನು ಪಡೆಯಬೇಕೆಂಬುದು ಶಾಲಾ ಶಿಕ್ಷಕರು ಮತ್ತು ಮಕ್ಕಳ ಹೆತ್ತವರ ಅಭಿಲಾಷೆಯಾಗಿರುತ್ತದೆ. ಈ ಕಾರಣಕ್ಕಾಗಿ ಪ್ರೌಢಶಾಲೆ ಮತ್ತು ಪದವಿಪೂರ್ವ ಶಿಕ್ಷಣ ಹಂತದಲ್ಲಿ ಬೋಧನೆ ಮತ್ತು ಪರೀಕ್ಷೆಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಸರಕಾರ ಕೂಡ ಶೈಕ್ಷಣಿಕ ಗುಣಮಟ್ಟ ವೃದ್ಧಿ, ಸರಕಾರಿ ಶಾಲೆಗಳ ಫಲಿತಾಂಶ ಸುಧಾರಣೆಗೆ ಹೆಚ್ಚಿನ ಆದ್ಯತೆ ನೀಡುತ್ತಾ ಬಂದಿದ್ದು ಇದಕ್ಕಾಗಿ ವಿವಿಧ ಉಪಕ್ರಮಗಳನ್ನು ಜಾರಿಗೊಳಿಸಿದೆ. ಈ ಕಟ್ಟುನಿಟ್ಟಿನ ಕ್ರಮಗಳಿಂದಾಗಿ ವಿದ್ಯಾರ್ಥಿಗಳ ಮೇಲೆ ಒತ್ತಡ ಹೆಚ್ಚುತ್ತಿದ್ದು ಅವರು ವಿವಿಧ ತೆರನಾದ ಮನೋ ಆರೋಗ್ಯ ಸಮಸ್ಯೆಗಳಿಂದ ಬಳಲುವಂತಾಗಿದೆ. ಕೆಲವು ಪ್ರಕರಣಗಳಲ್ಲಂತೂ ಇದು ಮಕ್ಕಳಲ್ಲಿ ಹತಾಶೆಯ ಮನೋಭಾವ ಮೂಡುವಂತೆ ಮಾಡಿದೆ. ಈ ಸಮಸ್ಯೆ ಉಲ್ಬಣಿಸಿದಾಗ ಮಕ್ಕಳು ಆತ್ಮಹತ್ಯೆಗೆ ಶರಣಾದ ಪ್ರಕರಣಗಳೂ ಇವೆ. ಇವೆಲ್ಲದರ ಹಿನ್ನೆಲೆಯಲ್ಲಿ ಶಾಲಾ ಮಕ್ಕಳ ಮೇಲಿನ ಒತ್ತಡ ಕಡಿಮೆ ಮಾಡಲು ಮತ್ತು ಅವರ ಮನೋಸ್ಥೈರ್ಯವನ್ನು ಹೆಚ್ಚಿಸಲು ಆಪ್ತ ಸಮಾಲೋಚಕರನ್ನು ನೇಮಿಸಬೇಕು ಎಂಬ ಸಲಹೆಯನ್ನು ತಜ್ಞರು ಇಲಾಖೆಗೆ ನೀಡುತ್ತಲೇ ಬಂದಿದ್ದರು. ಈಗ ಶಿಕ್ಷಣ ಇಲಾಖೆ ಈ ಸಲಹೆಯನ್ನು ಕಾರ್ಯರೂಪಕ್ಕೆ ತರಲು ಮುಂದಾಗಿರುವುದು ಸಂತಸದ ವಿಷಯ. ಯಾವುದೇ ವಿದ್ಯಾರ್ಥಿ ಗಂಭೀರ ರೀತಿಯ ಮಾನಸಿಕ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದುದೇ ಆದರೆ ಆರೋಗ್ಯ ಇಲಾಖೆಯ ತಜ್ಞರಿಂದ ಸಲಹೆ ಪಡೆದುಕೊಳ್ಳಲು ಸೂಚನೆ ನೀಡಲಿರುವರು.

**ಮನೋ ಆರೋಗ್ಯ ಆಪ್ತ ಸಮಾಲೋಚಕರ ನೇಮಕದ ಜತೆಯಲ್ಲಿ ಅವರ ಹೊಣೆಗಾರಿಕೆ ಮತ್ತು ಕರ್ತವ್ಯಗಳ ಕುರಿತಂತೆ ಮಾರ್ಗಸೂಚಿಯನ್ನು ರೂಪಿಸಿದೆ. ತಾಲೂಕಿಗೆ ಒಬ್ಬರಂತೆ ಆಪ್ತ ಸಮಾಲೋಚಕರನ್ನು ನೇಮಿಸಲು ನಿರ್ಧರಿಸಲಾಗಿದ್ದು ಅವರು ಆಯಾಯ ಶೈಕ್ಷಣಿಕ ಬ್ಲಾಕ್‌ನಲ್ಲಿರುವ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಹೊಣೆಗಾರಿಕೆಯನ್ನು ಹೊಂದಿರಲಿದ್ದಾರೆ. ಆಪ್ತ ಸಮಾಲೋಚಕರು ವಿದ್ಯಾರ್ಥಿಗಳು ಮತ್ತವರ ಹೆತ್ತವರೊಂದಿಗೂ ಸಮಾಲೋಚನೆ ನಡೆಸಿ ಮಕ್ಕಳಲ್ಲಿ ಮನೋ ಆರೋಗ್ಯ ಸಮಸ್ಯೆಗಳಿದ್ದಲ್ಲಿ ಪ್ರಾಥಮಿಕ ಹಂತದಲ್ಲಿಯೇ ಅದನ್ನು ಗುರುತಿಸಿ, ಅವುಗಳ ಸಮರ್ಥ ನಿರ್ವಹಣೆ ಮತ್ತು ನಿವಾರಣೆಗೆ ಸಲಹೆ ಸೂಚನೆ ನೀಡಲಿದ್ದಾರೆ.**

ಮಕ್ಕಳಲ್ಲಿ ಮನೋ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳ ಲಕ್ಷಣಗಳು ಕಂಡುಬಂದಲ್ಲಿ ಮಕ್ಕಳ ಹೆತ್ತವರು ಆಪ್ತ ಸಮಾಲೋಚಕರ ಗಮನಕ್ಕೆ ತಂದು ಅವರಿಂದ ಮಾರ್ಗದರ್ಶನ ಪಡೆದುಕೊಳ್ಳಲು ಹಿಂಜರಿಯಬಾರದು. ಇನ್ನು ಇಂತಹ ವಿದ್ಯಾರ್ಥಿಗಳ ಬಗೆಗೆ ಇತರ ಮಕ್ಕಳು, ಶಾಲಾ ಶಿಕ್ಷಕ ಮತ್ತು ಸಿಬಂದಿ ವರ್ಗ ತಾರತಮ್ಯ ಧೋರಣೆ ಅನುಸರಿಸದಿರುವ ಮೂಲಕ ಮಕ್ಕಳಲ್ಲಿ ಕೀಳರಿಮೆಯ ಮನೋಭಾವ ಬೆಳೆಯದಂತೆ ಎಚ್ಚರಿಕೆ ವಹಿಸಬೇಕು. ಮಕ್ಕಳು ಶೈಕ್ಷಣಿಕ ಕಾರಣಗಳಿಂದ ಮಾನಸಿಕ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರೆ ಇದರ ನಿರ್ವಹಣೆಯ ಜತೆಜತೆಯಲ್ಲಿ ಈ ಸಮಸ್ಯೆಯ ಮೂಲ ಕಾರಣವನ್ನು ಪತ್ತೆ ಹಚ್ಚಿ ಅದನ್ನು ಸರಿಪಡಿಸಲು ಶಿಕ್ಷಣ ಇಲಾಖೆ ಪ್ರಾಮಾಣಿಕ ಪ್ರಯತ್ನ ನಡೆಸಬೇಕು.



ಕಲಾ ಸಾಹಿತ್ಯ

ವೈ.ಕೆ. ಸಂಧ್ಯಾಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

# ತಸ್ಮೈ ಶ್ರೀ ಗುರುವೇ ನಮಃ ಅರ್ಕ ಕಲಾ ಫೌಂಡೇಶನ್ ಅರ್ಪಣೆ

**ವಿ. ಭಾನುಪ್ರಿಯಾರ ನೃತ್ಯಯಾನವನ್ನು ರೂಪಿಸಿದ ಗುರುತ್ರಯರಾದ ಶ್ರೀಮತಿಯರಾದ ರೇವತಿ ನರಸಿಂಹನ್, ಇಂದಿರಾ ಕದಾಂಬಿ ಹಾಗೂ ವೈಜಯಂತಿ ಕಾಶಿ ಅವರಿಗೆ ಗುರುವಂದನೆಯನ್ನು ಅರ್ಪಿಸುವ ಕಾರ್ಯಕ್ರಮ ಇದಾಗಿದೆ.**

ನೃತ್ಯಗುರು-ಕಲಾವಿದೆ ವಿದುಷಿ ಭಾನುಪ್ರಿಯ ರಾಕೇಶ್, ಭರತನಾಟ್ಯ ಕಲಾವಿದೆಯರಲ್ಲಿ ತಮ್ಮದೇ ಆದ ಅಸ್ಮಿತೆಯನ್ನು ಸಾಬೀತುಗೊಳಿಸಿರುವ ಪ್ರೌಢ ಕಲಾವಿದೆ ಮತ್ತು ಬದ್ಧತೆಯುಳ್ಳ ಆಚಾರ್ಯರಾಗಿ ವಿಶಿಷ್ಟಸ್ಥಾನ ಪಡೆದಿದ್ದಾರೆ. ಪ್ರಸ್ತುತ ಅವರ ನೇತೃತ್ವದ ಅರ್ಕ ಕಲಾ ಫೌಂಡೇಶನ್ ''ತಸ್ಮೈ ಶ್ರೀ ಗುರುವೇ ನಮಃ'' ಎಂಬ ವಿಶಿಷ್ಟ ಅರ್ಥಪೂರ್ಣ ಶೀರ್ಷಿಕೆಯಲ್ಲಿ ಗುರುಪರಂಪರೆಗೆ ನಮನ ಸಲ್ಲಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಅದು ವಿ. ಭಾನುಪ್ರಿಯರ ಕಲಾಪಯಣವನ್ನು ರೂಪಿಸಿದ ಗುರುಗಳಿಗೆ, ಅವರಿಂದ ಅರ್ಜಿಸಿದ ವಿದ್ಯೆ-ಸಂಸ್ಕಾರಗಳಿಗೆ ಹಾಗೂ ಗುರುಶಿಷ್ಯ ಪರಂಪರೆಗೆ ಆತ್ಮೀಯತೆಯಿಂದ ಸಲ್ಲಿಸುವ ಕೃತಜ್ಞತೆಯ ಅರ್ಪಣಾ ಕಾರ್ಯಕ್ರಮ.

ಬೆಂಗಳೂರಿನ ದೊಡ್ಡಕಲ್ಲಸಂದ್ರದಲ್ಲಿರುವ ಮೀನಾಕ್ಷಿ ರಂಗಮಂಚ ಆಡಿಟೋರಿಯಂನಲ್ಲಿ ಇದೇ ತಿಂಗಳ 8 ನೇ ತಾ. ಶನಿವಾರ ಬೆಳಗ್ಗೆ ಮತ್ತು ಸಂಜೆ ಗುರು -ಶಿಷ್ಯರಿಂದ ನೃತ್ಯ ವೈವಿಧ್ಯ ಕಾರ್ಯಕ್ರಮಗಳು ನಡೆಯಲಿವೆ. ತಸ್ಮೈ ಶ್ರೀ ಗುರುವೇ ನಮಃ ಉತ್ಸವವನ್ನು ಎರಡು ಭಾಗಗಳಲ್ಲಿ ರೂಪಿಸಲಾಗಿದೆ.

ಬೆಳಗಿನ ಅರ್ಕ ಗುರುವಂದನಾ ಕಾರ್ಯಕ್ರಮದಲ್ಲಿ, ಗುರು ರೇವತಿ ನರಸಿಂಹನ್ ಅವರ ಸಾನ್ನಿಧ್ಯದಲ್ಲಿ ಭಾನುಪ್ರಿಯ ರಾಕೇಶ್ ತಮ್ಮ 21 ಶಿಷ್ಯರೊಂದಿಗೆ ಅವರ ನೃತ್ಯರಚನೆಗಳನ್ನು ನೇರ ವಾದ್ಯವೃಂದದೊಂದಿಗೆ ಪ್ರಸ್ತುತಪಡಿಸುತ್ತಿದ್ದಾರೆ. ಇದರೊಂದಿಗೆ, ರೇವತಿ ಅವರ 'ನಾಟ್ಯ ನಿಕೇತನ'ದ ಶಿಷ್ಯರ ಪ್ರಸ್ತುತಿಯೂ ನಡೆಯಲಿದ್ದು, ಗುರುಶಿಷ್ಯ ಪರಂಪರೆಯ ಹಲವು ಪೀಳಿಗೆಗಳು ಒಂದೇ ವೇದಿಕೆಯಲ್ಲಿ ಸಮಾಗಮವಾಗುವ ಅಪರೂಪದ ಸಂದರ್ಭಕ್ಕೆ ಇದು ಸಾಕ್ಷಿಯಾಗಲಿದೆ. ಸಂಜೆಯ 'ಅರ್ಕ ಕಲಾಸಂಭ್ರಮ'ದಲ್ಲಿ ಶ್ರೀಮತಿ ವೈಜಯಂತಿ ಕಾಶಿ ಮತ್ತು ಅವರ ಪುತ್ರಿ -ಶಿಷ್ಯೆ ಪ್ರತೀಕ್ಷಾ ಕಾಶಿ ಅವರೊಂದಿಗೆ 'ಅನುಬಂಧ' ಕೂಚಿಪುಡಿ ಯುಗಳನೃತ್ಯವನ್ನು ಪ್ರಸ್ತುತಪಡಿಸಲಿದ್ದಾರೆ. ಅನಂತರ- ಇಂದಿರಾ ಕದಂಬಿ 'ಅಂಬಳಂ ಎನ್ಸೆಂಬಲ್'ನೊಂದಿಗೆ ''ವರ್ಷ ಋತು'' ನೃತ್ಯಪ್ರಸ್ತುತಿಯನ್ನು ನೀಡಲಿದ್ದಾರೆ. ಈ ಮಹತ್ವದ ಅರ್ಥಪೂರ್ಣ ಕಾರ್ಯಕ್ರಮದ ಆಯೋಜನೆ ಮತ್ತು ಪರಿಕಲ್ಪನೆ 'ಅರ್ಕ ಕಲಾ ಫೌಂಡೇಶನ್' ಕಲಾ ನಿರ್ದೇಶಕಿ ಭಾನುಪ್ರಿಯಾ ರಾಕೇಶ್ ಅವರದು. ಮನೋಲ್ಲಾಸ ನೀಡುವ ಈ ಕಣ್ಮನ ತುಂಬುವ ಕಾರ್ಯಕ್ರಮಕ್ಕೆ ಎಲ್ಲರಿಗೂ ಆದರದ ಸುಸ್ವಾಗತ.





ಲೇಖಕರು

ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

**ಕೃಷಿ ಇಲಾಖೆಯ ಈ ಕ್ರಮವು ಕೇವಲ ಒಂದು ಯಂತ್ರ ಅಳವಡಿಸುವ ಕಾರ್ಯವಲ್ಲ. ಇದು ರೈತ ಸ್ನೇಹಿ ಆಡಳಿತದ ಪ್ರತಿಬಿಂಬವಾಗಿದೆ. ಗ್ರಾಮೀಣ ಪ್ರದೇಶಗಳ ಅಗತ್ಯಗಳನ್ನು ಅರಿತು ತಂತ್ರಜ್ಞಾನವನ್ನು ರೈತರ ಸೇವೆಗೆ ಬಳಸುವ ಪ್ರಯತ್ನವಾಗಿ ಇದನ್ನು ನೋಡಬಹುದು. ಮುಂದಿನ ದಿನಗಳಲ್ಲಿ ಇಂತಹ ಮಳೆ ಮಾಪನ ಕೇಂದ್ರಗಳನ್ನು ಇತರ ಗ್ರಾಮಗಳಲ್ಲಿಯೂ ಸ್ಥಾಪಿಸಿದರೆ, ಸಂಪೂರ್ಣ ಪ್ರದೇಶದ ಹವಾಮಾನ ಮಾಹಿತಿ ಇನ್ನಷ್ಟು ನಿಖರವಾಗಿ ಲಭ್ಯವಾಗಲಿದೆ.**

# ಶಿಶಿಲದಲ್ಲಿ ನೂತನ ಮಳೆ ಮಾಪನ ಯಂತ್ರ ಅಳವಡಿಕೆ: ರೈತರ ಆಶಯಕ್ಕೆ ಕೃಷಿ ಇಲಾಖೆಯ ಸ್ಪಂದನೆ

ಹವಾಮಾನ ವೈಪರೀತ್ಯ, ಅನಿಯಮಿತ ಮಳೆ ಹಾಗೂ ಕೃಷಿ ಕ್ಷೇತ್ರದ ಅನಿಶ್ಚಿತತೆ ಇಂದಿನ ರೈತ ಸಮುದಾಯ ಎದುರಿಸುತ್ತಿರುವ ಪ್ರಮುಖ ಸವಾಲುಗಳಾಗಿವೆ. ಇಂತಹ ಸಂದರ್ಭದಲ್ಲಿ ಮಳೆಯ ಪ್ರಮಾಣವನ್ನು ನಿಖರವಾಗಿ ದಾಖಲಿಸುವ ವ್ಯವಸ್ಥೆಯು ಕೃಷಿಗೆ ಅತ್ಯಂತ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸಕಲೇಶಪುರ ತಾಲ್ಲೂಕಿನ ಶಿಶಿಲ ಗ್ರಾಮದಲ್ಲಿ ನೂತನ ಮಳೆ ಮಾಪನ ಯಂತ್ರ ಅಳವಡಿಸಿರುವುದು ರೈತರ ಬಹುಕಾಲದ ಬೇಡಿಕೆಗೆ ದೊರೆತ ಮಹತ್ವದ ಸ್ಪಂದನೆಯಾಗಿದೆ. ಸುತ್ತಮುತ್ತಲಿನ ಪ್ರದೇಶಗಳು ಮಲೆನಾಡಿನ ವ್ಯಾಪ್ತಿಗೆ ಸೇರಿದ್ದು, ಇಲ್ಲಿ ಮಳೆಯ ಪ್ರಮಾಣ ಒಂದೇ ತಾಲ್ಲೂಕಿನ ಇತರ ಭಾಗಗಳಿಗಿಂತ ಸಾಕಷ್ಟು ವ್ಯತ್ಯಾಸ ಹೊಂದಿರುತ್ತದೆ. ಆದರೆ ಇದುವರೆಗೆ ನಿಖರವಾದ ಮಳೆ ದಾಖಲೆಗಳ ಕೊರತೆಯಿಂದ ರೈತರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಬೆಳೆ ವಿಮೆ, ಬೆಳೆ ಹಾನಿ ಪರಿಹಾರ, ಕೃಷಿ ಯೋಜನೆಗಳು ಹಾಗೂ ಸರ್ಕಾರಿ ನೆರವು ಪಡೆಯುವ ಸಂದರ್ಭದಲ್ಲಿ ಅಧಿಕೃತ ಮಳೆ ಮಾಹಿತಿಯ ಅಭಾವ ರೈತರಿಗೆ ತೊಂದರೆಯಾಗುತ್ತಿತ್ತು. ಇದೀಗ ಅಳವಡಿಸಿರುವ ನೂತನ ಮಳೆ ಮಾಪನ ಯಂತ್ರ ಈ ಸಮಸ್ಯೆಗೆ ಪರಿಣಾಮಕಾರಿ ಪರಿಹಾರ ಒದಗಿಸುವ ನಿರೀಕ್ಷೆ ಮೂಡಿಸಿದೆ. ಮಳೆಯ ಪ್ರಮಾಣವನ್ನು ವೈಜ್ಞಾನಿಕವಾಗಿ ದಾಖಲಿಸುವ ಈ ಯಂತ್ರವು ಪ್ರತಿದಿನದ ಮಳೆ ಮಾಹಿತಿಯನ್ನು ನಿಖರವಾಗಿ ಸಂಗ್ರಹಿಸುತ್ತದೆ. ಈ ಅಂಕಿ-ಅಂಶಗಳು ಕೃಷಿ ಇಲಾಖೆಗೆ ಮಾತ್ರವಲ್ಲದೆ, ಹವಾಮಾನ ಇಲಾಖೆ, ವಿಪತ್ತು ನಿರ್ವಹಣಾ ಸಂಸ್ಥೆಗಳು ಹಾಗೂ ವಿವಿಧ ಸಂಶೋಧನಾ ಸಂಸ್ಥೆಗಳಿಗೂ ಉಪಯುಕ್ತವಾಗಲಿವೆ. ಮಳೆಯ ಸ್ವರೂಪ ಮತ್ತು ಪ್ರಮಾಣದ ಆಧಾರದ ಮೇಲೆ ಕೃಷಿ ತಜ್ಞರು ರೈತರಿಗೆ ಸೂಕ್ತ ಬೆಳೆ, ಬಿತ್ತನೆ ಸಮಯ ಹಾಗೂ ನೀರಿನ ನಿರ್ವಹಣೆ ಕುರಿತು ಹೆಚ್ಚು ಪರಿಣಾಮಕಾರಿ ಸಲಹೆಗಳನ್ನು ನೀಡಲು ಸಾಧ್ಯವಾಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಹವಾಮಾನ ಬದಲಾವಣೆಯಿಂದ ಮಳೆಯ ಮಾದರಿಯಲ್ಲಿ ಗಮನಾರ್ಹ ವ್ಯತ್ಯಾಸ ಕಂಡುಬರುತ್ತಿದೆ. ಕೆಲವೊಮ್ಮೆ ಅತಿವೃಷ್ಟಿ, ಮತ್ತೊಮ್ಮೆ ಅಲ್ಪವೃಷ್ಟಿಯಿಂದ ರೈತರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸ್ಥಳೀಯ ಮಟ್ಟದಲ್ಲಿ ಲಭ್ಯವಾಗುವ ನಿಖರ ಮಳೆ ಮಾಹಿತಿಯು ಬೆಳೆ ಯೋಜನೆ ರೂಪಿಸಲು ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ನೆರವಾಗುತ್ತದೆ.




ಕೃಷಿ ಕ್ಷೇತ್ರದಲ್ಲಿ ವೈಜ್ಞಾನಿಕ ಮಾಹಿತಿಯ ಬಳಕೆ ಹೆಚ್ಚಿದಷ್ಟೂ ರೈತರ ನಿರ್ಧಾರಗಳು ಹೆಚ್ಚು ಪರಿಣಾಮಕಾರಿಯಾಗಲಿವೆ. ಈ ಮಳೆ ಮಾಪನ ಯಂತ್ರದಿಂದ ಬೆಳೆ ವಿಮೆ ಯೋಜನೆಗಳ ಅನುಷ್ಠಾನಕ್ಕೂ ಹೆಚ್ಚಿನ ಪಾರದರ್ಶಕತೆ ಬರಲಿದೆ.

ಪ್ರಕೃತಿ ವಿಕೋಪದಿಂದ ಬೆಳೆ ನಷ್ಟವಾದ ಸಂದರ್ಭದಲ್ಲಿ ಸ್ಥಳೀಯ ಮಳೆ ದಾಖಲೆಗಳು ಪ್ರಮುಖ ಸಾಕ್ಷ್ಯವಾಗಲಿದ್ದು, ಪರಿಹಾರ ವಿತರಣೆಯ ಪ್ರಕ್ರಿಯೆಯೂ ಹೆಚ್ಚು ನ್ಯಾಯಸಮ್ಮತವಾಗಲಿದೆ. ಇದರಿಂದ ರೈತರಲ್ಲಿ ಸರ್ಕಾರದ ಯೋಜನೆಗಳ ಬಗ್ಗೆ ವಿಶ್ವಾಸವೂ ಹೆಚ್ಚಲಿದೆ.

ಒಟ್ಟಾರೆ, ಶಿಶಿಲದಲ್ಲಿ ನೂತನ ಮಳೆ ಮಾಪನ ಯಂತ್ರ ಅಳವಡಿಸಿರುವುದು ಕೃಷಿ ಇಲಾಖೆಯ ದೂರದೃಷ್ಟಿಯ ನಿರ್ಧಾರವಾಗಿದೆ. ಇದು ರೈತರ ಬಹುಕಾಲದ ಬೇಡಿಕೆಯನ್ನು ಈಡೇರಿಸುವುದರ ಜೊತೆಗೆ, ವೈಜ್ಞಾನಿಕ ಕೃಷಿ, ನಿಖರ ಹವಾಮಾನ ಮಾಹಿತಿ ಹಾಗೂ ಪರಿಣಾಮಕಾರಿ ಕೃಷಿ ಯೋಜನೆಗಳಿಗೆ ಭದ್ರ ಅಡಿಪಾಯ ಹಾಕುವ ಮಹತ್ವದ ಹೆಜ್ಜೆಯಾಗಿದೆ. ರೈತರ ಕಲ್ಯಾಣ ಮತ್ತು ಕೃಷಿಯ ಅಭಿವೃದ್ಧಿಗೆ ಇಂತಹ ಉಪಕ್ರಮಗಳು ಮತ್ತಷ್ಟು ವಿಸ್ತರಿಸಲಿ ಎಂಬುದು ಪ್ರತಿಯೊಬ್ಬ ರೈತನ ಆಶಯವಾಗಿದೆ.



ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

45

# ಪರದೆಯಾಚೆ ಗುರಿ

ಇಂದಿನ ಡಿಜಿಟಲ್ ಲೋಕದಲ್ಲಿ ಸಾಮಾಜಿಕ ತಾಣಗಳು ವಿದ್ಯಾರ್ಥಿಗೆ ಒಂದೇ ಸಮಯದಲ್ಲಿ ಗುರು ಮತ್ತು ವಿಘ್ನ ಎರಡೂ ಆಗಿವೆ. ಒಂದು ಕಡೆ ಅವು ಅಪಾರ ಜ್ಞಾನದ ಬಾಗಿಲು ತೆರೆದರೆ, ಮತ್ತೊಂದೆಡೆ ಅಂತ್ಯವಿಲ್ಲದ ಫೀಡ್ ಜೀವನದ ಅಮೂಲ್ಯ ಕ್ಷಣಗಳನ್ನು ಮೌನವಾಗಿ ನುಂಗಿ ಹಾಕುತ್ತದೆ. ಹೀಗಾಗಿ ಬೆರಳ ತುದಿಯ ಹರಿವನ್ನು ಹಿಡಿತದಲ್ಲಿಟ್ಟುಕೊಳ್ಳುವ ಕಲೆ ಈಗ ಯಶಸ್ಸಿನ ಮೊದಲ ಮೆಟ್ಟಿಲಾಯಿತು.

ಮನೋವಿಜ್ಞಾನ ಹೇಳುವಂತೆ ನಿರಂತರ ಬೆರಳಾಡಿಸುವಿಕೆಯು ಮೆದುಳಿಗೆ ತತ್‌ಕ್ಷಣದ ಉಲ್ಲಾಸ ನೀಡುವ ರಾಸಾಯನಿಕಗಳನ್ನು ಉತ್ತೇಜಿಸುತ್ತದೆ.

ಇದರಿಂದ ಕ್ಷಣಿಕ ಖುಷಿ ದೊರೆಯುತ್ತದೆಯೇ ಹೊರತು ಗಮನದ ತೀಕ್ಷ್ಣತೆ ಮತ್ತು ಚಿಂತನೆಯ ಆಳ ಕುಸಿಯುತ್ತವೆ. ಪ್ರಜ್ಞಾಪೂರ್ವಕ ಬಳಕೆಯಿಂದ ಮಾತ್ರ ಬುದ್ಧಿಗೆ ಸಮತೋಲನ ದೊರೆತು ನೆನಪು ಬಲಗೊಳ್ಳುತ್ತದೆ. ಹರಿವನ್ನು ನಿಯಂತ್ರಿಸಿದವನು ಕಾಲದ ಬೆಲೆಯನ್ನು ಅರಿಯುತ್ತಾನೆ. ಅವನಲ್ಲಿ ಸ್ವಯಂ ಸಂಯಮ, ಗುರಿಯತ್ತ ನಿಶ್ಚಲ ನೋಟ ಮತ್ತು ಸ್ಪಷ್ಟ ಚಿಂತನೆ ಮೂಡುತ್ತದೆ. ಪರದೆಯನ್ನು ಆಳುವವನೇ ತನ್ನ ಭವಿಷ್ಯದ ಚಿತ್ರವನ್ನು ಸ್ವಂತ ಕೈಯಿಂದ ಬರೆಯುತ್ತಾನೆ.

**ಶಿಕ್ಷಣ ತಜ್ಞರ ದೃಷ್ಟಿಯಲ್ಲಿ ತಂತ್ರಜ್ಞಾನ ದಾಸನಾಗಬೇಕು, ಒಡೆಯನಲ್ಲ. ಕಲಿಕೆಗೆ ಪೂರಕವಾದ ಮಾಹಿತಿ, ಶೈಕ್ಷಣಿಕ ವಿಡಿಯೋ ಮತ್ತು ಜ್ಞಾನವರ್ಧಕ ಪುಟಗಳನ್ನು ಮಾತ್ರ ಆಯ್ದುಕೊಳ್ಳಬೇಕು. ವ್ಯರ್ಥವಾಗಿ ತೇಲುವ ಅಭ್ಯಾಸವನ್ನು ಕಡಿಮೆ ಮಾಡಿ, ಅಧ್ಯಯನದ ವೇಳೆ ಸಾಧನವನ್ನು ಕಣ್ಣಿನಿಂದ ದೂರವಿಡಬೇಕು. ಹೀಗೆ ಮಾಡಿದಾಗ ಮನಸ್ಸು ಚದುರದೆ ಏಕಾಗ್ರತೆ ಗಟ್ಟಿಯಾಗಿ, ಅರ್ಥಪೂರ್ಣ ಕಲಿಕೆ ಸಾಧ್ಯವಾಗುತ್ತದೆ.**





# ನಿಮಗೆ ಮತ್ತೆ ಮತ್ತೆ ತಲೆನೋವು ಬರಲು ಕಾರಣವೇನು?; ಈ ಅಭ್ಯಾಸಗಳಿಂದ ದೂರ ಇರಲು ತಜ್ಞರ ಸಲಹೆ!

ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಹಂತದಲ್ಲಿ ತಲೆನೋವು ಬರುವುದು ಸಾಮಾನ್ಯವಾಗಿರುತ್ತದೆ. ಸಾಂದರ್ಭಿಕ ಸೌಮ್ಯವಾದ ತಲೆನೋವಿನ ಬಗ್ಗೆ ಸಾಮಾನ್ಯವಾಗಿ ಚಿಂತಿಸಬೇಕಾಗಿಲ್ಲ. ಆದರೆ ನೋವಿನ ತೀವ್ರತೆ ಹಾಗೂ ಆವರ್ತನಕ್ಕೆ ಗಮನ ಕೊಡಬೇಕಾಗುತ್ತದೆ ಎಂದು ಆರೋಗ್ಯ ತಜ್ಞರು ಸಲಹೆ ನೀಡುತ್ತಾರೆ.

ತಲೆನೋವು ಅಸಾಮಾನ್ಯವಾಗಿದ್ದರೆ, ತೀವ್ರವಾಗಿದ್ದರೆ ಇಲ್ಲವೇ ಆಗಾಗ್ಗೆ ಸಂಭವಿಸುತ್ತಿದ್ದರೆ, ಇತರ ಆಧಾರವಾಗಿರುವ ಆರೋಗ್ಯ ಸಮಸ್ಯೆಗಳನ್ನು ತಳ್ಳಿಹಾಕಲು ವೈದ್ಯರನ್ನು ಸಂಪರ್ಕಿಸಬೇಕಾಗುತ್ತದೆ. ಸಾಂದರ್ಭಿಕ ಸೌಮ್ಯ ತಲೆನೋವಿನ ಬಗ್ಗೆ ಅಷ್ಟೊಂದು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಆದರೆ, ತಲೆನೋವಿನ ಕೆಲವು ಸಾಮಾನ್ಯ ಕಾರಣಗಳು ಜೀವನಶೈಲಿ, ಆಹಾರ ಪದ್ಧತಿಗೆ ಸಂಬಂಧಿಸಿವೆ ಅಂತಾರೆ ತಜ್ಞರು. ಊಟ ಬಿಡುವುದು ಇಲ್ಲವೇ ಅನಿಯಮಿತ ಸಮಯದಲ್ಲಿ ಸೇವಿಸುವುದು ರಕ್ತದಲ್ಲಿನ ಸಕ್ಕರೆ ಮಟ್ಟ ಕಡಿಮೆಯಾಗಲು ಕಾರಣವಾಗುತ್ತದೆ. ತಲೆನೋವು ವಿಶೇಷವಾಗಿ ಮೈಗ್ರೇನ್‌ಗೆ ಕಾರಣವಾಗಬಹುದು. ಇದನ್ನು ತಡೆಗಟ್ಟಲು, ಸಮಯಕ್ಕೆ ಸರಿಯಾಗಿ ಊಟ ಮಾಡಬೇಕಾಗುತ್ತದೆ ಎಂದು ವೈದ್ಯರು ಸಲಹೆ ನೀಡುತ್ತಾರೆ. ನಿರ್ಜಲೀಕರಣ ವಿವರಿಸಲಾಗದ ತಲೆನೋವಿನಿಂದ ತೊಂದರೆಗೊಳಗಾಗಿದ್ದರೆ, ತಜ್ಞರು ನಿಮ್ಮ ದೈನಂದಿನ ನೀರಿನ ಸೇವನೆಯನ್ನು ಪರಿಶೀಲಿಸಲು ಸೂಚಿಸುತ್ತಾರೆ. ಸಾಕಷ್ಟು ನೀರು ಕುಡಿಯದಿರುವುದು ತಲೆನೋವು ಉಂಟುಮಾಡಬಹುದು. ದೇಹವು ನಿರ್ಜಲೀಕರಣಗೊಂಡಾಗ ಮೆದುಳು ತಾತ್ಕಾಲಿಕವಾಗಿ ಸಂಕುಚಿತಗೊಳ್ಳುತ್ತದೆ. ಇದರಿಂದ ಮೆದುಳು ತಲೆಬುರುಡೆಯಿಂದ ಸ್ವಲ್ಪ ದೂರ ಸರಿಯುತ್ತದೆ. ಇದು ತಲೆನೋವಿಗೆ ಕಾರಣವಾಗುತ್ತದೆ. ಸಾಕಷ್ಟು ನೀರು ಕುಡಿಯುವುದರಿಂದ ಅದು ತನ್ನ ಸಾಮಾನ್ಯ ಸ್ಥಿತಿಗೆ ಮರಳುತ್ತದೆ. ಇದರಿಂದ ತಲೆನೋವು ನಿವಾರಿಸುತ್ತದೆ. ನಿರ್ಜಲೀಕರಣವು ತಲೆನೋವಿಗೆ ಒಂದು ಕಾರಣವಾಗುತ್ತದೆ ಎಂದು ರಾಷ್ಟ್ರೀಯ ಆರೋಗ್ಯ ಸಂಸ್ಥೆ ತಿಳಿಸುತ್ತಾರೆ. ತಲೆನೋವು ಅಡ್ಡಿಪಡಿಸಿದ ನಿದ್ರೆ ಇಲ್ಲವೇ ಸಾಕಷ್ಟು ನಿದ್ರೆಯ ಕೊರತೆಯಿಂದ ಉಂಟಾಗಬಹುದು. ನಿದ್ರೆಯ ಸಮಯದಲ್ಲಿ ಹಲ್ಲು ಕಡಿಯುವುದು ಇಲ್ಲವೇ ಮಲಗುವ ಮುನ್ನ ಗಟ್ಟಿಯಾದ ಆಹಾರ ಅಗಿಯುವುದು ಸಹ ತಲೆನೋವಿಗೆ ಕಾರಣವಾಗಬಹುದು. ಅನುಚಿತ ದಿಂಬನ್ನು ಬಳಸುವುದರಿಂದ ಕುತ್ತಿಗೆ ಹಾಗೂ ಭುಜದ ಸ್ನಾಯುಗಳನ್ನು ಆಯಾಸಗೊಳಿಸಬಹುದು ಹಾಗೂ ತಲೆನೋವಿಗೂ ಕಾರಣವಾಗುತ್ತದೆ. ರಾತ್ರಿಯಲ್ಲಿ 7ರಿಂದ 8 ಗಂಟೆಗಳ ಕಾಲ ನಿದ್ರೆ ಮಾಡುವ ಅಭ್ಯಾಸ ಬೆಳೆಸಿಕೊಳ್ಳಲು ವೈದ್ಯರು ಸಲಹೆ ನೀಡುತ್ತಾರೆ. ಹೆಚ್ಚುವರಿಯಾಗಿ ಮಲಗುವ ಮೊದಲು ಮೊಬೈಲ್ ಫೋನ್‌ಗಳ ಬಳಕೆ, ದೂರದರ್ಶನ ನೋಡುವುದನ್ನು ತಪ್ಪಿಸುವುದರಿಂದ ತಲೆನೋವು ಉಂಟುಮಾಡುವ ಅಂಶಗಳನ್ನು ಕಡಿಮೆ ಮಾಡುತ್ತದೆ.

# ರಾಮಾಯಣ



ತತ್ವಸ್ವರೂಪವನ್ನು ಉಪದೇಶಿಸಿ ಮರುತಾತ್ಮಜನನ್ನು ಶ್ರೀರಾಮನು ಬ್ರಹ್ಮಪದವಿಯಲ್ಲಿ ಕುಳ್ಳಿರಿಸಿದ್ದನು

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ಗರುಡನು ಬಲಗಡೆಯಲ್ಲಿ ಬರುತ್ತಿರಲು, ಸೂರ್ಯಬಿಂಬವು ನಿರ್ಮಲತೆಯನ್ನು ಹೊಂದಿತು, ಶುಕ್ರ ಆಂಗೀರಸರು ರಾಜಿಸಲು, ವೈನವಾಗಿ ಭರದ್ವಾಜ ಹರಿಣ ಹಂಸ ಮೊದಲಾದವು ಶುಭವನ್ನು ಸೂಚಿಸುತ್ತ ಬರಲು, ಆಕಾಶವು ನಿರ್ಮಲವಾಗಿ ಶೋಭಿಸಿತು. ಮೃಗಸಮೂಹವೂ ಪಕ್ಷಿಗಣವೂ ಸವ್ಯಾಪಸವ್ಯ ಗಮನದಿಂದ ಶುಭಾಶುಭಗಳನ್ನು ಸೂಚಿಸುತ್ತಿವೆ ನಮ್ಮ ಸೈನ್ಯಕ್ಕೆ ಹರ್ಷವುಂಟಾಗುವುದನ್ನೂ ರಕ್ಕಸಸಂದೋಹವು ನಾಶವಾಗುವುದನ್ನೂ ಸೌಮಿತ್ರಿ ರಘುನಾಥರಿಗೆ ಸ್ಪಷ್ಟವಾಗಿ ಸೂಚಿಸುತ್ತಿವೆ ಎಂಬಂತಹ ತರುಣರು ಆಡಿಕೊಳ್ಳುತ್ತಿದ್ದ ಶುಭೋದಯದ ಮಾತುಗಳನ್ನು ಕೇಳಿ ಮರುತಜನ ದಿವ್ಯಸುಂದರ ಮೂರ್ತಿಯ ಮೇಲೆ ನಸುನಗೆಯ ದಿವ್ಯತೇಜಸ್ಸು ಆವರಿಸಿತು ಕಪಿಸೈನಿಕರು ರಘುನಾಯಕನ ಎಡಬಲಗಳಲ್ಲಿ ತ್ವರಿತವಾಗಿ ಹಾರುವ ರೀತಿಯಲ್ಲಿ ಬರುತ್ತಿದ್ದರು. ಬೆಟ್ಟದಿಂದ ಬೆಟ್ಟಕ್ಕೂ, ಮರದಿಂದ ಮರಕ್ಕೂ ಲಂಘಿಸುತ್ತ ದುಮುಕಿ ಬಾಲಗಳನ್ನಾಡಿಸುತ್ತ. ತಮ್ಮ ಬಾಲಸೂರ್ಯಸಮಾನ ತೇಜಸಿನಿಂದಲೂ ಲವಲವಿಕೆಯಿಂದಲೂ ಆಲಸ್ಯವಲ್ಲದೆ ಅತಿವೇಗದಿಂದ ಭೂಲಲನೆಯು ಕಂಪಿಸುವ ರೀತಿಯಲ್ಲಿ ಸಮುದ್ರದ ಬಳಿಗೆ ಸಾಗಿದರು. ಉತ್ತರ ಸಮುದ್ರವು ದಕ್ಷಿಣ ನೀರಧಿಯನ್ನು ಪ್ರೀತಿಯಿಂದ ಆಲಂಗಿಸಲು ಬರುತ್ತಿದೆಯೋ, ಆಗಸವನ್ನು ಸೇರಿ ಸೂರ್ಯಚಂದ್ರರೊಡನೆ ಈಶ್ವರನನ್ನು ನೋಡಲು ಭಕ್ತಿಯಿಂದ ಹೋಗುತ್ತಿದೆಯೋ ಎಂಬಂತೆ ಎಲ್ಲೆಲ್ಲಿಯೂ ಕಪಿವೃಂದವೇ ತುಂಬಿಹೋಗಿತ್ತು. ಸೈಂಧ್ಯಾಚಲವನ್ನು ದಾಟಿ ಮಲಯಗಿರಿಯನ್ನು ಮೀರಿ, ನದಿ ಸರೋವರಗಳನ್ನು ಸುಲಭವಾಗಿ ಕಳೆದು ವೇಗವಾಗಿ ಬಂದ ಪ್ಲವಗಸೇನೆಯು ಮಹೇಂದ್ರಪರ್ವತದ ತುದಿಯಲ್ಲಿ ನಿಂತಿತು. ಆಗ ರಘುನಾಯಕನು ಸುಗ್ರೀವ ನಳ ಗವಯ ಮುಂತಾದವರೊಡನೆ ನಿಂತು ಭೋರ್ಗರೆಯುವ ಸಮುದ್ರವನ್ನು ನೋಡಿದನು ಗಗನವು ಭೂತಳದೊಂದಿಗೆ ಆಟವಾಡುವ ಆಡುಂಬೊಲವೋ ಎಂಬಂತಿದ್ದ ಸಮುದ್ರದತ್ತ ರಘುನಾಥನು ಹರ್ಷಾಶ್ಚರ್ಯಗಳಿಂದ ನೋಡಿದನು. ಸುಗ್ರೀವನನ್ನು ನೋಡಿ ಶ್ರೀರಾಮನು, ರವಿತನಯನೇ ಕೇಳು, ಅವಿರಳವಾದ ನೀರಧಿಯನ್ನು ದಾಟಿ ಹೋಗುವ ಬಗ್ಗೆ ವಿವರವಾಗಿ ಆಲೋಚಿಸಬೇಕಾದುದೇನೋ ಸರಿಯೇ, ಆದರೆ ಯುವರಾಜನಾದ ಅಂಗದ ನಳ ನೀಲ ಮೊದಲಾದವರೊಡನೆ ಸಮಾಲೋಚಿಸಬೇಕಾದುದು ರಾಜಧರ್ಮಸಾರಕ್ಕೆ ಅನುಗುಣವಾದುದು. ಎತ್ತರತಗ್ಗುಗಳಿಲ್ಲದ ಸಮತಟ್ಟಾದ ಒಂದು ಶುಭ್ರ ಜಾಗದಲ್ಲಿ ಬಲವನ್ನಿರಿಸು'' ಎಂದು ಹೇಳಿದ. ಅದರಂತೆ ಮಾಡಲು ಸುಗ್ರೀವನು ಅತ್ತ ಹೋಗಲು, ಶ್ರೀರಾಮನು ಉದಧಿಯ ಕಡೆ ನೋಡಿದ. ಲೋಪಾಮುದ್ರೆಯರಸನಾದ ಅಗಸ್ತ್ಯನು ಎಶ್ವಾಕಾರವನ್ನು ತಾಳಿ ಬಂದನೋ, ಮಹಾ ಪ್ರತಾಪಿಯಾದವನೂ ಅಗ್ನಿತನಯನೂ ಆದ ಕುಮಾರಸ್ವಾಮಿಯೇನಾದರೂ ಕಪಿರೂಪದಿಂದ ಬಂದಿರುವನೋ ಎಂದು ಸಮುದರಾಜನು ಚಿಂತೆಗೊಳಗಾದಂತೆ ತೋರಿತು. ಸೈನ್ಯವನ್ನು ಸೂಕ್ತವಾದ ಜಾಗದಲ್ಲಿ ಬೀಡು ಬಿಡಿಸಿ ಬಂದ ಸೂರ್ಯಪುತ್ರನು ಎಜ್ಞಾಪನೆ ಮಾಡಿದಾಗ, ರಘುಜನು ಮಹೇಂದಪರ್ವತದ ತುದಿಯಲ್ಲಿ ಕುಳಿತು ಸಮುದ್ರದತ್ತ ದಿಟ್ಟಿ ಹಾಯಿಸಿದಾಗ, ನೀರಾನೆ ಮೊಸಳೆ ಆಮೆ ನೀರ್ಗುದುರೆಗಳೂ ಮೇಲೆ ನೆಗೆಯುವ ಕೆಂಮೀನುಗಳು ಮತ್ತು ಹೇರಲೆಗಳಿಂದ ಕೂಡಿದ ಸಮುದ್ರವು ಉಕ್ಕೇರಿ ಸೂರ್ಯಮಂಡಲವನ್ನು ಸೇರಿತೋ ಎಂಬಂತೆ ಅಚ್ಚರಿಯುಂಟುಮಾಡಿತು. ಪಕ್ಕದಲ್ಲಿದ್ದ ಲಕ್ಷ್ಮಣನತ್ತ ತಿರುಗಿದ ರಘುಪತಿಯು, ಲಕ್ಷ್ಮಣಾ, ಸಮುದ್ರವನ್ನು ನೋಡಿದರೆ ಅದರ ದಡವೇ ಕಾಣಿಸದಲ್ಲ ಘೋರ ದಾನವಸಮೂಹವನ್ನು ಸೇವಿಸುತ್ತಿರುವ ಇನ್ನೊಂದು ದಡವನ್ನು ಕಾಣುವುದು ಹೇಗೆ? ಕೋಗಿಲೆಯ ಕೂಜನವನ್ನು ಕೇಳುತ್ತಿದ್ದರೆ ನನ್ನ ಮದನಮದವೇರುತ್ತದೆ ರಕ್ಕಸಗಣದ ಎರುದ್ಧ ಪ್ರತೀಕಾರವನ್ನು ಹೇಗೆ. ತೀರಿಸಿಕೊಳ್ಳುವುದು? ಈ ರಾಕ್ಷಸ ಗಣದ ನಡುವೆ ಸೀತೆಯು ಜೀವದಿಂದಿರುವಳೇ ಹೇಗೆ ಎಂಬುದನ್ನು ತಿಳಿಯುವ ಬಗೆಯನ್ನು ನನಗೆ ತಿಳಿಸು'' ಎಂದು ಕೇಳಿಕೊಂಡ. ನಧಿನಮುಖಿಯನು ಹರಿಣಾಕ್ಷಿಯೂ, ಸಂಜನ ಸಂಪಗೆಮೂಗಿನವಳೂ, ಬಂದುಗೆಯ ಬಾಯಿಯವಳೂ ಕುಂದದ ಮೊಗ್ಗುಗಳಂತಹ ಹಲ್ಲುಗಳವಳೂ, ಶಂಕುವಿನಂತ ಕತ್ತುಳ್ಳವಳೂ, ಕೋಮಲವಾದ ಲತೆಯಂತಹ ಬಾಹುಗಳವಳೂ, ಮೃದುವಾದ ಕರಪಲ್ಲವಗಳವಳೂ ಆದ ಜಾನಕಿಯನ್ನು ನಾನೆಂದಿಗೆ ನೋಡುತ್ತೇನೆಯೋ, ದಶಗಳನನ್ನು ಕೊಂದು ಅವಳನ್ನು ನಮ್ಮ ನಗರಿಗೆ ಎಂದು ಕರೆದೊಯ್ದು ಬಂಧುರಪ್ರೇಮದಿಂದ ಕಾಣುವೆನೋ? ಎಂದು ರಾಘವನು ಚಿಂತೆಗೊಳಗಾಗಿ ಹಲುಬಿದ. ''ಸೂರ್ಯಕುಮಾರನೇ, ಕಾಮನು ಬಲು ಕೆಟ್ಟವನು ಗಿಳಿ ಕೋಗಿಲೆ ದುಂಬಿಗಳ ರವದಿಂದಲೂ, ಮಲಯಾನಿಲನ ತೀಡುವಿಕೆಯಿಂದಲೂ, ಕಾಮಿನೀಜನರ ಗಂಧವಿಲ್ಲದೆ ವೈರಾಗ್ಯಪರನಾಗಿ ಅಲೆಯುತ್ತಿರುವ ನನ್ನನ್ನು ಗೋಳಾಡಿಸುವನು

ಸಾಮಜಗಮನೆಯಾದ ಸೀತೆಯನ್ನು ಕಾಣುವುದು ಹೇಗೆ ಎಂಬುದನ್ನು ತಿಳಿಸು ಎಂದು ಗೋಗರೆದ.

ಮುಂದುವರೆಯುವುದು

# ನಿಮ್ಮ ಚರ್ಮವನ್ನು ಹೊಳೆಯುವಂತೆ ಮಾಡಬೇಕೇ? ಈ ಪಾನೀಯಗಳ ಸೇವನೆಗೆ ಆದ್ಯತೆ ನೀಡಿ!

ನಾವು ಅಂದವಾಗಿ ಕಾಣಬೇಕಾದರೆ ನಮ್ಮ ಬಗ್ಗೆಯೂ ನಾವು ಕಾಳಜಿಯನ್ನು ವಹಿಸಬೇಕಾಗುತ್ತದೆ. ಅದರಲ್ಲೂ ಮುಖ್ಯವಾಗಿ ಚರ್ಮದ ಆರೈಕೆ. ಯೌವನದಿಂದ ಕಾಣುವಂತೆ ಹಾಗೂ ಚರ್ಮ ನೈಸರ್ಗಿಕವಾಗಿ ಹೊಳೆಯುವಂತೆ ಮಾಡಲು ಅದ್ಭುತ ಆಹಾರ ಸೇವನೆ ಕಡೆಗೆ ಆದ್ಯತೆ ಯನ್ನು ನೀಡಬೇಕಾಗುತ್ತದೆ. ಅದರಲ್ಲೂ ಕಾಲಜನ್ ಅನ್ನೋದು ಯೌವ್ವನದ ಮತ್ತು ಕಾಂತಿಯುತ ಚರ್ಮದ ಹಿಂದಿನ ರಹಸ್ಯವಾಗಿದೆ. ಇದು ನಮ್ಮ ದೇಹದಲ್ಲಿ ಹೇರಳವಾಗಿರುವ ಪ್ರೋಟೀನ್ ಆಗಿದ್ದು, ಚರ್ಮ, ಸ್ನಾಯುಗಳು ಹಾಗೂ ಮೂಳೆಗಳಿಗೆ ಬೆಂಬಲ ನೀಡುತ್ತದೆ. ಕಾಲಜನ್ ಅಭಿವೃದ್ಧಿ ಪಡಿಸಲು ಕೆಲವೊಂದು ಪಾನೀಯಗಳ ಸೇವನೆ ಬಗ್ಗೆ ತಜ್ಞರು ಸಲಹೆ ನೀಡಿದ್ದಾರೆ. ಮನೆಯಲ್ಲಿಯೇ ಸುಲಭವಾಗಿ ತಯಾರಿಸಬಹುದಾದ ಪಾನೀಯಗಳು ಚರ್ಮದ ಆರೈಕೆಗೆ ಸಹಾಯಕವಾಗುತ್ತದೆ.

ಚಿಕನ್ ಅಥವಾ ಮಟನ್ ಸೂಪ್ ಗಳು ಚರ್ಮದ ಆರೈಕೆಗೆ ಅಗತ್ಯವಾಗಿದೆ. ಇದು ಚರ್ಮದ ಸುಕ್ಕನ್ನು ತಡೆದು ರಕ್ಷಣೆ ಮಾಡುತ್ತದೆ. ಕಿತ್ತಳೆ, ನಿಂಬೆ ಮತ್ತು ದ್ರಾಕ್ಷಿಹಣ್ಣಿನಂತಹ ಸಿಟ್ರಸ್ ಹಣ್ಣುಗಳು ವಿಟಮಿನ್ ಸಿ ಯಿಂದ ಕೂಡಿದೆ. ಇದು ಕಾಲಜನ್ ಅಭಿವೃದ್ಧಿಗೆ ಪ್ರಮುಖ ಪೋಷಕಾಂಶವಾಗಿದೆ. ಚರ್ಮವನ್ನು ಕಾಂತಿಯುತವಾಗಿ ಇರಿಸಲು ಹಾಗೂ ವಯಸ್ಸು ಆಗುವಿಕೆಯ ಲಕ್ಷಣವನ್ನು ಕಡಿಮೆಗೊಳಿಸುತ್ತದೆ. '

ಪಾಲಕ್ ಮತ್ತು ಮೆಂತೆ ಎಲೆಗಳ ಸೊಪ್ಪನ್ನು ಬಾಳೆಹಣ್ಣು, ಅಥವಾ ಆವಕಾಡೊಗಳಂತಹ ಹಣ್ಣುಗಳೊಂದಿಗೆ ಬೆರೆಸಿ ಸೇವಿಸಿದರೆ ಚರ್ಮಕ್ಕೆ ಉತ್ತಮ. ಇವುಗಳೊಂದಿಗೆ ನಟ್ಸ್ ಅಥವಾ ಬಟರ್ ಸೇರಿಸಿ ಸೇವನೆ ಮಾಡಿದರೆ ಚರ್ಮದ ಸುಕ್ಕು ತಡೆಯಬಹುದು. ಚರ್ಮದ ಒಳಿತಿಗಾಗಿ ಗೋಲ್ಡನ್ ಮಿಲ್ಕ್ ಎಂದು ಕರೆಯಲ್ಪಡುವ ಅರಿಶಿನ ಹಾಲು ಪ್ರಮುಖವಾಗಿದೆ.



ಇದು ಹಿತವಾದ ಹಾಗೂ ಉರಿಯೂತ ಹೋಗಲಾಡಿಸುವ ಪಾನೀಯವಾಗಿದೆ. ಅರಿಶಿನದಲ್ಲಿರುವ ಕರ್ಕ್ಯುಮಿನ್ ಕಾಲಜನ್ ರಚನೆಯನ್ನು ಉತ್ತೇಜಿಸುತ್ತದೆ. ಸ್ಟ್ರಾಬೆರಿಗಳು, ಬೆರಿಹಣ್ಣುಗಳು ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿವೆ, ಇದು ಸ್ವತಂತ್ರ ರಾಡಿಕಲ್‌ಗಳ ವಿರುದ್ಧ ಹೋರಾಡಿ ಮತ್ತು ಕಾಲಜನ್ ಉತ್ಪಾದನೆಯನ್ನು ಉತ್ತೇಜಿಸುತ್ತದೆ. ಪಾಲಕ್ ಮತ್ತು ಮೆಂತೆ ಎಲೆಗಳ ಸೊಪ್ಪನ್ನು ಬಾಳೆಹಣ್ಣು, ಅಥವಾ ಆವಕಾಡೊಗಳಂತಹ ಹಣ್ಣುಗಳೊಂದಿಗೆ ಬೆರೆಸಿ ಸೇವಿಸಿದರೆ ಚರ್ಮಕ್ಕೆ ಉತ್ತಮ. ಹಾಗಾಗಿ ಬಾದಾಮಿ ಹಾಲಿನ ಜೊತೆ ಹಾಲು ಸೇರಿಸಿ ಕುಡಿಯಬಹುದು ನೈಸರ್ಗಿಕ ಪಾನೀಯ ಇದಾಗಿದ್ದು ಎಳೆನೀರಿನಲ್ಲಿ ಎಲೆಕ್ಟ್ರೋಲೈಟ್‌ಗಳು, ಖನಿಜಗಳು ಮತ್ತು ಸೈಟೋಕಿನಿನ್‌ಗಳು ಹೇರಳವಾಗಿವೆ. ಇವು ಚರ್ಮವನ್ನು ಹೈಡ್ರೇಟ್ ಆಗಿಟ್ಟು ಹೊಳೆಯುವಂತೆ ಮಾಡುತ್ತದೆ.


# ಪ್ರತಿನಿತ್ಯ 30 ದಿನಗಳವರೆಗೆ ಹತ್ತು ಸಾವಿರ ಸ್ಟೆಪ್ಸ್ ನಡೆದರೆ ಯಾವೆಲ್ಲಾ ಪ್ರಯೋಜನಗಳು ಲಭಿಸುತ್ತವೆ ಗೊತ್ತೇ?

ಬಹುತೇಕ ಜನರು ಬೆಳಿಗ್ಗೆ ಅಲಾರಂನಲ್ಲಿರುವ ಸ್ನೂಜ್ ಬಟನ್ ಅನ್ನು ಒತ್ತುವುದರೊಂದಿಗೆ ಸ್ವಲ್ಪ ಹೆಚ್ಚು ಸಮಯ ಮಲಗಬಹುದು ಎಂದು ಯೋಚಿಸುವುದರೊಂದಿಗೆ ದಿನವು ಪ್ರಾರಂಭವಾಗುತ್ತದೆ. ದೈನಂದಿನ ಕೆಲಸದ ಹೊರೆಗಳು, ಪ್ರಯಾಣಗಳು ಹಾಗೂ ಕುಟುಂಬದ ಜವಾಬ್ದಾರಿಗಳ ನಡುವೆ, ಜಿಮ್‌ಗೆ ಹೋಗಲು ಸಮಯ ಕಂಡುಕೊಳ್ಳುವುದು ಅನೇಕರಿಗೆ ಕಷ್ಟಕರವಾಗಿರುವ ಸವಾಲಾಗಿ ಉಳಿದಿದೆ.

ದಿನದ ಕೊನೆಯಲ್ಲಿ ಆಗಾಗ್ಗೆ ತಪ್ಪಿತಸ್ಥ ಭಾವನೆಯೊಂದಿಗೆ ಮಲಗುತ್ತೇವೆ. ನಾನು ಇಂದು ನನ್ನ ದೇಹಕ್ಕೆ ಯಾವುದೇ ವ್ಯಾಯಾಮವನ್ನು ನೀಡಲಿಲ್ಲ ಎಂದು ಬೇಸರಗೊತ್ತೇವೆ.

ಸದಸ್ಯತ್ವ ಹೊಂದಿದ್ದರೂ ಜಿಮ್‌ಗೆ ಭೇಟಿ ನೀಡುವುದನ್ನು ಬಿಟ್ಟುಬಿಡುವುದು ಅಥವಾ ನಾಳೆಯಿಂದ ನಾನು ನಡೆಯಲು ಪ್ರಾರಂಭಿಸಬೇಕು ಎಂದು ಡೈರಿಯಲ್ಲಿ ಬರೆದಿಡುವುದು ನಮ್ಮ ಜೀವನದ ಸಾಮಾನ್ಯ ಭಾಗವಾಗಿದೆ. ನಾವು ವ್ಯಾಯಾಮವನ್ನು ಗಂಟೆಗಳ ಓಟ, ಭಾರವಾದ ತೂಕವನ್ನು ಎತ್ತುವುದರೊಂದಿಗೆ ಸಮೀಕರಿಸುತ್ತೇವೆ. ನಮ್ಮ ದೇಹವನ್ನು ಆರೋಗ್ಯಕರವಾಗಿಡಲು ವಾಸ್ತವವಾಗಿ ಅಂತಹ ಶ್ರಮದಾಯಕ ಪ್ರಯತ್ನದ ಅಗತ್ಯವಿರುವುದಿಲ್ಲ. ಅಧ್ಯಯನಗಳು ಹೇಳುವ ಪ್ರಕಾರ, ನಾವು ಪ್ರತಿದಿನ ನೈಸರ್ಗಿಕವಾಗಿ ಮಾಡುವಂತಹ ವಾಕಿಂಗ್ ಜಗತ್ತಿನ ಅತ್ಯುತ್ತಮ ಹಾಗೂ ಸುಲಭವಾದ ಔಷಧವಾಗಿದೆ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು 30 ದಿನಗಳವರೆಗೆ ಹತ್ತು ಸಾವಿರ ಹೆಜ್ಜೆಗಳ ಗುರಿಯನ್ನು ನಿರಂತರವಾಗಿ ತಲುಪಿದಾಗ ನಮ್ಮ ದೇಹ ಹಾಗೂ ಮನಸ್ಸಿನಲ್ಲಿ ಉಂಟಾಗುವ ಬದಲಾವಣೆಗಳೇನು ಎಂಬುದನ್ನು ತಿಳಿಯೋಣ.

ವಾಕಿಂಗ್ ಎಲ್ಲಾ ವಯಸ್ಸಿನ ಜನರಿಗೆ ಸೂಕ್ತವಾದ ಸರಳವಾದ ಪರಿಣಾಮಕಾರಿ ವ್ಯಾಯಾಮವಾಗಿದೆ. ಪ್ರತಿದಿನ ಹತ್ತು ಸಾವಿರ ಸ್ಟೆಪ್ಸ್ ವಾಕಿಂಗ್ ದೇಹದ ಸಹಿಷ್ಣುತೆಯನ್ನು ಗಮನಾರ್ಹವಾಗಿ ಹೆಚ್ಚಿಸುತ್ತದೆ. ನಿಯಮಿತ ವಾಕಿಂಗ್ ಕಾಲುಗಳು, ತೊಡೆಗಳು ಹಾಗೂ ಸೊಂಟಗಳಲ್ಲಿನ ಸ್ನಾಯುಗಳನ್ನು ಬಲಪಡಿಸುತ್ತದೆ. ಕೀಲುಗಳ ಸುತ್ತ ರಕ್ತ ಪರಿಚಲನೆ ಸುಧಾರಿಸುತ್ತದೆ. ಕೀಲು ನೋವು ಹಾಗೂ ಬಿಗಿತ ಕಡಿಮೆ ಮಾಡುತ್ತದೆ. 30 ದಿನಗಳವರೆಗೆ ನಿರಂತರವಾಗಿ ಈ ಗುರಿಯನ್ನು ಸಾಧಿಸುವುದರಿಂದ ದಿನವಿಡೀ ಸಕ್ರಿಯವಾಗಿ ಹಾಗೂ ಆಯಾಸವಿಲ್ಲದೆ ದೇಹಕ್ಕೆ ಶಕ್ತಿ ದೊರೆಯುತ್ತದೆ. ನಾವು ತೆಗೆದುಕೊಳ್ಳುವ ಪ್ರತಿಯೊಂದು ಹೆಜ್ಜೆಯೂ ನಮ್ಮ ಹೃದಯದ ಕಾರ್ಯನಿರ್ವಹಣೆಯನ್ನು ಹೆಚ್ಚಿಸುತ್ತದೆ.



ದಿನನಿತ್ಯದ ವಾಕಿಂಗ್ ರಕ್ತನಾಳಗಳ ನಮ್ಯತೆಯನ್ನು ಹೆಚ್ಚಿಸುತ್ತದೆ, ರಕ್ತದೊತ್ತಡ ನಿಯಂತ್ರಣದಲ್ಲಿಡಲು ಸಹಾಯ ಮಾಡುತ್ತದೆ. ನಿಯಮಿತ ನಡಿಗೆಯು ಹೃದಯ ಬಡಿತವನ್ನು ಸ್ಥಿರಗೊಳಿಸುತ್ತದೆ. ಹೃದಯ ಸ್ನಾಯುಗಳನ್ನು ಬಲಪಡಿಸುತ್ತದೆ.

ಇದರಿಂದ ಹೃದಯದ ಪಂಪಿಂಗ್ ದಕ್ಷತೆಯನ್ನು ಸುಧಾರಿಸುತ್ತದೆ. ಕೆಟ್ಟ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಲು, ಉತ್ತಮ ಕೊಲೆಸ್ಟ್ರಾಲ್ ಅನ್ನು ಹೆಚ್ಚಿಸಲು ನಡಿಗೆ ಒಂದು ಅತ್ಯುತ್ತಮ ಮಾರ್ಗವಾಗಿದೆ. ಇದು ಹೃದಯದ ಆರೋಗ್ಯಕ್ಕೆ ಪ್ರಯೋಜನಕಾರಿಯಾಗಿದೆ ಎಂದು ತಜ್ಞರು ತಿಳಿಸುತ್ತಾರೆ.

ದೇಹದ ತೂಕ ಹಾಗೂ ರಕ್ತದಲ್ಲಿನ ಸಕ್ಕರೆ ಮಟ್ಟಗಳು ಅನೇಕ ಜನರಿಗೆ ಗಮನಾರ್ಹ ಸವಾಲುಗಳನ್ನು ಒಡ್ಡುತ್ತವೆ. ದೈನಂದಿನ ವಾಕಿಂಗ್ ಇನ್ಸುಲಿನ್ ಸಂವೇದನೆ ಸುಧಾರಿಸುತ್ತದೆ. ಊಟದ ಬಳಿಕ ರಕ್ತದಲ್ಲಿನ ಸಕ್ಕರೆ ಮಟ್ಟದಲ್ಲಿ ಹಠಾತ್ ಏರಿಕೆ ತಡೆಯುತ್ತದೆ. ಹತ್ತು ಸಾವಿರ ಸ್ಟೆಪ್ಸ್ ನಡೆಯುವುದು ಗಮನಾರ್ಹ ಸಂಖ್ಯೆಯ ಕ್ಯಾಲೊರಿಗಳನ್ನು ಕರಗಿಸುತ್ತದೆ. ದೇಹದ ತೂಕ ನಷ್ಟ, ಆರೋಗ್ಯಕರ ತೂಕವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಊಟದ ಬಳಿಕ ಸ್ವಲ್ಪ ಸಮಯ ನಡೆಯುವುದು ಹೊಟ್ಟೆ, ಕರುಳಿನ ಚಲನೆ ಉತ್ತೇಜಿಸುತ್ತದೆ. ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ. ಇದು ಉಬ್ಬುವುದು, ಆಲಸ್ಯದ ಭಾವನೆ ಕಡಿಮೆ ಮಾಡುತ್ತದೆ. ಮಾನಸಿಕ ಆರೋಗ್ಯವು ದೈಹಿಕ ಆರೋಗ್ಯದಷ್ಟೇ ಮುಖ್ಯವಾಗಿದೆ. ಒತ್ತಡ ಕಡಿಮೆ ಮಾಡಲು ವಾಕಿಂಗ್ ಅತ್ಯುತ್ತಮ ನೈಸರ್ಗಿಕ ಪರಿಹಾರವಾಗಿ ಕಾರ್ಯನಿರ್ವಹಿಸುತ್ತದೆ.

ನಿರಂತರ ನಡಿಗೆ ದೇಹದಲ್ಲಿ ಒತ್ತಡ ಪ್ರೇರೇಪಿಸುವ ಹಾರ್ಮೋನ್ ಕಾರ್ಟಿಸೋಲ್ ಮಟ್ಟವನ್ನು ಕಡಿಮೆ ಮಾಡುತ್ತದೆ. ವಾಕಿಂಗ್ ಮೆದುಳಿನಲ್ಲಿ ಎಂಡಾರ್ಫಿನ್‌ಗಳ ಬಿಡುಗಡೆಯನ್ನು ಉತ್ತೇಜಿಸುತ್ತದೆ. ದೇಹದ ಉತ್ತಮ ಭಾವನೆ ಹಾರ್ಮೋನುಗಳು ವೃದ್ಧಿಯಾಗುತ್ತವೆ.

ಉದಯ ವಾಹಿನಿ
ಪ್ರಾದೇಶಿಕ
ಶುಕ್ರವಾರ 07 ಆಗಸ್ಟ್ 2026 | 05

# ಜೀವಂತ ಮತದಾರರ ಹೆಸರನ್ನು ಡಿಲೀಟ್ ಮಾಡುವುದು ಪ್ರಜಾಪ್ರಭುತ್ವಕ್ಕೆ ಅಪಾಯ!

## ಆಯೋಗವೇ ಪ್ರಕಟಿಸಿರುವ ಅಂಕಿ-ಅಂಶಗಳ ಪ್ರಕಾರ ರಾಜ್ಯದ 1,10,59,288 ಮತದಾರರು ಡಿಲೀಟ್ ಪಟ್ಟಿಯಲ್ಲಿ ಇದೆ

• **ಉದಯವಾಹಿನಿ, ಬಳ್ಳಾರಿ, :**

ಕರ್ನಾಟಕದಲ್ಲಿ ನಡೆಯುತ್ತಿರುವ ವಿಶೇಷ ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆ ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುವ ರೀತಿಯಲ್ಲಿ ನಡೆಯುತ್ತಿದ್ದು, ಜೀವಂತ ಮತದಾರರ ಹೆಸರನ್ನೇ ಮತದಾರರ ಪಟ್ಟಿಯಿಂದ ತೆಗೆದುಹಾಕುವ ಮೂಲಕ ಕೋಟ್ಯಂತರ ಜನರ ಮತದಾನದ ಹಕ್ಕನ್ನು ಕಸಿಯುವ ಪ್ರಯತ್ನ ನಡೆಯುತ್ತಿದೆ ಎಂದು ಎದ್ದೇಳು ಕರ್ನಾಟಕ

**1 : ಹೆಚ್ಚಿನ ಸಂಖ್ಯೆಯ ಮತದಾರರು**
**2 : ಹಕ್ಕನ್ನು ಕಳೆದುಕೊಳ್ಳುವ ಪರಿಸ್ಥಿತಿ**
**3 : ಲಾಜಿಕಲ್ ಡಿಸ್ಕ್ರೆಪೆನ್ಸಿ ವ್ಯವಸ್ಥೆ**

ಸಂಘದ ಸಹವರ್ತಿ ಕುಮಾರ್ ಸಮಾತಾಲ್ ಆರೋಪಿಸಿದರು. ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಪತ್ರಿಕಾ ಭವನದಲ್ಲಿ ನಿನ್ನೆ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣಾ ಆಯೋಗವೇ ಪ್ರಕಟಿಸಿರುವ ಅಂಕಿ-ಅಂಶಗಳ ಪ್ರಕಾರ ರಾಜ್ಯದ 1,10,59,288 ಮತದಾರರು ಡಿಲೀಟ್ ಪಟ್ಟಿಯಲ್ಲಿ ಇದ್ದು, ಇದು ಒಟ್ಟು ಮತದಾರರ ಸುಮಾರು 20 ಶೇಕಡಾ ಆಗಿದೆ. ಈ ಪ್ರಕ್ರಿಯೆ ಮುಂದುವರಿದರೆ ಪ್ರತಿ ಐದು ಮತದಾರರಲ್ಲಿ ಒಬ್ಬರು ತಮ್ಮ ಮತದಾನದ ಹಕ್ಕನ್ನು ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು. ಬೆಂಗಳೂರು ಸೇರಿದಂತೆ ವಲಸೆ ಹೆಚ್ಚಿರುವ ಹಾಗೂ ಗಡಿ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯ ಮತದಾರರು ಪಟ್ಟಿಯಿಂದ ಹೊರಗುಳಿಯುವ ಸಾಧ್ಯತೆ ಇದೆ. ಇದಲ್ಲದೆ ಸುಮಾರು 34 ಲಕ್ಷ ಮಂದಿ ''ಮ್ಯಾಪಿಂಗ್ ಆಗದವರು'' ಎಂದು ಗುರುತಿಸಲಾಗಿದ್ದು, ಅವರಿಗೆ ನೋಟಿಸ್



ಉದಯವಾಹಿನಿ ಚಿತ್ರ

> ಚುನಾವಣಾ ಆಯೋಗದ ಅಂಕಿ-ಅಂಶಗಳ ಪ್ರಕಾರ ಡಿಲೀಟ್ ಪಟ್ಟಿಯಲ್ಲಿರುವ ಬಹುತೇಕರು ''ಶಿಫ್ಟೆಡ್'' ಹಾಗೂ ''ಅಬ್ಸೆಂಟ್'' ವರ್ಗಕ್ಕೆ ಸೇರಿದ್ದು, ಅವರು ಸತ್ತವರೂ ಅಲ್ಲ, ನಕಲಿ ಮತದಾರರೂ ಅಲ್ಲ. ಉದ್ಯೋಗ, ಶಿಕ್ಷಣ ಅಥವಾ ಇತರೆ ಕಾರಣಗಳಿಂದ ಬೇರೆಡೆಗೆ ತೆರಳಿರುವ ಜೀವಂತ ಮತದಾರರನ್ನು ಪಟ್ಟಿಯಿಂದ ತೆಗೆದುಹಾಕುವುದು ಅಸಂವಿಧಾನಿಕ ಮತ್ತು ಅಪ್ರಜಾತಾಂತ್ರಿಕ ಕ್ರಮವಾಗಿದೆ ಎಂದು ಹೇಳಿದರು. -ಕುಮಾರ್ ಸಮಾತಾಲ್

> ಚುನಾವಣಾ ಆಯೋಗ ನಾಗರಿಕ ಸಮಾಜದ ಅಭಿಪ್ರಾಯಗಳನ್ನು ನಿರ್ಲಕ್ಷಿಸಿ, ಅಕ್ರಮ ಡಿಲೀಷನ್ ಪ್ರಕ್ರಿಯೆ ಮುಂದುವರಿಸಿದರೆ ರಾಜ್ಯಾದ್ಯಂತ ತೀವ್ರ ಹೋರಾಟ ನಡೆಸುವುದು ಅನಿವಾರ್ಯವಾಗುತ್ತದೆ. ಇದಕ್ಕೆ ಚುನಾವಣಾ ಆಯೋಗವೇ ಸಂಪೂರ್ಣ ಹೊಣೆಗಾರವಾಗಲಿದೆ ಎಂದು ಎಚ್ಚರಿಕೆ ನೀಡಿದರು. -ಕುಮಾರ್ ಸಮಾತಾಲ್

ನೀಡಲಾಗುತ್ತಿದೆ. ಇದೇ ವೇಳೆ ಬಿಎಲ್ ಒಗಳ ಮೊಬೈಲ್ ಆ್ಯಪ್‌ನಲ್ಲಿ ಬಳಸುತ್ತಿರುವ ''ಲಾಜಿಕಲ್ ಡಿಸ್ಕ್ರೆಪೆನ್ಸಿ'' ವ್ಯವಸ್ಥೆಯ ಬಗ್ಗೆ ಚುನಾವಣಾ ಆಯೋಗ ಯಾವುದೇ ಸ್ಪಷ್ಟನೆ ನೀಡುತ್ತಿಲ್ಲ ಎಂದು ಟೀಕಿಸಿದರು. ಎನ್ಯುಮರೇಷನ್ ಫಾರಂಗಳನ್ನು ಶೇ.100ರಷ್ಟು ವಿತರಣೆ ಹಾಗೂ ಶೇ.99.56ರಷ್ಟು ಡಿಜಿಟಲೀಕರಣ ಪೂರ್ಣಗೊಂಡಿದೆ ಎಂದು ಚುನಾವಣಾ ಆಯೋಗ ಹೇಳುತ್ತಿರುವುದಾದರೂ, ಇನ್ನೂ ಅನೇಕ ಮತದಾರರಿಗೆ ಫಾರಂಗಳು ಸಿಗದೆ ಪರದಾಡುತ್ತಿರುವ ಉದಾಹರಣೆಗಳಿವೆ. ಹೀಗಾಗಿ ಆಯೋಗದ ಹೇಳಿಕೆ ಮತ್ತು ನೆಲಮಟ್ಟದ

> **ಎಸ್.ಐ ಆರ್ ವಿರೋಧಿ ಕರ್ನಾಟಕವು ರೈತ, ಕಾರ್ಮಿಕ, ದಲಿತ, ಸಾಮಾಜಿಕ ಸಂಘಟನೆಗಳು ಹಾಗೂ ವಿವಿಧ ಜಾತ್ಯಾತೀತ ರಾಜಕೀಯ ಪಕ್ಷಗಳ ಒಕ್ಕೂಟವಾಗಿದ್ದು, ರಾಜ್ಯದ ಪ್ರತಿಯೊಬ್ಬ ಮತದಾರರ ಹಕ್ಕು ಸುರಕ್ಷಿತವಾಗುವವರೆಗೆ ಅಭಿಯಾನ ಹಾಗೂ ಹೋರಾಟ ಮುಂದುವರಿಯಲಿದೆ ಎಂದು ತಿಳಿಸಿದರು.**

ವಾಸ್ತವ ಸ್ಥಿತಿ ನಡುವೆ ವ್ಯತ್ಯಾಸವಿದೆ ಎಂದು ಆರೋಪಿಸಿದರು. ಎಸ್ ಐ ಆರ್ ಪ್ರಕ್ರಿಯೆಯೇ ಅವೈಜ್ಞಾನಿಕ, ಅಪ್ರಜಾತಾಂತ್ರಿಕ ಹಾಗೂ ದುರುದ್ದೇಶಪೂರಿತವಾಗಿದೆ. ಸೂಕ್ತ ತರಬೇತಿ ಇಲ್ಲದೆ ಬಿ ಎಲ್ ಓ ಗಳ ಮೇಲೆ ಒತ್ತಡ ಹೇರಿ ಅವ್ಯವಸ್ಥಿತವಾಗಿ ಪ್ರಕ್ರಿಯೆ ನಡೆಸಲಾಗಿದೆ. ಸ್ಥಳಾಂತರಗೊಂಡವರು ಮತ್ತು ಬಿಎಲ್ ಒಗಳ ಭೇಟಿ ವೇಳೆ ಮನೆಯಲ್ಲಿ ಇಲ್ಲದವರನ್ನು ನೇರವಾಗಿ ಡಿಲೀಟ್ ಪಟ್ಟಿಗೆ ಸೇರಿಸುವುದು ಈ ಪ್ರಕ್ರಿಯೆಯಲ್ಲಿನ ದೊಡ್ಡ ದೋಷವಾಗಿದೆ ಎಂದು ಹೇಳಿದರು. ಡಿಲೀಟ್ ಪಟ್ಟಿಯ ಕುರಿತು ಸಮಗ್ರ ಪರಿಶೀಲನೆ ನಡೆಸಿ ಸಾಮಾಜಿಕ ಸಂಘಟನೆಗಳಿಗೂ ಅಭಿಪ್ರಾಯ ಮಂಡಿಸಲು ಅವಕಾಶ ನೀಡಬೇಕು. ಸ್ಥಳಾಂತರಗೊಂಡ ಹಾಗೂ ಮನೆಯಲ್ಲಿ ಇಲ್ಲದಿದ್ದ ಮತದಾರರನ್ನು ಯಾವುದೇ ಕಾರಣಕ್ಕೂ ಡಿಲೀಟ್ ಮಾಡದೆ, ಅವರು ಇರುವ ಸ್ಥಳದಲ್ಲೇ ಫಾರಂ-8 ಸಲ್ಲಿಸಿ ಹೊಸ ವಿಳಾಸಕ್ಕೆ ವರ್ಗಾವಣೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಬೇಕು. ಎನ್ಯುಮರೇಷನ್ ಪ್ರಕ್ರಿಯೆಯ ಅವಧಿಯನ್ನು ಕನಿಷ್ಠ ಒಂದು ತಿಂಗಳ ಕಾಲ ವಿಸ್ತರಿಸಬೇಕು. ಕರಡು ಮತದಾರರ ಪಟ್ಟಿ ಪ್ರಕಟವಾದ ಬಳಿಕ ಪ್ರತಿ ಮತಗಟ್ಟೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಪರಿಶೀಲನಾ ಸಭೆ ನಡೆಸಿ ಜನರ ಸಮ್ಮುಖದಲ್ಲಿ ತಿದ್ದುಪಡಿಗಳನ್ನು ಮಾಡಬೇಕು ಎಂದು ಆಗ್ರಹಿಸಿದರು.

## ನಶಾ ಮುಕ್ತ ಭಾರತ ನಿರ್ಮಾಣಕ್ಕೆ ಎಲ್ಲರ ಸಹಭಾಗಿತ್ವ ಅಗತ್ಯ

• **ಉದಯವಾಹಿನಿ, ಯಲಬುರ್ಗಾ:**

ಮಾದಕ ವಸ್ತುಗಳ ಬಳಕೆಯಿಂದ ಯುವಜನತೆಯ ದೈಹಿಕ ಮತ್ತು ಮಾನಸಿಕ ಆರೋಗ್ಯ ಸಂಪೂರ್ಣವಾಗಿ ಹಾಳಾಗುತ್ತದೆ ಎಂದು ಬ್ರಹ್ಮಕುಮಾರಿ ಈಶ್ವರಿ ವಿಶ್ವ ವಿದ್ಯಾಲಯದ ಗೀತಾ ಅವರು ತಿಳಿಸಿದರು.

ತಾಲ್ಲೂಕಿನ ಮುಧೋಳ ಗ್ರಾಮದ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾದ ವಿಕಸಿತ ಭಾರತಕ್ಕಾಗಿ ನಶಾ ಮುಕ್ತ ಯುವ ಜನತೆ ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರತಿಜ್ಞಾ ವಿಧಿ ಕಾರ್ಯಕ್ರಮ ಜರುಗಿತು.

ಮುಧೋಳ ಗ್ರಾಮವನ್ನ ಮದ್ಯ ಪಾನ ಮುಕ್ತ ಗೊಳಿಸಲು ಯುವ ಜನತೆ ಗ್ರಾಮಗಳ ಸ್ವಸಹಾಯ ಗುಂಪುಗಳು ನಾಗರಿಕರು ದೃಢ ನಿರ್ಧಾರದೊಂದಿಗೆ ಕೈ ಜೊಡಿಸಬೇಕೆಂದರು.

ಧ್ಯಾನ ಪ್ರಾರ್ಥನೆಯಿಂದ ಆರೋಗ್ಯಕರ ಜೀವನ ಸಾಗಿಸಬಹುದು. ಶಾಂತಿ ಸಹಬಾಳ್ವೆಯ ಜೀವನ ಸಾಗಿಸಬೇಕೆಂದು ಎಲ್ಲರಿಗೂ ಕರೆ ನೀಡಿದರು.

ಗ್ರಾಮದ ವಿವಿಧ ಶಾಲೆಗಳಲ್ಲಿ ಶ್ರೀ ತ್ರಿಲಿಂಗೇಶ್ವರ ಪ್ರೌಢ ಶಾಲೆ ಮತ್ತು ಶ್ರೀ ಕರಿಸಿದ್ದೇಶ್ವರ ದೇವಸ್ಥಾನದಲ್ಲಿ ಪಾಲ್ಗೊಂಡು ಗ್ರಾಮದ ನಾಗರಿಕರಿಗೆ, ಹಾಗೂ ಕಾಲೇಜು ವಿದ್ಯಾರ್ಥಿಗಳನ್ನು


ಉದಯವಾಹಿನಿ ಚಿತ್ರ

ಉದ್ದೇಶಿಸಿ ಬಸವಜ್ಯೋತಿ ಶಾಲೆಯ ಅಧ್ಯಕ್ಷ ಶಿವಶರಣಪ್ಪ ಬಳಿಗಾರ ಮಾತನಾಡಿ ಅಮಲಿನ ಪದಾರ್ಥಗಳಾದ ತಂಬಾಕು, ಗಾಂಜಾ, ಆಫೀಮು, ಡ್ರಗ್ಸ್ ಇತ್ಯಾದಿಗಳಿಗೆ ಯುವಕರು ಬಲಿಯಾಗತ್ತಿರುವದು ವಿಷಾದನಿಯ, NDPS 1985 ರಪ್ರಕಾರ ಮಾದಕವಸ್ತುಗಳ ಮಾರಾಟ ಮತ್ತು ಸೇವನೆ ಶಿಕ್ಷಾರ್ಹ ಅಪರಾಧವಾಗಿದೆ. ಮದ್ಯಪಾನದಿಂದ ಕುಟುಂಬಗಳೇ ನಾಶವಾಗುತ್ತಿವೆ. ಸರ್ಕಾರಮಾತ್ರ ಆದಾಯ ಸಂಗ್ರಹಣೆಗಾಗಿ ಸಂಪೂರ್ಣ ಮದ್ಯಪಾನ ನಿಷೇಧ ಜಾರಿಗೆ ತರಲು ಹಿಂದೇಟು ಹಾಕುತ್ತಿವೆ. ಮದ್ಯ ಪಾನದಿಂದಾಗಿ ಇಡೀ ಕುಟುಂಬಗಳೇ ನಾಶವಾಗುತ್ತಿವೆ.

ಈ ಸಂದರ್ಭ ನಿವೃತ್ತ ಶಿಕ್ಷಕರಾದ ಜಗದೀಶ ಅಂಗಡಿ, ವೀರಣ್ಣ ಮಾಲಿಪಾಟೀಲ, ಸುರೇಶ ಪುರ್ತಗೇರಿ, ಇತರರು, ಪ್ರಾಚಾರ್ಯರಾದ ಮಲ್ಲಿಕಾರ್ಜುನ ಕುಂಬಾರ, ಉಪನ್ಯಾಸಕರು, ಶಿಕ್ಷಕ ಬಳಗದವರು ಪಾಲ್ಗೊಂಡಿದ್ದರು.

## ಪ್ರತಿಯೋಬ್ಬರು ಎಸ್ಐಆರ್‌ನಲ್ಲಿ ಪಾಲ್ಗೊಂಡು ಅರ್ಹ ಮತದಾರರನ್ನು ಉಳಿಸಿಕೊಳ್ಳಿ

• **ಉದಯವಾಹಿನಿ, ಚಿಂಚೋಳಿ:**

ತಾಲ್ಲೂಕಿನಲ್ಲಿ 2,18,160 ಮತದಾರರಲ್ಲಿ 6,468 ಜನರು ಮೃತಪಟ್ಟದ್ದು, 2,508 ಜನರು ಎರಡು ಕಡೆ ಪಟ್ಟಿಯಲ್ಲಿರುವರು, 24,000 ಮತದಾರರು ಮತದಾರ ಪಟ್ಟಿಯಲ್ಲಿದ್ದು ಎಸ್ಐಆರ್ ಫಾರಂ ತುಂಬಿಕೋಟ್ಟಿಲ್ಲ, ಹಾಗಾಗಿ ಒಟ್ಟಾರೆ 33 ಸಾವಿರಕ್ಕಿಂತ ಹೆಚ್ಚು ಮತದಾರರು ಮತದಾರರ ಪಟ್ಟಿಯಿಂದ ಕೈಬಿಡುವ ಸಾಧ್ಯತೆಯಿದ್ದು ಇಂಥಹ ಮತದಾರರಿಗೆ ಸ್ಥಳೀಯ ರಾಜಕೀಯ ಮುಖಂಡರು ಮನೋವಲಿಸಿ ಸ್ಥಳೀಯವಾಗಿ ಮತದಾನ ಹಕ್ಕು ಉಳಿಸಿಕೋಳ್ಳುವಂತೆ ಮನವರಿಕೆ ಮಾಡಬೇಕೆಂದು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ನೋಂದಣಿ ಅಧಿಕಾರಿ ಸಂತೋಷ ಇನಾಂದಾರ್ ಹೇಳಿದರು.

ಪಟ್ಟಣದ ಚಂದಾಪೂರದ ವಾರ್ಡ ನಂ.19ರಲ್ಲಿ ಪುರಸಭೆ ವತಿಯಿಂದ ಹಮ್ಮಿಕೋಂಡ ವಾರ್ಡ ಮಟ್ಟದ ಸಭೆಯನ್ನು ಉದ್ದೇಶೀಸಿ ಮಾತನಾಡಿದ ಅವರು, ಅ.08 ರವರೆಗೆ ಎಲ್ಲರೂ ಒಗ್ಗೂಡಿ ಅರ್ಹ ಮತದಾರರಿಗೆ ಮತದಾನದಿಂದ ವಂಚಿತರಾಗದಂತೆ ಎಸ್ಐಆರ್‌ನಲ್ಲಿ ಫಾರಂ ತುಂಬದೆ ಇರುವವರನ್ನು ಗುರುತಿಸಿ ಮತದಾನದ ಹಕ್ಕು ದೊರಕಿಸಿಕೋಡಬೇಕು ಎಂದರು.

ಕೆಪಿಸಿಸಿ ಉಪಾಧ್ಯಕ್ಷ ಸುಭಾಷ ರಾಠೋಡ್ ಮಾತನಾಡಿ ಎಸ್ ಐಆರ್‌ನಲ್ಲಿ ಜಿಲ್ಲೆಯಲ್ಲಿಯೆ ಚಿಂಚೋಳಿ ಮೊದಲ ಸ್ಥಾನದಲ್ಲಿದೆ ಅಧಿಕಾರಿಗಳು ಬಿಎಲ್‌ಒ, ಬಿಎಲ್ಎ2, ಮೇಲ್ವಾಚಾರಕರು, ನೋಡಲ್ ಅಧಿಕಾರಿಗಳು ಉತ್ತಮ ಕೆಲಸ ಮಾಡಿದ್ದಾರೆ, ಈಗಾಗಲೇ ಕಾಂಗ್ರೇಸ್



ಉದಯವಾಹಿನಿ ಚಿತ್ರ

ಪಕ್ಷದಿಂದ ಮೊದಲೆ ತಾಲ್ಲೂಕಿನಲ್ಲಿ ವಿವಿಧಡೆ 05 ಸಭೆ ಮಾಡಿ ಜಾಗೃತಿ ಮೂಡಿಸಿದ್ದೇವೆ. ಸ್ಥಳಾಂತರ ಚಿಂಚೋಳಿ ಮತ್ತು ಕುಂಚಾವರಂ ವ್ಯಾಪ್ತಿಯಲ್ಲಿ ಹೆಚ್ಚು ಮತದಾರರು ಮಾಡಿಕೋಳ್ಳುತ್ತಿರುವುದು ಗಮನಕ್ಕೆ ಬಂದಿದೆ, ಆದರೆ ಮತದಾರರು ತಿಳಿದುಕೋಳ್ಳಬೇಕು ಹುಟ್ಟಿದ ಸ್ಥಳ ಜೀವನ ಆಸ್ತಿ ಪಾಸ್ತಿ ಸ್ಥಳೀಯವಾಗಿ ಇಟ್ಟುಕೋಂಡು ಬೇರೆಡೆ ಮತದಾನದ ಹಕ್ಕು ಸ್ಥಳಾಂತರ ಮಾಡಿಕೋಳಬೇಡಿ ಸ್ಥಳೀಯವಾಗಿ ಮತದಾನದ ಹಕ್ಕು ಉಳಿಸಿಕೋಳ್ಳಿ, ಬೇರೆ ಕಡೆಯಿಂದ ಇಲ್ಲಿ ಬಂದವರು ಮತ್ತು 18 ವರ್ಷ ತುಂಬಿದವರು ಫಾರಂ-6 ತುಂಬಲು ಅಧಿಕಾರಿಗಳು ಮತ್ತು ಬಿಎಲ್‌ಒಗಳು ತಿಳಿಸಬೇಕು ಎಂದು ಹೇಳಿದರು.

ಪುಸಸಭೆ ಮುಖ್ಯಾಧಿಕಾರಿ ಕಾಶಿನಾಥ ಧನ್ನಿ, ಅಬ್ದುಲ್ ಬಾಷೀದ್, ಶಬ್ಬೀರ್ ಅಹೇಮದ್, ಲಕ್ಷ್ಮಣ ಆವುಂಟಿ, ಮಾತನಾಡಿದರು. ರಾಮಶೇಟ್ಟಿ ಪವ್ಹಾರ್, ನಾಗೇಶ ಗುಣಾಜೀ, ಸುಭಾಷ ಪಾಟೀಲ್, ಸುರೇಶ ಭಂಟ್ಟಾ, ಉಮೇಶ, ವಿಶ್ವ ಬೀರನಳ್ಳಿ, ಜಗನ್ನಾಥ ಗುತ್ತೇದಾರ, ಸೇರಿದಂತೆ ಬಿಎಲ್‌ಒಗಳು, ಬಿಎಲ್ಎ2ಗಳು ಅನೇಕರಿದ್ದರು.

## ರಾಯರಡ್ಡಿ ಜೊತೆಗೂಡಿ ಜಿಲ್ಲೆಗೆ ಸಮಗ್ರ ಅಭಿವೃದ್ಧಿಗೆ ಶ್ರಮಿಸುವೆ: ಸಚಿವ ಶಿವರಾಜ ತಂಗಡಗಿ

• **ಉದಯವಾಹಿನಿ, ಯಲಬುರ್ಗಾ:**

ನಾನು ಹಾಗೂ ಸಚಿವ ಬಸವರಾಜ ರಾಯರಡ್ಡಿ ಅವರು ಒಟ್ಟಾಗಿ ಕೊಪ್ಪಳ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತೇವೆ. ಜಿಲ್ಲೆಯ ಅಭಿವೃದ್ಧಿಗೆ ಎಲ್ಲರೂ ಸಹಕಾರ ನೀಡಬೇಕು ಎಂದು ನೂತನ ಸಚಿವ ಶಿವರಾಜ ತಂಗಡಗಿ ಹೇಳಿದರು.

ಪಟ್ಟಣದ ಶಾಸಕರ ಗೃಹ ಕಚೇರಿಗೆ ಸಚಿವರಾದ ಬಳಿಕ ಮೊದಲ ಬಾರಿಗೆ ಆಗಮಿಸಿದ ಹಿನ್ನೆಲೆಯಲ್ಲಿ ಗುರುವಾರ ಅವಳಿ ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಗೌರವ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ರಾಜ್ಯ ಸರ್ಕಾರವು ಅಭಿವೃದ್ಧಿಗೆ ಬದ್ಧವಾಗಿದೆ. ಈ ಬಾರಿ ಕೊಪ್ಪಳ ಜಿಲ್ಲೆಗೆ ಎರಡು ಸಚಿವ ಸ್ಥಾನಗಳು ಲಭಿಸಿರುವುದು ಸಂತಸ ತಂದಿದೆ. ನಾನು ಮತ್ತು ಬಸವರಾಜ ರಾಯರಡ್ಡಿ ಅವರು ಜಿಲ್ಲೆಯ ಎಲ್ಲ ಶಾಸಕರ ವಿಶ್ವಾಸ ಪಡೆದು ಉತ್ತಮ ಆಡಳಿತ ನೀಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತೇವೆ. ಸಚಿವ ಬಸವರಾಜ ರಾಯರಡ್ಡಿ ಅವರ ಮಾರ್ಗದರ್ಶನದಲ್ಲಿ ಕೊಪ್ಪಳ ಜಿಲ್ಲೆಯ ಸಮಗ್ರ


ಉದಯವಾಹಿನಿ ಚಿತ್ರ

ಪ್ರಗತಿಗೆ ವಿಶೇಷ ಒತ್ತು ನೀಡಲಾಗುವುದು. ಇಡೀ ರಾಜ್ಯದ ಅಭಿವೃದ್ಧಿಯಲ್ಲಿಯೂ ಉತ್ತಮ ಕೆಲಸ ಮಾಡುವ ಸಂಕಲ್ಪ ಹೊಂದಿದ್ದೇವೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೆರಿಬಸಪ್ಪ ನಿಡಗುಂದಿ ಹಾಗೂ ಹನುಮಂತಗೌಡ ಚೆಂಡೂರು ಮಾತನಾಡಿ, ಕಾಂಗ್ರೆಸ್ ಸರ್ಕಾರದಲ್ಲಿ ಕೊಪ್ಪಳ ಜಿಲ್ಲೆಗೆ ಎರಡು ಸಚಿವ ಸ್ಥಾನಗಳು ಲಭಿಸಿರುವುದು ಸಂತಸ ತಂದಿದೆ. ಸಚಿವರಾದ ಬಸವರಾಜ ರಾಯರಡ್ಡಿ ಹಾಗೂ ಶಿವರಾಜ ತಂಗಡಗಿ ಅವರು ಜನರಿಗೆ ಉತ್ತಮ ಆಡಳಿತ ನೀಡುವ ಮೂಲಕ ಜನರ ಪ್ರೀತಿ, ವಿಶ್ವಾಸಕ್ಕೆ ಪಾತ್ರರಾಗಲಿದ್ದಾರೆ. ರಾಜ್ಯದಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಸರ್ಕಾರ ಎಲ್ಲ ವರ್ಗದ ಜನರ ಹಿತ ಕಾಪಾಡುತ್ತಿದೆ ಎಂದರು.

ಸನ್ಮಾನ: ನೂತನ ಸಚಿವ ಶಿವರಾಜ ತಂಗಡಗಿ ಅವರನ್ನು ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಸುಧೀರ್ ಕೊರ್ಲಳ್ಳಿ, ಮುಖಂಡರಾದ ಶರಣಪ್ಪ ಗಾಂಜಿ, ಡಾ. ಶಿವನಗೌಡ ದಾನರಡ್ಡಿ, ಮಲ್ಲಿಕಾರ್ಜುನ ಜಕ್ಕಲಿ, ಸಿಎಂ. ಈಶ್ವರ ಅಟಮಾಳಗಿ, ಮಹಾಂತೇಶ ಗಾಣಗೇರ್, ಹುಲಗಪ್ಪ ಬಂಡವಡ್ಡರ್ ಬಸವರಾಜ ಈಳಗೇರ, ಕಳಕೇಶ ಸೂಡಿ, ಅಶೋಕ ಮಾಲಿಪಾಟೀಲ, ಶರಣಗೌಡ ಬಸಾಪೂರ, ಶಿವಣ್ಣ ರಾಜೂರು, ಶಂಕರಗೌಡ ಮಾಲಿಪಾಟೀಲ, ನಿಂಗಪ್ಪ ಕಮತರ, ಸಿದ್ದು ಪಾಟೀಲ, ಪುನೀತ್ ಕೊಪ್ಪಳ ಮತ್ತು ಗ್ಯಾರಂಟಿ ಅನುಷ್ಠಾನ ಸಮಿತಿಸರ್ವ ಸದಸ್ಯರು ಸೇರಿದಂತೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಕಾನೂನು ಕಾರ್ಯಾಗಾರ ಕಿರಿಯ ವಕೀಲರು, ಸದುಪಯೋಗ ಪಡೆಯಲು ಮನವಿ

• **ಉದಯವಾಹಿನಿ, ಜಮಖಂಡಿ, :**

ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಹಾಗೂ ಜಮಖಂಡಿ ತಾಲ್ಲೂಕು ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ಆಗಸ್ಟ್ 7ರಿಂದ 9ರವರೆಗೆ ನಗರದ ಎಸ್ಆರ್ಎ ಕ್ಲಬ್‌ನ ಸಭಾಭವನದಲ್ಲಿ ಮೂರು ದಿನಗಳ ಕಾನೂನು ಕಾರ್ಯಾಗಾರ ನಡೆಯಲಿದ್ದು, ಕಿರಿಯ ವಕೀಲರು, ನ್ಯಾಯಾಂಗ ಸೇವಾ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವ ಅಭ್ಯರ್ಥಿಗಳು ಹಾಗೂ ಕಾನೂನು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸದುಪಯೋಗ ಪಡೆಯಬೇಕು ಎಂದು ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಎ.ಪಿ. ಕುಲಕರ್ಣಿ ಮನವಿ ಮಾಡಿದರು. ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಗಸ್ಟ್ 7ರಂದು ಬೆಳಿಗ್ಗೆ 10.30ಕ್ಕೆ ಒಂದನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಮಹಮದ್ ಇಂತಿಯಾಜ್ ಅಹಮದ್ ಕಾರ್ಯಾಗಾರವನ್ನು ಉದ್ಘಾಟಿಸಲಿದ್ದಾರೆ. ರಾಜ್ಯ ವಕೀಲರ ಪರಿಷತ್ತಿನ ಸದಸ್ಯರಾದ ಐ.ಎಂ. ಪಾಟೀಲ, ಜಿ.ವಿ. ಕೋರಿಮಠ, ನಾರಾಯಣಸ್ವಾಮಿ ಜಿ., ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶ ವೈದ್ಯ ಶ್ರೀಕಾಂತ, ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶ ಶ್ರೀಕಾಂತ ರವೀಂದ್ರ, ಪ್ರಧಾನ ಸಿವಿಲ್ ನ್ಯಾಯಾಧೀಶ ಬಸವರಾಜ, ಹೆಚ್ಚುವರಿ ಸಿವಿಲ್


ಉದಯವಾಹಿನಿ ಚಿತ್ರ

ನ್ಯಾಯಾಧೀಶೆ ಶ್ರೀದೇವಿ, ವಕೀಲರ ಸಂಘದ ಉಪಾಧ್ಯಕ್ಷೆ ವಿ.ಎ. ಭಟ್ ಹಾಗೂ ಪ್ರಧಾನ ಕಾರ್ಯದರ್ಶಿ ವೈ.ಕೆ. ಕಡಪಟ್ಟಿ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಮೂರು ದಿನಗಳ ಕಾರ್ಯಾಗಾರದಲ್ಲಿ ವಿವಿಧ ಮಹತ್ವದ ಕಾನೂನು ವಿಷಯಗಳ ಕುರಿತು ಹಿರಿಯ ನ್ಯಾಯವಾದಿಗಳು ಹಾಗೂ ಕಾನೂನು ತಜ್ಞರು ಉಪನ್ಯಾಸ ನೀಡಲಿದ್ದಾರೆ. ಮೊದಲ ದಿನದ ಅಧಿವೇಶನದಲ್ಲಿ ಬೆಳಗಾವಿಯ ಹಿರಿಯ ನ್ಯಾಯವಾದಿ ದಿನೇಶ್ ಪಾಟೀಲ ಅವರು ದಿವಾಣಿ ಪ್ರಕ್ರಿಯಾ ಸಂಹಿತೆ, ಮಧ್ಯಸ್ಥಿಕೆ ಮತ್ತು ಸಂಧಾನ ಕಾಯ್ದೆ ಹಾಗೂ ಭೂ ಕಂದಾಯ ಕಾಯ್ದೆ ಕುರಿತು ಉಪನ್ಯಾಸ ನೀಡಲಿದ್ದಾರೆ. ಒಡಿಶಾದ ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೃಷ್ಣಾ ದೀಕ್ಷಿತ್ ಅವರು 'ನ್ಯಾಯಾಂಗದಲ್ಲಿ ವಕೀಲರ ಪಾತ್ರ' ವಿಷಯ ಕುರಿತು ಮಾತನಾಡಲಿದ್ದಾರೆ.

## ಸಂತೋಷ ಲಾಡ್‌ಗೆ ಮಂತ್ರಿಗಿರಿ: ಮರಾಠಾ ಸಮಾಜದಿಂದ ವಿಜಯೋತ್ಸವ

• **ಉದಯವಾಹಿನಿ, ಬೀದರ್:**

ಸಿಎಂ ಡಿ.ಕೆ ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಇತ್ತೀಚೆಗೆ ಸಂತೋಷ ಲಾಡ್ ಅವರಿಗೆ ಸಚಿವ ಸ್ಥಾನ ನೀಡಿದ ಹಿನ್ನೆಲೆ ರಾಜ್ಯದ ಗಡಿ ಜಿಲ್ಲೆ ಬೀದರ್‌ನಲ್ಲಿ ಸಕಲ ಮರಾಠಾ ಸಮಾಜ ವತಿಯಿಂದ ವಿಜಯೋತ್ಸವ ಜರುಗಿತು. ನಗರದ ಶಿವಾಜಿ ಚೌಕ್‌ನಲ್ಲಿ ಸಮಾಜದ ಮುಖಂಡರು ಸೇರಿ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಸಮಾಜದ ಪೂಜ್ಯರಾದ ದಾದಾ ಮಹಾರಾಜ ನಗರಕರ್ ಮಾತನಾಡಿ, ಭಗವಂತನ ಸೃಷ್ಟಿಯಲ್ಲಿ ಪ್ರತಿಯೊಬ್ಬರಿಗೂ ಸಮಾಜದಲ್ಲಿ ಒಂದೊಂದು ಕರ್ಮವನ್ನು ನಿರ್ವಹಿಸುವ ಜವಾಬ್ದಾರಿ ಇರುತ್ತದೆ. ಅಧಿಕಾರವನ್ನು ಜನಸೇವೆಯ ಅವಕಾಶವನ್ನಾಗಿ ಪರಿಗಣಿಸಿ, ತಳಮಟ್ಟದ ಸ್ಥಳೀಯ ಸಂಸ್ಥೆಯಿಂದ ರಾಜಕೀಯ ಜೀವನ ಆರಂಭಿಸಿ ರಾಜ್ಯ ಸಚಿವ ಸ್ಥಾನದ ವರೆಗೆ ಬೆಳೆದಿರುವ ಸಂತೋಷ್ ಲಾಡ್ ಅವರ ರಾಜಕೀಯ ಪಯಣ ಗಮನಾರ್ಹವಾಗಿದೆ ಎಂದರು. ಪತ್ರಕರ್ತ ಪ್ರದೀಪ ಬಿರಾದಾರ ಮಾತನಾಡಿ, 2004ರಲ್ಲಿ ಸಂಡೂರು ವಿಧಾನಸಭಾ ಕ್ಷೇತ್ರದಿಂದ ಜನತಾ ದಳದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದರು. ಬಳಿಕ ಧಾರವಾಡ ಜಿಲ್ಲೆಯ ಕಲಘಟಗಿ ವಿಧಾನಸಭಾ ಕ್ಷೇತ್ರವನ್ನು ತಮ್ಮ ರಾಜಕೀಯ


ಉದಯವಾಹಿನಿ ಚಿತ್ರ

ಕರ್ಮ ಭೂಮಿಯನ್ನಾಗಿಸಿಕೊಂಡ ಅವರು ಕಾಂಗ್ರೆಸ್ ಪಕ್ಷದಿಂದ 2008, 2013 ಹಾಗೂ 2023ರ ವಿಧಾನಸಭಾ ಚುನಾವಣೆಗಳಲ್ಲಿ ಗೆಲುವು ಸಾಧಿಸಿದರು. ಈ ಮೂಲಕ ಒಟ್ಟು ನಾಲ್ಕು ಬಾರಿ ಶಾಸಕರಾಗಿ, ಮಾತ್ರವಲ್ಲದೆ ರಾಜ್ಯ ಸರ್ಕಾರದಲ್ಲಿ ಸಚಿವರಾಗಿಯೂ ಸಂತೋಷ್ ಲಾಡ್ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ವಾರ್ತಾ ಮತ್ತು ಪ್ರಸಾರ ಇಲಾಖೆ ಸೇರಿದಂತೆ ಕಾರ್ಮಿಕ ಇಲಾಖೆಯ ಹೊಣೆಯನ್ನು ವಿವಿಧ ಅವಧಿಗಳಲ್ಲಿ ನಿರ್ವಹಿಸಿರುವ ಅವರು, ಸಚಿವರಾಗಿ ಆಡಳಿತ ಮತ್ತು ಸಾರ್ವಜನಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂದರು.

# ಕುಡಿಯುವ ನೀರಿಗೆ ಆದ್ಯತೆ ನೀಡಿ; ಅಧಿಕಾರಿಗಳು ಕೇಂದ್ರ ಸ್ಥಾನದಲ್ಲೇ ಇರಲಿ

## ಜೊತೆಗೆ ಜಿಲ್ಲೆಯ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗದಂತೆ ಅಧಿಕಾರಿಗಳು ನಿರಂತರ ನಿಗಾ ವಹಿಸಬೇಕು

• **ಉದಯವಾಹಿನಿ, ಯಾದಗಿರಿ:**

ಮಳೆಗಾಲದಲ್ಲಿ ಎದುರಾಗುವ ಸಮಸ್ಯೆಗಳನ್ನು ಸಮರ್ಥವಾಗಿ ನಿಭಾಯಿಸುವ ಜತೆಗೆ ಜಿಲ್ಲೆಯ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗದಂತೆ ಅಧಿಕಾರಿಗಳು ನಿರಂತರ ನಿಗಾ ವಹಿಸಬೇಕು.

ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲೇ ಇದ್ದುಕೊಂಡು ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ವೈದ್ಯಕೀಯ ಶಿಕ್ಷಣ ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

**1 : ಕುಡಿಯುವ ನೀರಿನ ಕೊರತೆ**
**2 : ತಲಾ ಒಬ್ಬ ನೊಡಲ್ ಅಧಿಕಾರಿ**
**3 : ಜಲ ಜೀವನ ಮಿಷನ್ ಕಾಮಗಾರಿ**

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಬರ ಪರಿಸ್ಥಿತಿ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕುರಿತ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಳೆಯ ಕೊರತೆಯಿಂದ ಹಾನಿಗೊಳಗಾದ ಬೆಳೆಗಳ ಕುರಿತು ಸಮಗ್ರ ವರದಿ ಸಿದ್ಧಪಡಿಸಿ ತಕ್ಷಣ ಕಂದಾಯ ಇಲಾಖೆಗೆ ಸಲ್ಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದರು. ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ತಹಶೀಲ್ದಾರರು



ಉದಯವಾಹಿನಿ ಚಿತ್ರ

> ಕುಡಿಯುವ ನೀರಿನ ನಿರ್ವಹಣೆಗೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ತಲಾ ಒಬ್ಬ ನೊಡಲ್ ಅಧಿಕಾರಿಯನ್ನು ನೇಮಿಸಬೇಕು. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯಿತಿ ಕೇಂದ್ರದಲ್ಲಿಯೇ ಕಾರ್ಯನಿರ್ವಹಿಸಬೇಕು. ಜನರಿಗೆ ಅಧಿಕಾರಿಗಳು ಸುಲಭವಾಗಿ ಲಭ್ಯವಾಗಬೇಕು ಎಂದು ಸಚಿವರು ಹೇಳಿದರು.
> -ಡಾ. ಶರಣಪ್ರಕಾಶ್ ಪಾಟೀಲ್

ಮತ್ತು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು ನಿರಂತರವಾಗಿ ನಿಗಾ ವಹಿಸಬೇಕು.

ಜಲ ಜೀವನ ಮಿಷನ್ (ಜೆಜೆಎಂ) ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿದರೆ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಲಿದೆ ಎಂದು ಹೇಳಿದರು. ಸಭೆಯಲ್ಲಿ ಶಾಸಕರಾದ ಶರಣಬಸಪ್ಪ ದರ್ಶನಾಪುರ, ಚನ್ನಾರೆಡ್ಡಿ ಪಾಟೀಲ್ ತುನ್ನೂರ, ಶರಣಗೌಡ ಕಂದಕೂರ ಹಾಗೂ ರಾಜಾ ವೇಣುಗೋಪಾಲ ನಾಯಕ್ ಅವರು ವಿದ್ಯುತ್ ಕೊರತೆ, ಟ್ರಾನ್ಸ್‌ಫಾರ್ಮರ್ ಅಳವಡಿಕೆ ಮತ್ತು ದುರಸ್ತಿ ಸಮಸ್ಯೆಗಳನ್ನು ಪ್ರಸ್ತಾಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಜೆಸ್ಕಾಂ ಅಧಿಕಾರಿಗಳು 24 ಗಂಟೆಗಳೊಳಗೆ ಸಮಸ್ಯೆಗಳನ್ನು ಬಗೆಹರಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಮುಖ್ಯಮಂತ್ರಿ ಪ್ರತಿ

> **ಶಾಸಕ ಶರಣಗೌಡ ಕಂದಕೂರ ಅವರು ಪಿಡಿಒಗಳು ಕೇಂದ್ರ ಸ್ಥಾನದಲ್ಲಿರುವುದಿಲ್ಲ ಎಂಬ ವಿಷಯ ಪ್ರಸ್ತಾಪಿಸಿದ ವೇಳೆ, ಬೆಳಗ್ಗೆಯಿಂದ ಸಂಜೆವರೆಗೆ ನಾಲ್ಕು ಬಾರಿ ಹಾಜರಾತಿ ದಾಖಲಿಸುವ ವ್ಯವಸ್ಥೆ ಜಾರಿಗೊಳಿಸುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಸಚಿವರು ಸೂಚಿಸಿದರು.**

ವಿಧಾನಸಭಾ ಕ್ಷೇತ್ರಕ್ಕೆ 1 ಕೋಟಿ ಅನುದಾನ ನೀಡಿರುವುದನ್ನು ಉಲ್ಲೇಖಿಸಿದ ಸಚಿವರು, ಅಗತ್ಯವಿರುವ ಕಡೆ ಬೋರ್‌ವೆಲ್, ಆರ್‌ಒ ಘಟಕ ಸೇರಿದಂತೆ ವಿವಿಧ ಕಾಮಗಾರಿಗಳ ಅಂದಾಜು ವೆಚ್ಚದ ಪ್ರಸ್ತಾವನೆಗಳನ್ನು ಸಿದ್ಧಪಡಿಸಿ ಜಿಲ್ಲಾ ಪಂಚಾಯಿತಿಗೆ ಸಲ್ಲಿಸಿ ತ್ವರಿತವಾಗಿ ಅನುಷ್ಠಾನಗೊಳಿಸುವಂತೆ ಸಲಹೆ ನೀಡಿದರು. ಜಿಲ್ಲಾಧಿಕಾರಿ ರಾಹುಲ್ ತುಕಾರಾಂ ಪಾಂಡ್ವೆ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರ್ಡಿಯಾ ಜಿಲ್ಲೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಕುರಿತು ಮಾಹಿತಿ ನೀಡಿದರು.

ಸಭೆಯಲ್ಲಿ ಶಾಸಕರಾದ ಶರಣಬಸಪ್ಪ ದರ್ಶನಾಪುರ, ಚನ್ನಾರೆಡ್ಡಿ ಪಾಟೀಲ್ ತುನ್ನೂರ, ಶರಣಗೌಡ ಕಂದಕೂರ, ರಾಜಾ ವೇಣುಗೋಪಾಲ ನಾಯಕ್, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಮಿನಿ ನ್ಯೂಸ್

### ವಿಚಿತ್ರವಾದ ಆಡಿನ ಮರಿ ಜನನ

• **ಉದಯವಾಹಿನಿ, ಸೊರಬ:**

ತಾಲ್ಲೂಕಿನ ಉದ್ರಿ ಗ್ರಾಮ ಸಮೀಪದ ಉದ್ರಿ ವಡ್ಡಿಗೆರೆ ಗ್ರಾಮದಲ್ಲಿ ವಿಚಿತ್ರವಾದ ಆಡಿನ ಮರಿಯೊಂದು ಜನಿಸಿದ್ದು, ಗ್ರಾಮಸ್ಥರಲ್ಲಿ ಅಚ್ಚರಿ ಮೂಡಿಸಿದೆ.


ಉದಯವಾಹಿನಿ ಚಿತ್ರ

ಗ್ರಾಮದ ಕಾಳಿಂಗಪ್ಪ ಭಾವಿಕಟ್ಟೇರ್ ಮನೆ ಹಾಗೂ ಪುಟ್ಟಮ್ಮ ದಂಪತಿ ಕೃಷಿ ಚಟುವಟಿಕೆಯೊಂದಿಗೆ ಕುರಿಸಾಕಾಣಿಕೆಯನ್ನು ಮಾಡುತ್ತಿದ್ದಾರೆ. ಆಡೊಂದು ಜನ್ಮ ನೀಡಿದ ಮರಿ 8 ಕಾಲು, ಮೂರು ಕಿವಿ, ಎರಡು ಬಾಲ ಮತ್ತು ಎರಡು ನಾಲಿಗೆಯನ್ನು ಹೊಂದಿತ್ತು.

ಆರಂಭದಲ್ಲಿ ಅವಳಿಗಳು ಜನಿಸಬಹುದು ಎಂದು ಭಾವಿಸಲಾಗಿತ್ತು. ಆದರೆ ಮಧ್ಯಾಹ್ನದ ಸಮಯದಲ್ಲಿ ವಿಚಿತ್ರವಾಗಿ ಜನಿಸಿದ ಆಡಿನ ಮರಿ ಸಂಜೆಯ ವರೆಗೂ ಬದುಕುಳಿದಿತ್ತು. ಈ ಆಡಿನ ಮರಿಯನ್ನು ನೋಡಲು ಗ್ರಾಮಸ್ಥರು ಮಾತ್ರವಲ್ಲದೇ ಸುತ್ತಲಿನ ಗ್ರಾಮಸ್ಥರು ಸಹ ಆಗಮಿಸಿದ್ದರು.

### ಕಬ್ಬು ಪೂರೈಸಿದ ರೈತರಿಗೆ ರಿಯಾಯಿತಿ ದರದಲ್ಲಿ ಸಕ್ಕರೆ ವಿತರಣೆ

• **ಉದಯವಾಹಿನಿ, ಚಡಚಣ,-**

ಹಾವಿನಾಳದ ಶ್ರೀ ದತ್ತ ಇಂಡಿಯಾ ಪ್ರೈ.ಲಿ. ಕಾರ್ಖಾನೆ ವ್ಯಾಪ್ತಿಯ ಒಳಗಿನ ಮತ್ತು ವ್ಯಾಪ್ತಿಯ ಹೊರಗಿನ ಕಬ್ಬು ಬೆಳೆಗಾರ ರೈತರು ಹಿಂದಿನ 2025-26 ನೆಯ ಸಾಲಿನಲ್ಲಿ ಕಬ್ಬು ನುರಿಸಲು ಕಳುಹಿಸಿದ್ದು, ಅಂತಹ ರೈತರಿಗೆ ಪ್ರತಿ ಮೆ.ಟನ್ ಕಬ್ಬಿಗೆ ಅರ್ಧಾ ಕಿಲೋ ಸಕ್ಕರೆಯನ್ನು ರಿಯಾಯತಿ ದರದಲ್ಲಿ ಕಾರ್ಖಾನೆಯ ಸ್ಥಳದಲ್ಲಿ ವಿತರಿಸಲು ಪ್ರಾರಂಭಿಸಲಾಗಿದೆ. ಈ ವೇಳೆಯಲ್ಲಿ ಕಾರ್ಖಾನೆಯ ಉಪಾಧ್ಯಕ್ಷರಾದ ಮೃತ್ಯುಂಜಯ ಶಿಂಧೆಯವರು 2025-26 ನೆಯ ಸಾಲಿನಲ್ಲಿ ನುರಿಸಲು ಬಂದಿರುವ ಕಬ್ಬಿನ ಎಲ್ಲಾ ಬಿಲ್, ಕಟಾವು ಸಾಗಾಣಿಕೆಯ ಬಿಲ್ ಇತ್ಯಾದಿ ಬಿಲ್ಲನ್ನು ಶ್ರೀ ದತ್ತ ಇಂಡಿಯಾ ಕಂಪನಿಯು ಸರಿಯಾದ ವೇಳೆಗೆ ಕೊಡಲಾಗಿದೆ ಮತ್ತು ಈ ವರ್ಷವು ಕೂಡ ಅದೇ ಪರಂಪರೆ ಮುಂದುವರೆಯಲಿದೆ ಎಂದು ಹೇಳಿದರು. ಆದ್ದರಿಂದ ಕಾರ್ಖಾನೆಯ ವ್ಯಾಪ್ತಿಯ ಒಳಗಿನ ಮತ್ತು ವ್ಯಾಪ್ತಿಯ ಹೊರಗಿನ ರೈತರು ಮುಂದೆ ಬರುವ ಹಂಗಾಮಿನಲ್ಲಿ ತಾವು ಬೆಳೆದ ಎಲ್ಲಾ ಕಬ್ಬನ್ನು ನೋಂದಣಿ ಮಾಡಿಸಿ ತಮ್ಮ ಎಲ್ಲಾ ಕಬ್ಬನ್ನು ಕಾರ್ಖಾನೆಗೆ ನುರಿಸಲು ಕಳುಹಿಸಬೇಕೆಂದು ಆಹ್ವಾನಿಸಿದರು. ಅದರಂತೆ ಎಲ್ಲ ಕಬ್ಬು ಬೆಳೆಗಾರ ರೈತಬಾಂಧವರಿಗೆ ಕಂಪನಿಕಡೆಯಿಂದ ಶ್ರಾವಣ ಮಾಸದ ಮತ್ತು ನಾಗ ಪಂಚಮಿ ಹಬ್ಬದ ಶುಭಾಷಯಗಳು ತಿಳಿಸಿದರು.

### ಸುಳ್ಯ ನಗರದ ರಸ್ತೆ, ಚರಂಡಿ ದುರಸ್ತಿ ಪಡಿಸುವಂತೆ ಆಟೋ ಚಾಲಕರಿಂದ ಶಾಸಕರಿಗೆ ಮನವಿ

• **ಉದಯವಾಹಿನಿ, ಸುಳ್ಯ:**

ಸುಳ್ಯ ನಗರದ ರಸ್ತೆ, ಚರಂಡಿ ದುರಸ್ತಿ ಪಡಿಸುವಂತೆ ಆಟೋ ಚಾಲಕರು ಶಾಸಕರಿಗೆ ಮತ್ತು ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ. ಸುಳ್ಯ ನಗರ ಪಂಚಾಯಿತಿಗೆ ವ್ಯಾಪ್ತಿಗೆ ಒಳಪಟ್ಟ ರಸ್ತೆಗಳು ಎಕ್ಕುಟ್ಟಿ ಹೋಗಿದೆ, ರಸ್ತೆ ಬದಿಯ ಚರಂಡಿ ಸರಿಪಡಿಸದೆ ಮಳೆ ನೀರು ರಸ್ತೆಯಲ್ಲಿಯೇ ಹರಿಯುತಿದೆ. ಇದರಿಂದ ಸಾರ್ವಜನಿಕರ ಸಂಚಾರಕ್ಕೆ ಹಾಗೂ ಆಟೋ ರಿಕ್ಷಾ ಚಾಲಕರಿಗೆ ವಾಹನ ಚಲಾಯಿಸಲು ತೊಂದರೆ ಆಗುತಿದೆ. ಆದುದರಿಂದ ರಸ್ತೆ ಹಾಗೂ ಚರಂಡಿ ದುರಸ್ತಿ ಶೀಘ್ರ ಕೈಗೊಳ್ಳಬೇಕು ಎಂದು ಬಿಎಂಎಸ್ ಸಂಯೋಜಿತ ಸುಳ್ಯ ತಾಲ್ಲೂಕು ಆಟೋ ರಿಕ್ಷಾ ಚಾಲಕರ ಸಂಘದ ಪದಾಧಿಕಾರಿಗಳು ಶಾಸಕಿ ಭಾಗೀರಥಿ ಮುರುಳ್ಯ, ಹಾಗು ನಗರ ಪಂಚಾಯಿತಿ ಆಡಳಿತಾಧಿಕಾರಿ, ತಹಶೀಲ್ದಾರ್ ಮಂಜುಳ ಎಂ. ಅವರಿಗೆ ಮನವಿ ಸಲ್ಲಿಸಿದ್ದಾರೆ. ಕೂಡಲೇ ರಸ್ತೆ ಮತ್ತು ಚರಂಡಿ ದುರಸ್ತಿ ಶೀಘ್ರ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಸುಳ್ಯ ತಾಲೂಕು ಆಟೋರಿಕ್ಷಾ ಚಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ನಾರಾಯಣ ಎಸ್. ಎಂ, ಕೋಶಾಧಿಕಾರಿ ರವಿ ಎಸ್. ಸಂಘಟನಾ ಕಾರ್ಯದರ್ಶಿ ಸುಂದರ ಪೆರಾಜೆ, ಜತೆ ಕಾರ್ಯದರ್ಶಿ ಸುರೇಂದ್ರ ಕಾಮತ್ ನಿರ್ದೇಶಕರಾದ ಭಾನು ಪ್ರಕಾಶ್, ಹರೀಶ್ ನೆಕ್ರಾಜೆ ಕಿರಣ್ ಬೆಟ್ಟಂಪಾಡಿ ಮತ್ತಿತರರು ಉಪಸ್ಥಿತರಿದ್ದರು.

### ದುಗ್ಗಲಡ್ಕದ ಕಂದಡ್ಕ ಭಾಗದಲ್ಲಿ ಕಾಡಾನೆ ಹಾವಳಿ- ಕೃಷಿ ಹಾನಿ

• **ಉದಯವಾಹಿನಿ, ಸುಳ್ಯ:**

ಸುಳ್ಯದ ಕಂದಡ್ಕ ಭಾಗದಲ್ಲಿ ಕಾಡಾನೆಗಳ ಹಿಂಡು ದಾಳಿ ನಡೆಸಿ ವ್ಯಾಪಕ ಕೃಷಿ ಹಾನಿ ಮಾಡಿದೆ. ಕಳೆದ ಒಂದು ವಾರದಿಂದ ಈ ಭಾಗದಲ್ಲಿ ಬೀಡು ಬಿಟ್ಟಿರುವ 6 ಆನೆಗಳ ಹಿಂಡು ಕಂದಡ್ಕ, ನೀರಬಿದಿರೆ, ಕೊಯಿಕುಳಿ, ಕುಂಬೆತ್ತಿಬನ ಮತ್ತಿತರ ಭಾಗಗಳಲ್ಲಿ ಕೃಷಿ ಹಾನಿ ಮಾಡಿದೆ. ಕಂದಡ್ಕದ ಹೇಮಂತ ಕುಮಾರ್, ಅಜಯ್ ಕೃಷ್ಣ, ಯಶವಂತ ಕುಡೆಕಲ್ಲು, ಆನಂದ ನಾಯಕ್ ಮೊದಲಾದವರ ತೋಟಗಳಿಗೆ ನುಗ್ಗಿ ತೆಂಗಿನಮರ, ಬಾಳೆಗಿಡ ಹಾಗೂ ಅಡಿಕೆ ಗಿಡಗಳನ್ನು ಧ್ವಂಸ ಮಾಡಿ ಅಪಾರ ಹಾನಿ ಮಾಡಿವೆ. ಉಬರಡ್ಕ ಭಾಗದಲ್ಲಿ ಹಾನಿ ಮಾಡಿದ್ದ ಮರಿ ಸೇರಿ ಇರುವ ಆನೆಗಳ ಹಿಂಡು ಇದೀಗ ಕಂದಡ್ಕ ಭಾಗದಲ್ಲಿ ದಾಳಿ ಮಾಡಿದೆ. ಆನೆಗಳನ್ನು ಕಾಡಿಗೆ ಬೆನ್ನಟ್ಟಲು ಎಲಿಫೆಂಟ್ ಟಾಸ್ಕ್ ಫೋರ್ಸ್ ಮತ್ತು ಅರಣ್ಯ ಇಲಾಖೆಯ ಸಿಬ್ಬಂದಿಗಳು ಆಗಮಿಸಿ, ಕಂದಡ್ಕ, ನೀರಬಿದಿರೆ ಪ್ರದೇಶಗಳಲ್ಲಿ ಸಂಚರಿಸಿ ಸಿಡಿಮದ್ದುಗಳನ್ನು ಸಿಡಿಸಿ ಕಾಡಿಗೆ ಅಟ್ಟುವ ಪ್ರಯತ್ನವನ್ನು ರಾತ್ರಿ ಎರಡು ಗಂಟೆವರೆಗೂ ಮಾಡಿದರು. ಇವರಿಗೆ ಸ್ಥಳೀಯ ಯುವಕರು ಸಹಕರಿಸಿದರು.

### ಅನಧಿಕೃತ ಗುಡ್ಡ ಕಟಾವು, ಅಧಿಕಾರಿಗಳ ನಿರ್ಲಕ್ಷ್ಯ ಆರೋಪ

• **ಉದಯವಾಹಿನಿ, ಮಂಗಳೂರು**

ಮಂಗಳೂರು ತಾಲ್ಲೂಕಿನ ಗುರುಪುರ ಸಮೀಪದ ಅನೆಬಾಲಿಯಲ್ಲಿ ಭಾರೀ ಭೂಕುಸಿತ ಸಂಭವಿಸಿ, ಮೂರು ಕುಟುಂಬಗಳು ಜೀವಭಯದಲ್ಲಿ ದಿನ ಕಳೆಯುವಂತಾಗಿದೆ. ವರ್ಷಗಳ ಶ್ರಮ, ಸಾಲಸೋಲ ಮಾಡಿ ಕಟ್ಟಿದ ಬಡ ಕುಟುಂಬದ ಕನಸಿನ ಮನೆ ಇದೀಗ ಕುಸಿತದ ಅಂಚಿನಲ್ಲಿದ್ದು, ಖಾಸಗಿ ಜಮೀನಿನಲ್ಲಿ ನಡೆದಿರುವ ಅನಧಿಕೃತ ಗುಡ್ಡ ಕಟಾವೇ ಈ ದುರ್ಘಟನೆಗೆ ಕಾರಣ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಜೊತೆಗೆ, ಸ್ಥಳೀಯ ಆಡಳಿತದ ನಿರ್ಲಕ್ಷ್ಯವೂ ಪರಿಸ್ಥಿತಿಯನ್ನು ಮತ್ತಷ್ಟು ಗಂಭೀರಗೊಳಿಸಿದೆ ಎಂದು ದೂರಿದ್ದಾರೆ. ನಿರಂತರ ಮಳೆಯಿಂದಾಗಿ ಅಜ್ಮಲ್ ಅವರ ಮನೆಯ ಹಿಂಭಾಗದಲ್ಲಿ ಭೂಕುಸಿತ ಉಂಟಾಗಿ, ಮನೆಯ ಹಿಂಭಾಗದ ಒಂದು ಭಾಗ ಸಂಪೂರ್ಣವಾಗಿ ಕುಸಿದಿದೆ. ಮನೆ ಯಾವುದೇ ಕ್ಷಣದಲ್ಲಿ ಸಂಪೂರ್ಣವಾಗಿ ಕುಸಿಯುವ ಅಪಾಯ ಇರುವುದರಿಂದ, ಸ್ಥಳೀಯ ದಾನಿಯೊಬ್ಬರ ನೆರವಿನಿಂದ ಕುಟುಂಬವನ್ನು ಬಾಡಿಗೆ ಮನೆಗೆ ಸ್ಥಳಾಂತರಿಸಲಾಗಿದೆ.

ಈ ಕಾರಣದಿಂದ ಸುತ್ತಮುತ್ತಲಿನ ಹಲವು ಮನೆಗಳು ಅಪಾಯದ ಸ್ಥಿತಿಗೆ ತಲುಪಿವೆ ಎಂದು ಅವರು ತಿಳಿಸಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ಇಂದು ನೀವು ನಿಮ್ಮ ಹಣವನ್ನು ಧಾರ್ಮಿಕ ಚಟುವಟಿಕೆಗಳಲ್ಲಿ ಹೂಡಿಕೆ ಮಾಡಬಹುದು, ಇದರಿಂದ ನೀವು ಮಾನಸಿಕ ಶಾಂತಿಯನ್ನು ಪಡೆಯುವ ಸಂಪೂರ್ಣ ಸಾಧ್ಯತೆ ಇದೆ.

**ವೃಷಭ** ನಿಮ್ಮ ಹಣವನ್ನು ಉಳಿಸಲು ನೀವು ಇಂದು ನಿಮ್ಮ ಮನೆಯ ಜನರೊಂದಿಗೆ ಮಾತನಾಡಬೇಕು. ಅವರ ಸಲಹೆ ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಹಾಯಕವಾಗುತ್ತದೆ. ನೀವು ಕಾಳಜಿ ವಹಿಸುವ ಯಾರಾದರ ಜೊತೆಗಿನ ಸಂವಹನದ ಕೊರತೆ ನಿಮಗೆ ಖಿನ್ನತೆಯನ್ನು ಉಂಟುಮಾಡುತ್ತದೆ.

**ಮಿಥುನ** ಕೆಲವು ಕುಟುಂಬದ ಸದಸ್ಯರು ತಮ್ಮ ಅಸೂಯೆಯ ವರ್ತನೆಯಿಂದ ನಿಮಗೆ ಕಿರಿಕಿರಿ ಮಾಡಬಹುದು. ಆದರೆ ತಾಳ್ಮೆ ಕಳೆದುಕೊಳ್ಳುವುದು ಬೇಡ. ಇಲ್ಲದಿದ್ದರೆ ಪರಿಸ್ಥಿತಿ ನಿಯಂತ್ರಣ ಮೀರಬಹುದು. ಗುಣಪಡಿಸಲಾರದ್ದನ್ನು ತಡೆದುಕೊಳ್ಳಬೇಕು ಎಂದು ನೆನಪಿಡಿ.

**ಕರ್ಕಾಟಕ** ಇಂದು, ನಿಮ್ಮ ಆರೋಗ್ಯವು ಆರೋಗ್ಯಕರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ನೀವು ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ, ನೀವು ಇದನ್ನು ಮಾಡದಿದ್ದರೆ ಸರಕುಗಳು ಕದಿಯುವ ಸಾಧ್ಯತೆಯಿದೆ. ಧಾರ್ಮಿಕ ಸ್ಥಳಕ್ಕೆ ಅಥವಾ ಸಂಬಂಧಿಗಳ ಭೇಟಿ ಸಾಧ್ಯವಿದೆ.

**ಸಿಂಹ** ಅನಂತ ಚೈತನ್ಯ ಮತ್ತು ಉತ್ಸಾಹ ನಿಮ್ಮನ್ನು ಆವರಿಸುತ್ತದೆ ಮತ್ತು ನೀವು ಯಾವುದೇ ಅವಕಾಶವನ್ನು ನಿಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತೀರಿ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ಸಂಬಂಧಿಗಳು / ಸ್ನೇಹಿತರು ಒಂದು ಅದ್ಭುತ ಸಂಜೆಗಾಗಿ ಬರುತ್ತಾರೆ. ದಿಟ್ಟ ಕ್ರಮಗಳು ಮತ್ತು ನಿರ್ಧಾರಗಳು ಅನುಕೂಲಕರ ಲಾಭಗಳನ್ನು ತರುತ್ತದೆ.

**ಕನ್ಯಾ** ನೀವು ಹಲವಾರು ಒತ್ತಡಗಳು ಭಿನ್ನಾಭಿಪ್ರಾಯಗಳನ್ನು ಎದುರಿಸಬೇಕಾಗಬಹುದು ಹಾಗೂ ಇದು ನಿಮಗೆ ಕಿರಿಕಿರಿ ಹಾಗೂ ಆತಂಕದ ಭಾವನೆಗಳನ್ನು ಉಂಟುಮಾಡಬಹುದು. ಹಣಕಾಸು ಲಾಭ ಒಂದಕ್ಕಿಂತ ಹೆಚ್ಚು ಮೂಲಗಳಿಂದ ಬರುತ್ತದೆ. ಮನೆಯಲ್ಲಿನ ಕೆಲವು ಬದಲಾವಣೆಗಳು ನಿಮ್ಮನ್ನು ಭಾವುಕರನ್ನಾಗಿಸಬಹುದು.

**ತುಲಾ** ವಿಶ್ರಾಂತಿ ಪ್ರಮುಖವಾದ ಒಂದು ದಿನ ಇತ್ತೀಚೆಗೆ ನೀವು ಬಹಳಷ್ಟು ಮಾನಸಿಕ ಒತ್ತಡ ಎದುರಿಸುತ್ತಿದ್ದೀರಿ ಮನೋಲ್ಲಾಸ ಮನೋರಂಜನೆ ನಿಮಗೆ ವಿಶ್ರಾಂತಿ ಪಡೆಯಲು ಸಹಾಯ ಮಾಡುತ್ತದೆ. ನೀವು ಯಾತ್ರೆಯಲ್ಲಿ ಹೋಗುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ಗಮನ ಹರಿಸಿ ಅವುಗಳನ್ನು ಕಡಿಯುವ ಸಧ್ಯತೆ ಇದೆ.

**ವೃಶ್ಚಿಕ** ನಿಮ್ಮ ಭಯವನ್ನು ಗುಣಪಡಿಸಲು ಇದು ಒಳ್ಳೆಯ ಸಮಯ. ಇದು ಭೌತಿಕ ಚೈತನ್ಯವನ್ನು ಕಡಿಮೆ ಮಾಡುವುದಲ್ಲದೇ ಜೀವಿತಾವಧಿಯನ್ನೂ ಕಡಿಮೆ ಮಾಡುತ್ತದೆ ಎಂದು ನೀವು ಅರ್ಥ ಮಾಡಿಕೊಳ್ಳಬೇಕು. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ಸಂಬಂಧಿಗಳು ನಿಮಗೆ ಸಹಾಯ ಹಸ್ತ ನೀಡಲು ಒಪ್ಪಿಕೊಳ್ಳುತ್ತಾರೆ.

**ಧನಸ್ಸು** ವಿಶೇಷವಾಗಿ ಹೃದಯ ರೋಗಿಗಳು ಕಾಫಿಯನ್ನು ಬಿಡಬೇಕು. ಹಣದ ಕೊರತೆ ಇಂದು ನಿಮ್ಮ ಮನೆಯಲ್ಲಿ ಅಪಶ್ರುತಿಗೆ ಕಾರಣವಾಗಬಹುದು. ಅಂತಹ ಪರಿಸ್ಥಿತಿಯಲ್ಲಿ ನೀವು ನಿಮ್ಮ ಮನೆಯವರೊಂದಿಗೆ ಯೋಚಿಸಿ ಅರ್ಥಮಾಡಿಕೊಂಡು ಮಾತನಾಡಿ ಮತ್ತು ಅವರಿಂದ ಸಲಹೆಯನ್ನು ತೆಗೆದುಕೊಳ್ಳಿ.

**ಮಕರ** ಸ್ವಲ್ಪ ವ್ಯಾಯಾಮದೊಂದಿಗೆ ನಿಮ್ಮ ದಿನವನ್ನು ಪ್ರಾರಂಭಿಸಿ ನಿಮ್ಮ ಬಗ್ಗೆ ನೀವೇ ಒಳ್ಳೆಯ ಅಭಿಪ್ರಾಯ ಇಟ್ಟುಕೊಳ್ಳುವುದು ಮುಖ್ಯ ಇದನ್ನು ದಿನವೂ ಮಾಡುವುದನ್ನು ರೂಢಿ ಮಾಡಿಕೊಳ್ಳಿ ಹಾಗೂ ಅದನ್ನು ಕಟ್ಟುನಿಟ್ಟಾಗಿ ಅನುಸರಿಸಿ. ಅನಿರೀಕ್ಷಿತ ಬಿಲ್‌ಗಳು ಹಣಕಾಸಿನ ಹೊರೆಯನ್ನು ಹೆಚ್ಚಿಸುತ್ತದೆ.

**ಕುಂಭ** ಅಶಕ್ತ ದೇಹ ಮನಸ್ಸನ್ನು ದುರ್ಬಲಗೊಳಿಸುವುದರಿಂದ ನಿಮ್ಮ ಶಕ್ತಿಯನ್ನು ಮರಳಿ ಪಡೆಯಲು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಿ. ನಿಮ್ಮಲ್ಲಿ ಸಾಮರ್ಥ್ಯದ ಕೊರತೆಯಿರದೇ ಇಚ್ಛಾಶಕ್ತಿಯ ಕೊರತೆಯಿದೆಯೆಂದು ನೀವು ಅರ್ಥಮಾಡಿಕೊಳ್ಳಬೇಕು. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು.

**ಮೀನ** ವಿಧಿಯನ್ನು ಆಧರಿಸದಿರಿ ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದ್ದು ಇದು ಎಂದಿಗೂ ತಾನಾಗಿಯೇ ನಿಮ್ಮ ಬಳಿ ಬರುವುದಿಲ್ಲ. ನಿಮ್ಮ ತೂಕವನ್ನು ನಿಯಂತ್ರಿಸಲು ನಿಮ್ಮ ಆರೋಗ್ಯವನ್ನು ಪುನಃ ಪಡೆಯಲು ವ್ಯಾಯಾಮ ಮಾಡಲು ಇದು ಒಳ್ಳೆಯ ಸಮಯ.

# ತುಂಬುವತ್ತ ತುಂಗಭದ್ರಾ : ಶೇ.60ರಷ್ಟು ಭರ್ತಿಯಾದ ಜಲಾಶಯ

## 1ಲಕ್ಷ ಕ್ಯುಸೆಕ್‌ಗೂ ಅಧಿಕ ಒಳಹರಿವು ದಾಖಲು, ಜಲಾಶಯದಲ್ಲಿ 61 ಟಿಎಂಸಿ ನೀರಿನ ಸಂಗ್ರಹವಿದೆ.

• **ಉದಯವಾಹಿನಿ, ಹೊಸಪೇಟೆ (ವಿಜಯನಗರ):**

ಜಲಾನಯನ ಪ್ರದೇಶದಲ್ಲಿ ಮುಂಗಾರು ಮಳೆಯ ಅಬ್ಬರದಿಂದ ತುಂಗಭದ್ರಾ ಜಲಾಶಯದ ನೀರಿನ ಮಟ್ಟ ಗಣನೀಯ ಏರಿಕೆಯಾಗುತ್ತಿದೆ. ಜಲಾಶಯ ಭರ್ತಿಗೆ ದಿನಗಣನೆ ಶುರುವಾಗಿದ್ದು, ಅಚ್ಚುಕಟ್ಟು ಪ್ರದೇಶದ ಅನ್ನದಾತರ ಮುಂಗಾರಿನ ಕನಸು ನನಸಾಗುವ ಭರವಸೆ ಮೂಡಿಸಿದೆ.

ಪ್ರಸಕ್ತ ಜಲವರ್ಷದಲ್ಲಿ ಅತ್ಯಧಿಕ ಒಳಹರಿವು 1 ಲಕ್ಷ ಕ್ಯುಸೆಕ್ ದಾಟಿದೆ . ಜಲಾಶಯದ ಒಡಲು ದಿನದಿಂದ ದಿನಕ್ಕೆ ತುಂಬಿ ತುಳುಕುತ್ತಿದೆ. ಆರಂಭದಲ್ಲಿ ಕೈಕೊಟ್ಟು ಚಿಂತೆಗೆ ದೂಡಿದ್ದ ವರುಣ, ನಂತರ ಸ್ವಲ್ಪ ಸುರಿದು ಒಂದಷ್ಟು ವಿಶ್ರಾಂತಿ ಪಡೆದಿದ್ದ. ಇದೀಗ ಮತ್ತೆ ಉದಾರವಾಗಿ ಸುರಿಯುತ್ತಿದ್ದಾನೆ. ಈ ಹಿನ್ನೆಲೆಯಲ್ಲಿ ಜಲಾಶಯದ ಒಳಹರಿವು ಏರುಮುಖವಾಗಿದೆ. ನೀರಿನ ಸಂಗ್ರಹ ಮಟ್ಟವೂ ಗಣನೀಯವಾಗಿ ಹೆಚ್ಚುತ್ತಿದೆ. ಕಳೆದ ಮೂರ್ನಾಲ್ಕು ದಿನಗಳಲ್ಲಿ ಒಳಹರಿವು ಏಕಾಏಕಿ ಅನಿರೀಕ್ಷಿತ ಏರಿಕೆ ಕಂಡಿದೆ.

1.ಜಲಾಶಯದಲ್ಲಿ ನೀರಿನ ಸಂಗ್ರಹ ಪ್ರಮಾಣ ಹೆಚ್ಚು
2.ಕೊಪ್ಪಳ ಜಿಲ್ಲೆಯ ಪ್ರದೇಶದ ರೈತರು ಸಂತಸ
3.ನೀರಿನ ಹಾಲಿ ಸಂಗ್ರಹ ,ಮುಂದಿನ ನಿರೀಕ್ಷಿತ ಒಳಹರಿವು

**ಇನ್ನೂ ಹೆಚ್ಚಲಿದೆ ಒಳಹರಿವು:**
ಜಲಾಶಯದಲ್ಲಿ ಸದ್ಯ 61 ಟಿಎಂಸಿ ನೀರಿನ ಸಂಗ್ರಹವಿದೆ. ಈ ಒಳಹರಿವಿನ ಪ್ರಮಾಣ ಆಧರಿಸಿ ಜಲಾನಯನ ಪ್ರದೇಶದಿಂದ ಇನ್ನೂ 20ರಿಂದ 30 ಟಿಎಂಸಿ ನೀರು ಜಲಾಶಯಕ್ಕೆ ಹರಿದು ಬರುವ ಅಂದಾಜಿದೆ. ಒಳಹರಿವಿನ ಪ್ರಮಾಣ ಹೀಗೆ ಮುಂದುವರಿದರೆ ಜಲಾಶಯದ ನೀರಿನ ಮಟ್ಟ ಮತ್ತಷ್ಟು ಹೆಚ್ಚಾಗಿ ಕೆಲವೇ ದಿನಗಳಲ್ಲಿ ಭರ್ತಿಯಾಗುವ ಸಾಧ್ಯತೆಯಿದೆ. ಸಾಮಾನ್ಯವಾಗಿ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಒಂದು ಬೆಳೆಗೆ ಕನಿಷ್ಠ 90 ಟಿಎಂಸಿ ನೀರು ಬೇಕಾಗುತ್ತದೆ. ನೀರಿನ ಹಾಲಿ ಸಂಗ್ರಹ ಮತ್ತು ಮುಂದಿನ ನಿರೀಕ್ಷಿತ ಒಳಹರಿವನ್ನು ಗಮನಿಸಿದರೆ ಮುಂಗಾರಿನ ಕೃಷಿ ಚಟುವಟಿಕೆಗಳಿಗೆ ನೀರಿನ ಕೊರತೆ ನೀಗುವ ನಿರೀಕ್ಷೆಯಿದೆ.

**ಅನ್ನದಾತರ ಹರ್ಷ**
ಜಲಾಶಯದಲ್ಲಿ ನೀರಿನ ಸಂಗ್ರಹ ಪ್ರಮಾಣ ಹೆಚ್ಚಿರುವುದರಿಂದ ವಿಜಯನಗರ, ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳ ಅಚ್ಚುಕಟ್ಟು ಪ್ರದೇಶದ ರೈತರು ಸಂತಸಗೊಂಡಿದ್ದಾರೆ. ಒಂದು ಬೆಳೆಗೆ ಅಗತ್ಯವಿರುವ ನೀರಿನ ನಿರ್ವಹಣೆಗೆ ಪೂರಕವಾದ ವಾತಾವರಣ ಕಾಣಿಸುತ್ತಿದೆ. ಜಲಾನಯನ ಪ್ರದೇಶದಲ್ಲಿ ಮಳೆ ಇನ್ನೂ ಕೆಲವು ದಿನ ಮುಂದುವರಿದರೆ ಬೆಳೆಗಳಿಗೆ ಸಮಯಕ್ಕೆ ಸರಿಯಾಗಿ ನೀರು ಸಿಗಲಿದೆ ಎಂಬ ವಿಶ್ವಾಸದಿಂದ ರೈತರು ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ.

ಉದಯವಾಹಿನಿ ಚಿತ್ರ



ತುಂಗಭದ್ರಾ ಜಲಾಶಯಕ್ಕೆ ಸದ್ಯ ಉತ್ತಮ ಒಳಹರಿವಿದೆ. ಇದೇ ರೀತಿ ಮುಂದುವರಿದರೆ ಜಲಾಶಯ ಶೀಘ್ರವೇ ಭರ್ತಿಯಾಗುತ್ತದೆ. ಕಳೆದ ವರ್ಷ 157 ಟಿಎಂಸಿ ನೀರು ಬಳಸಿಕೊಳ್ಳಲಾಗಿತ್ತು. ಈ ಬಾರಿಯೂ ಹೆಚ್ಚಿನ ನೀರು ಬಂದರೆ ಅಚ್ಚುಕಟ್ಟು ಪ್ರದೇಶಕ್ಕೆ ಅನುಕೂಲವಾಗಲಿದೆ ಎಂದಿದ್ದಾರೆ .
-ನಾರಾಯಣನಾಯ್ಕ ಅಧೀಕ್ಷಕ ಅಭಿಯಂತರ, ತುಂಗಭದ್ರಾ ಮಂಡಳಿ, ಮುನಿರಾಬಾದ್.

### ಕರ್ನಾಟಕಕ್ಕೆ ವರುಣನ ಕೃಪೆ

ಜಲಾಶಯಗಳಿಗೆ ಜೀವಕಳೆ! ರೈತರಿಗೆ ಭಾರೀ ರಿಲೀಫ್! ಯಾವ ಡ್ಯಾಂನಲ್ಲಿ ಎಷ್ಟಿದೆ ನೀರು 4 ದಿನಗಳಲ್ಲಿ 22 ಟಿಎಂಸಿ ತುಂಗಭದ್ರಾ ಜಲಾಶಯಕ್ಕೆ ಕಳೆದ ನಾಲ್ಕೇ ದಿನಗಳಲ್ಲಿ ಬರೋಬ್ಬರಿ 22 ಟಿಎಂಸಿ ನೀರು ಹರಿದು ಬಂದಿದೆ. ಆ.1ರಂದು 38.69 ಟಿಎಂಸಿ ನೀರಿನ ಸಂಗ್ರಹ ಮತ್ತು 22 ಸಾವಿರ ಕ್ಯುಸೆಕ್ ಒಳಹರಿವಿತ್ತು. ಒಳಹರಿವಿನ ದಿಢೀರ್ ಏರಿಕೆಯಿಂದ ಆ.5 ರಂದು ಬೆಳಗಿನ ವೇಳೆಗೆ 61 ಟಿಎಂಸಿ ನೀರಿನ ಸಂಗ್ರಹ ದಾಖಲಾಗಿದೆ. 1 ಲಕ್ಷ ಕ್ಯೂಸೆಕ್ ಒಳಹರಿವಿದ್ದು, 1,500 ಕ್ಯೂಸೆಕ್ ಹೊರಹರಿವು ಹಾಗೂ 1,619.81 ಅಡಿ ನೀರಿನ ಮಟ್ಟ ದಾಖಲಾಗಿದೆ.

ಚುರುಕುಗೊಂಡ ಮಳೆ ಹಿನ್ನೆಲೆ ತುಂಗಭದ್ರಾ ಜಲಾಶಯದ ಒಳಹರಿವು ಹೆಚ್ಚಾಗಿದ್ದು, ವಿಜಯನಗರ, ರಾಯಚೂರು, ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಗಳ ರೈತರು ಬೆಳೆಗಳಿಗೆ ನೀರು ಸಿಗುವ ನಿರೀಕ್ಷೆಯಲ್ಲಿದ್ದಾರೆ. ಕಳೆದ ನಾಲ್ಕು ದಿನಗಳಲ್ಲಿ ಒಳಹರಿವು 1 ಲಕ್ಷ ಕ್ಯುಸೆಕ್ ನಷ್ಟಿದ್ದು, ಜಲಾಶಯದಲ್ಲಿ 61 ಟಿಎಂಸಿ ನೀರಿನ ಸಂಗ್ರಹವಿದೆ. ಮುಂಗಾರಿನ 2 ತಿಂಗಳ ಮಳೆ ಕೊರತೆಯಿಂದ ಕೃಷಿಗೆ ಹಿನ್ನಡೆಯಾಗಿತ್ತು. ಆಗಸ್ಟ್ ತಿಂಗಳ ಮಳೆಯಿಂದಾದರೂ ರೈತರ ಬೆಳೆಗಳಿಗೆ ನೀರು ಸಿಗುವ ನಿರೀಕ್ಷೆ ಹೆಚ್ಚಾಗಿದ್ದು, ಹೊಸ ಭರವಸೆ ಮೂಡಿಸಿದೆ.

# ಪರಸನಹಳ್ಳಿಯಲ್ಲಿ ಅಕ್ರಮ ಮದ್ಯ, ಇಸ್ಪೀಟ್ ಜೂಜಾಟ ಮುಕ್ತಿಗೆ ಆಗ್ರಹ: ಸರ್ಕಾರಕ್ಕೆ ಕಾನೂನು ವಿದ್ಯಾರ್ಥಿ ಮನವಿ

• **ಉದಯವಾಹಿನಿ, ಕೆಂಭಾವಿ :**

ಹೋಬಳಿಯ ಪರಸನಹಳ್ಳಿ ಗ್ರಾಮದಲ್ಲಿ ಕಳೆದ ಹಲವು ವರ್ಷಗಳಿಂದ ಎಗ್ಗಿಲ್ಲದೆ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟ, ಇಸ್ಪೀಟ್ ಜೂಜಾಟ ಮಿತಿಮೀರಿದ ಲೇವಾದೇವಿ (ಬಡ್ಡಿ) ದಂಧೆಯನ್ನು ತಕ್ಷಣವೇ ತಡೆಗಟ್ಟಬೇಕೆಂದು ಆಗ್ರಹಿಸಿ ಕಾನೂನು ವಿದ್ಯಾರ್ಥಿ ಪ್ರಶಾಂತ್ ಎಸ್. ದೊಡ್ಡಮನಿ ಅವರು ರಾಜ್ಯದ ಗೌರವಾನ್ವಿತ ಮುಖ್ಯಮಂತ್ರಿಗಳು, ಗೃಹ ಸಚಿವರು ಹಾಗೂ ಅಬಕಾರಿ ಇಲಾಖೆಯ ಆಯುಕ್ತರಿಗೆ ಪತ್ರದ ಮೂಲಕ ದೂರು ಸಲ್ಲಿಸಿದ್ದಾರೆ.

**ಶಾಲಾ-ದೇವಾಲಯಗಳ ಬಳಿಯೇ ಜೂಜಾಟ, ಮದ್ಯ ಮಾರಾಟ!**
ಪರಸನಹಳ್ಳಿ ಗ್ರಾಮದಲ್ಲಿ ಸುಮಾರು 20ಕ್ಕೂ ಹೆಚ್ಚು ಸ್ಥಳಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಲಾಗುತ್ತಿದೆ. ಅಷ್ಟೇ ಅಲ್ಲದೆ, ಸರಕಾರಿ ಶಾಲೆಗಳು ಹಾಗೂ ದೇವಾಲಯಗಳ ಆವರಣದಲ್ಲಿಯೇ ಬಹಿರಂಗವಾಗಿ ಇಸ್ಪೀಟ್ ಜೂಜಾಟ ನಡೆಯುತ್ತಿದೆ ಎಂದು ದೂರಿನಲ್ಲಿ ಗಂಭೀರವಾಗಿ ಆರೋಪಿಸಲಾಗಿದೆ.

ಉದಯವಾಹಿನಿ ಚಿತ್ರ



ಈ ಅಕ್ರಮ ಚಟುವಟಿಕೆಗಳು ಮತ್ತು ಚಕ್ರಬಡ್ಡಿ ದಂಧೆಯಿಂದಾಗಿ ಗ್ರಾಮದ ಬಡ ಕುಟುಂಬಗಳು ಸಂಪೂರ್ಣ ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಇದರಿಂದಾಗಿ:ಮಕ್ಕಳ ಭವಿಷ್ಯ ಹಾಗೂ ಶಿಕ್ಷಣದ ಮೇಲೆ ತೀವ್ರ ಪರಿಣಾಮ ಬೀರಿದೆ. ಕುಟುಂಬಗಳಲ್ಲಿ ಪ್ರತಿದಿನ ಕಲಹ ಉಂಟಾಗಿ, ಮಹಿಳೆಯರು ಹಾಗೂ ಮಕ್ಕಳು ತೀವ್ರ ಮಾನಸಿಕ ಕಿರುಕುಳ ಅನುಭವಿಸುತ್ತಿದ್ದಾರೆ. ಸಾಲದ ಬಾಧೆ ತಾಳಲಾರದೆ ಕೆಲವು ಕುಟುಂಬಗಳು ಆತ್ಮಹತ್ಯೆಯಂತಹ ತೀವ್ರ ನಿರ್ಧಾರಕ್ಕೆ ಕೈಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ.

ಸಂಬಂಧಪಟ್ಟ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಕೂಡಲೇ ಜಾಗೃತರಾಗಿ ಅಕ್ರಮ ಮದ್ಯ ಮಾರಾಟಗಾರರು, ಜೂಜುಕೋರರು ಹಾಗೂ ಬಡ್ಡಿ ದಂಧೆಕೋರರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಒಂದು ವೇಳೆ ಈ ದೋರಣೆಯನ್ನು ನಿರ್ಲಕ್ಷಿಸಿ ಗ್ರಾಮದಲ್ಲಿ ಯಾವುದಾದರೂ ಅಹಿತಕರ ಘಟನೆ ಸಂಭವಿಸಿದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು, ದಲ್ಲಾಳಿಗಳು ಹಾಗೂ ಮದ್ಯ ಮಾರಾಟಗಾರರೇ ನೇರ ಹೊಣೆಯಾಗಲಿದ್ದಾರೆ. ಆಡಳಿತ ಮಂಡಳಿ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಗ್ರಾಮದ ಸಮಸ್ತ ಮಹಿಳೆಯರ ನೇತೃತ್ವದಲ್ಲಿ ಉಗ್ರ ಹೋರಾಟ ರೂಪಿಸಲಾಗುವುದು ಎಂದು ಪ್ರಶಾಂತ್ ದೊಡ್ಡಮನಿ ಎಚ್ಚರಿಸಿದ್ದಾರೆ.

# ಜೈಲಿಗೆ ಹೋಗಿ ಬಂದು ಯಡಿಯೂರಪ್ಪ ಸಿಎಂ ಆಗಲಿಲ್ವಾ :ಶಿವಗಂಗಾ ಬಸವರಾಜ್

• **ಉದಯವಾಹಿನಿ, ದಾವಣಗೆರೆ:**

ಬಿ.ಎಸ್.ಯಡಿಯೂರಪ್ಪ ಅವರು ಜೈಲಿಗೆ ಹೋಗಿ ಬಂದು ಸಿಎಂ ಆದ್ರು. ಹಾಗೆಯೇ, ಬಿ.ನಾಗೇಂದ್ರ ಅವರಿಗೆ ಸಚಿವ ಸ್ಥಾನ ಕೊಟ್ಟಿರುವುದು ಸರಿ ಇದೆ ಎಂದು ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ಸಮರ್ಥಿಸಿಕೊಂಡರು.

ದಾವಣಗೆರೆಯ ನಿವಾಸದಲ್ಲಿ ಮಾತನಾಡಿದ ಅವರು, ಜಾತಿವಾರು, ಪ್ರಾಂತ್ಯವಾರು ಸಚಿವ ಸ್ಥಾನವನ್ನು ಹೈಕಮಾಂಡ್ ಹಂಚಿಕೆ ಮಾಡಿದೆ. ಇದೀಗ ನಾವು ಅಭಿವೃದ್ಧಿ ಬಗ್ಗೆ ಮಾತನಾಡಿದ್ರೆ ಒಳ್ಳೆದು ಎಂದರು.

ನೂತನ ಸಚಿವ ಬಿ ನಾಗೇಂದ್ರ ಅವರ ಮೇಲೆ ಭ್ರಷ್ಟಾಚಾರ ಆರೋಪವಿರುವ ವಿಚಾರವಾಗಿ ಮಾತನಾಡಿ ಭ್ರಷ್ಟಾಚಾರದ ಆರೋಪ ಯಾರ ಮೇಲೆ ಇಲ್ಲ. ಯಡಿಯೂರಪ್ಪ ಅವರು ಜೈಲಿಗೆ ಹೋಗಿ ಬಂದರೂ ಅವರನ್ನು ಮುಖ್ಯಮಂತ್ರಿ ಮಾಡಿದ್ರು. ನಾಗೇಂದ್ರ ಅವರ ಮೇಲೆ ಆರೋಪ ಸಾಬೀತಾಗಿಲ್ಲ. ಅವರು ಜೈಲಿನಲ್ಲೂ ಇಲ್ಲ. ಅವರಿಗೆ ಸಚಿವ ಸ್ಥಾನ ಕೊಟ್ಟಿರುವುದು ಸರಿ ಇದೆ. ಹೈಕಮಾಂಡ್ ತೀರ್ಮಾನ ಕೂಡ ಸರಿ ಇದೆ. ಅವರು ದೆಹಲಿಗೆ ಹೋಗಲು ನಿರ್ಬಂಧ ಇದೆ ಎಂದ ಮೇಲೆ ಅವರಿಗೆ ಯಾವ ಸಚಿವ ಸ್ಥಾನ ಕೊಡ್ತಾರೆ ಎಂಬುದರ ಮೇಲೆ ನಿರ್ಧಾರ ಆಗಲಿದೆ ಎಂದು ತಿಳಿಸಿದರು.

ಉದಯವಾಹಿನಿ ಚಿತ್ರ




ಸಿದ್ದರಾಮಯ್ಯ ಅವರ ಆಪ್ತರಿಗೆ ಸಚಿವ ಸಿಕ್ಕಿಲ್ಲ ಎಂಬ ವಿಚಾರವಾಗಿ ಮಾತನಾಡಿ ಇಲ್ಲಿ ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಆಪ್ತರು ಎನ್ನಲು ಬರಲ್ಲ.

ಇಲ್ಲಿ ಪ್ರಾಂತ್ಯವಾರು ಜಾತಿವಾರು ಆಧಾರದ ಮೇಲೆ ಬಸವಂತಪ್ಪ ಅವರಿಗೆ ಕೊಟ್ಟಿದ್ದಾರೆ. ನಾನು ಸಿಟ್ಟಾಗಲು ಬರುತ್ತಾ? ಇನ್ನು ಸಚಿವ ಎಸ್‌ಎಸ್ ಮಲ್ಲಿಕಾರ್ಜುನ ಅವರು ಸಚಿವ ಸ್ಥಾನಕ್ಕಾಗಿ ಬ್ಲಾಕ್ ಮೇಲ್ ಮಾಡಿಲ್ಲ. ಅದು ನಡೆಯಲ್ಲ. ರಾಜೀನಾಮೆ ಕೊಡ್ತೇವಿ ಎಂದು ಬೆದರಿಸಿದ ಶಾಸಕರು ಇದೀಗ ಸಿಎಂ ಮನೆಯಲ್ಲಿ ಇದ್ದಾರೆ ಎಂದರು.

ನಾನು ಸಚಿವ ಸ್ಥಾನದ ಆಕಾಂಕ್ಷಿಯಲ್ಲ. ಸಿಎಂ ಮನೆಯ ಮಗ ನಾನು. ಶಿವನ ಮುಂದೆ ಇರುವ ಬಸವ ನಾನು. ಇಷ್ಟು ದಿನಗಳಕಾಲ ಶಾಸಕ ಇಕ್ಬಾಲ್ ಹುಸೇನ್ ಹಾಗೂ ನಾನು ಡಿಕೆಶಿ ಪರ ಬ್ಯಾಟಿಂಗ್ ಮಾಡಿದ್ದು, ಅವರು ನಮಗೆ ಸಚಿವ ಸ್ಥಾನ ನೀಡಲಿ ಅಂತಾ ಅಲ್ಲಾ. ನಾನು ಅವರ ಮನೆಯ ಮಗ ಎಂದು ಪ್ರತಿಕ್ರಿಯೆ ನೀಡಿದರು.

ನಾಲ್ಕು ಸಲ ಶಾಸಕರಾಗಿದ್ದವರಿಗೂ ಸಚಿವ ಸ್ಥಾನ ಸಿಕ್ಕಿಲ್ಲ. ಎಸ್ಸಿಯಲ್ಲಿನ ಮಾದಿಗ ಸಮಾಜಕ್ಕೆ ಒಂದು ಸ್ಥಾನ ನೀಡಬೇಕಿತ್ತು. ಆರ್ ಬಿ ತಿಮ್ಮಾಪೂರ ಅವರ ಬದಲಿಗೆ ಮೊದಲ ಸಲ ಗೆದ್ದ ಕೆಎಸ್ ಬಸವಂತಪ್ಪ ಅವರಿಗೆ ಸಚಿವ ಸ್ಥಾನ ನೀಡಲಾಗಿದೆ ಎಂದು ಶಿವಗಂಗಾ ಬಸವರಾಜ್ ಹೇಳಿದರು.

# ಆಡಿಯೋ ವೈರಲ್ ವಿವಾದ: ಎಸ್.ಜಿ.ನಂಜಯ್ಯನಮಠ

• **ಉದಯವಾಹಿನಿ, ಬಾಗಲಕೋಟೆ:**

ಕಾಂಗ್ರೆಸ್ ಪಕ್ಷದ ಮಾಜಿ ಶಾಸಕ ಎಸ್.ಜಿ.ನಂಜಯ್ಯನಮಠ ಹಾಗೂ ಮಾಜಿ ಸಚಿವ ಆರ್.ಬಿ.ತಿಮ್ಮಾಪೂರ ಅವರು ಮಾತನಾಡಿರುವುದು ಎನ್ನಲಾದ ಆಡಿಯೋ ವೈರಲ್ ವಿವಾದದ ಕುರಿತು ಇದೀಗ ಇಬ್ಬರೂ ನಾಯಕರು ಸ್ಪಷ್ಟನೆ ನೀಡಿದ್ದಾರೆ.

ನಾನು ಹಾಗೂ ತಿಮ್ಮಾಪೂರ ಮೊಬೈಲ್‌ನಲ್ಲಿ ಮಾತನಾಡಿದ್ದು ನಿಜ. ಆದರೆ ಕೆಲವು ವಿಷಯಗಳನ್ನು ಸೃಷ್ಟಿಸಲಾಗಿದೆ. ನಮ್ಮಿಬ್ಬರ ನಡುವೆ ಷಡ್ಯಂತ್ರ ರೂಪಿಸಿದ್ದಾರೆ ಪಕ್ಷದ ಬಾಗಲಕೋಟೆ ಜಿಲ್ಲಾ ಘಟಕದ ಅಧ್ಯಕ್ಷರೂ ಆಗಿರುವ ಎಸ್.ಜಿ.ನಂಜಯ್ಯನಮಠ ಹೇಳಿದ್ದಾರೆ.

**ಅಸಮಾಧಾನ ವ್ಯಕ್ತಪಡಿಸಿದ್ದು ನಿಜ- ನಂಜಯ್ಯನಮಠ:** ಆದರೆ ನವನಗರದ ಪತ್ರಿಕಾ ಭವನದಲ್ಲಿ ಮಾಧ್ಯಮಗೋಷ್ಠಿ ನಡೆಸಿ ಸ್ಪಷ್ಟನೆ ನೀಡಿರುವ ಅವರು, ಸಚಿವರಾದ ಬಳಿಕ ವಿಜಯಾನಂದ ಕಾಶಪ್ಪನವರನ್ನು ಭೇಟಿಯಾಗಿ ಸನ್ಮಾನ ಮಾಡಿದ್ದೇನೆ. ನನ್ನ ಜೊತೆ ಕಾಶಪ್ಪನವರು ಗೌರವಯುತವಾಗಿ ನಡೆದುಕೊಂಡಿದ್ದಾರೆ. ಸನ್ಮಾನಿಸಿ ಬರುವಾಗ ಕಾರಿನಲ್ಲಿ ಮಾತನಾಡುತ್ತಾ ಬಂದಿದ್ದೇನೆ. ಮಾಜಿ ಸಚಿವ ತಿಮ್ಮಾಪೂರ ಹಾಗೂ ನಾನು ಮಾತನಾಡುತ್ತಾ, ಸಚಿವ ಸಂಪುಟದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದು ನಿಜ. ಆದರೆ ಕೆಲವು ವಿಷಯಗಳನ್ನು ಸೇರ್ಪಡೆ ಮಾಡಲಾಗಿದೆ. ಪೇಮೆಂಟ್ ಸೀಟ್ ಬಗ್ಗೆ ಮಾತನಾಡಿಲ್ಲ. ಬಿಜೆಪಿಯವರೇ ಈ ಕೆಲಸ ಮಾಡಿರಬೇಕು ಎಂದು ದೂರಿದರು.

# ಮುಳ್ಳಯ್ಯನಗಿರಿ ಬಳಿ ಚಲಿಸುತ್ತಿದ್ದ ಬೈಕ್ ಮೇಲೆ ಬಿದ್ದ ಮರ ಕೂದಲೆಳೆ ಅಂತರದಲ್ಲಿ ಪ್ರವಾಸಿಗ ಬಚಾವ್

• **ಉದಯವಾಹಿನಿ, ಚಿಕ್ಕಮಗಳೂರು:**

ಇಲ್ಲಿನ ಮುಳ್ಳಯ್ಯನಗಿರಿ ಮಾರ್ಗದಲ್ಲಿ ಚಲಿಸುತ್ತಿದ್ದ ಬೈಕ್ ಮೇಲೆ ಬೃಹತ್ ಮರ ಬಿದ್ದಿದ್ದು, ಕೂದಲೆಳೆ ಅಂತರದಲ್ಲಿ ಪ್ರವಾಸಿಗ ಪಾರಾಗಿದ್ದಾನೆ.ಚಿಕ್ಕಮಗಳೂರು ತಾಲೂಕಿನ ಚನ್ನಗೋಡನಹಳ್ಳಿ ಬಳಿ ಈ ಅವಘಡ ನಡೆದಿದೆ. ಬೈಕ್ ಬರುತ್ತಿದ್ದಾಗಲೇ ಮರ ಬುಡ ಸಮೇತ ರಸ್ತೆಗೆ ಬಿದ್ದಿದೆ. ಮರದ ತುದಿ ಭಾಗ ಮಾತ್ರ ಬೈಕ್ ಮೇಲೆ ಬಿದ್ದಿದ್ದರಿಂದ ಸವಾರ ಪಾರಾಗಿದ್ದಾನೆ. ಅಕಸ್ಮಾತ್ ಮರದ ಮಧ್ಯ ಭಾಗದಲ್ಲಿ ಬೈಕ್ ಸಿಲುಕಿದ್ದರೆ ಪ್ರಾಣಾಪಾಯ ಆಗುವ ಸಂಭವವಿತ್ತು. ಮುಳ್ಳಯ್ಯನಗಿರಿ ದತ್ತಪೀಠ ಭಾಗದಲ್ಲಿ ಭಾರೀ ಗಾಳಿ, ಮಳೆಯಾಗುತ್ತಿದೆ. ಈ ಭಾಗದಲ್ಲಿ ತೇವಾಂಶ ಹೆಚ್ಚಾಗಿ ಕೆಲವೆಡೆ ಧರೆ ಕುಸಿಯುತ್ತಿದೆ. ವಾಹನ ಸವಾರರು, ಪ್ರವಾಸಿಗರು ಎಚ್ಚರಿಕೆಯಿಂದ ಈ ಮಾರ್ಗದಲ್ಲಿ ಓಡಾಡುವಂತೆ ಜಿಲ್ಲಾಡಳಿತ ಮನವಿ ಮಾಡಿದೆ.

# ಕೆಎಸ್‌ಆರ್‌ಟಿಸಿ ಬಸ್-ಬೈಕ್ ಡಿಕ್ಕಿ; ಬಾಲಕಿ ಸೇರಿ ಮೂವರು ಸಾವು

• **ಉದಯವಾಹಿನಿ, ಬೆಳಗಾವಿ:**

ಜಿಲ್ಲೆಯಲ್ಲಿ ಗುರುವಾರ ಕೆಎಸ್‌ಆರ್‌ಟಿಸಿ ಬಸ್ ಮತ್ತು ಮೋಟಾರ್‌ಸೈಕಲ್ ನಡುವೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೂವರು ಮೃತಪಟ್ಟಿದ್ದಾರೆ. ಅಪಘಾತದಲ್ಲಿ ಓರ್ವ ವ್ಯಕ್ತಿ, ಅವರ ನಾಲ್ಕು ವರ್ಷದ ಮಗಳು ಮತ್ತು ಮತ್ತೊಬ್ಬ ವ್ಯಕ್ತಿ ಪ್ರಾಣ ಕಳೆದುಕೊಂಡಿದ್ದಾರೆ. ಗೋಕಾಕ ತಾಲ್ಲೂಕಿನ ಕೊನ್ನೂರು ಪಟ್ಟಣದಲ್ಲಿ ಈ ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರನ್ನು ಸೈಫ್ ಮುಲ್ಲಾ (29), ಅವರ ಮಗಳು ಸಿಜಾ ಮುಲ್ಲಾ (4) ಮತ್ತು ಇಮ್ತಿಯಾಜ್ ಬಡ್ಗಾಂವ್ (35) ಎಂದು ಗುರುತಿಸಲಾಗಿದೆ. ಘಟನೆಯಲ್ಲಿ ಜಿಹಾನ್ ಶಾರುಖ್ ಕುಡಚಿಕರ್ ಎಂಬ ಮತ್ತೊಂದು ಮಗು ಗಂಭೀರವಾಗಿ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪೊಲೀಸರ ಪ್ರಕಾರ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಗೋಕಾಕಕ್ಕೆ ತೆರಳುತ್ತಿದ್ದಾಗ ಕೊನ್ನೂರು ಬಳಿ ಮೋಟಾರ್‌ಸೈಕಲ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತಕ್ಕೂ ಮೊದಲು, ಮೋಟಾರ್‌ಸೈಕಲ್ ಗೋಕಾಕ ಜಲಪಾತದ ಬಳಿಯಿರುವ ಫೋರ್ಬ್ಸ್ ಶಾಲೆಯಿಂದ ಹೊರಟಿತ್ತು. ಸೈಫ್ ಮುಲ್ಲಾ ಅವರು ತಮ್ಮ ಮಗಳು ಸಿಜಾ, ಸ್ನೇಹಿತ ಇಮ್ತಿಯಾಜ್ ಮತ್ತು ಅವರ ಮಗಳು ಜಿಹಾನ್ ಅವರೊಂದಿಗೆ ಮೋಟಾರ್‌ಸೈಕಲ್ ಚಲಾಯಿಸುತ್ತಿದ್ದರು. ಬೈಕ್‌ನಲ್ಲಿದ್ದ ನಾಲ್ವರ ಪೈಕಿ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದು, ಗಾಯಗೊಂಡಿರುವ ಮಗುವಿನ ಸ್ಥಿತಿ ಗಂಭೀರವಾಗಿದೆ. ಅಪಘಾತದ ನಂತರ, ಬಸ್ ಚಾಲಕ ವಾಹನವನ್ನು ಅಲ್ಲಿಯೇ ಬಿಟ್ಟು ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಪೊಲೀಸರು ಸ್ಥಳಕ್ಕೆ ಧಾವಿಸಿ, ಪ್ರಾಥಮಿಕ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಕಡೇಚೂರು ಬಾಡಿಯಾಳ ಘಟನೆ ಸಂಸದ ರಾಧಾಕೃಷ್ಣ ದೊಡ್ಡಮನಿ ಸಂತಾಪ

• **ಉದಯವಾಹಿನಿ, ಕಲಬುರಗಿ-ಕಡೇಚೂರು-**

ಬಾಡಿಯಾಳ ಕೈಗಾರಿಕ ಪ್ರದೇಶದಲ್ಲಿ ನಿನ್ನೆ ಸಲ್ಫರ್ ಡೈಯಾಕ್ಸೈಡ್ ಅನಿಲ ಸೋರಿಕೆಯಿಂದ ಫಾರ್ಮಾ ಕಂಪನಿಯಲ್ಲಿ ಕರ್ತವ್ಯನಿರತ ಮೂವರು ಕಾರ್ಮಿಕರು ಮೃತಪಟ್ಟು ಮತ್ತಿಬ್ಬರು ತೀವ್ರಗಾಯಗೊಂಡ ಘಟನೆ ಕುರಿತು ಕಲಬುರಗಿ ಲೋಕಸಭಾ ಕ್ಷೇತ್ರದ ಸದಸ್ಯರಾದ ರಾಧಾಕೃಷ್ಣ ದೊಡ್ಡಮನಿ ಸಂತಾಪ ವ್ಯಕ್ತಪಡಿಸಿದ್ದಾರೆ.

ಘಟನೆಯ ಹಿನ್ನೆಲೆಯಲ್ಲಿ ಯಾದಗಿರಿ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ಜೊತೆ ದೂರವಾಣಿಯಲ್ಲಿ ಮಾತನಾಡಿರುವ ಸಂಸದರು ಗಾಯಾಳುಗಳಿಗೆ ತುರ್ತು ಹಾಗೂ ಅಗತ್ಯ ಚಿಕಿತ್ಸೆ ದೊರಕಿಸಿಕೊಡುವಂತೆ ಅವರು ಸೂಚಿಸಿದ್ದಾರೆ.

ಫಾರ್ಮಾ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸುರಕ್ಷತೆಗೆ ಅಗತ್ಯ ಹಾಗೂ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿರುವ ಬಗ್ಗೆ ಪರಶೀಲನೆ ನಡೆಸುವಂತೆ ಜಿಲ್ಲಾಡಳಿತಕ್ಕೆ ಸೂಚಿಸಿರುವ ಅವರು ನಿಯಮಾವಳಿ ಮೀರಿದ್ದರೆ ಅಗತ್ಯ ಕ್ರಮವಹಿಸುವಂತೆ ಅವರು ನಿರ್ದೇಶನ ನೀಡಿದ್ದಾರೆ. ದುರದೃಷ್ಟವಶಾತ್ ನಡೆದ ಘಟನೆಯಲ್ಲಿ ಪ್ರಾಣ ಕಳೆದುಕೊಂಡ ಬಡ ಕಾರ್ಮಿಕರ ಕುಟುಂಬ ವರ್ಗದವರಿಗೆ ಸಾಂತ್ವಾನ ಹೇಳಿರುವ ರಾಧಾಕೃಷ್ಣ ದೊಡ್ಡಮನಿ ಅವರು ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಹಾರೈಸಿದ್ದಾರೆ.

# ಸಿದ್ದರಾಮಯ್ಯ ಮೂರು ಬಾರಿ ಕರೆದು ಮಂತ್ರಿ ಮಾಡ್ತೇನಿ ಅಂದ್ರು, ಮಾಡಿಲ್ಲ

• **ಉದಯವಾಹಿನಿ, ಕಲಬುರಗಿ:**

ನನ್ನ ಸಚಿವ ಸ್ಥಾನಕ್ಕೆ ಕಲಬುರಗಿ ಜಿಲ್ಲೆಯ ನಾಯಕರೇ ಅಡ್ಡಿಯಾಗಿರುವುದಾಗಿ ಸಿದ್ದರಾಮಯ್ಯ ಹೇಳಿದ್ದಾರೆ ಅಂತಾ ಆಳಂದ ಶಾಸಕ ಬಿ.ಆರ್.ಪಾಟೀಲ್ ಬೇಸರ ವ್ಯಕ್ತಪಡಿಸಿದ್ದಾರೆ. ಕಲಬುರಗಿಯಲ್ಲಿ ಮಾತನಾಡಿದ ಶಾಸಕ ಬಿ.ಆರ್.ಪಾಟೀಲ್, ಅದು ಯಾವ ಲೀಡರ್ ಅಂತಾ ನನಗೆ ಗೊತ್ತಿಲ್ಲ. ಸಿದ್ದರಾಮಯ್ಯ ಜಾರಿಕೊಳ್ಳಲು ನೆಪ ಮಾತ್ರಕ್ಕೆ ಈ ರೀತಿ ಹೇಳಿದ್ರಾ, ಸತ್ಯ ಹೇಳಿದ್ರಾ, ಅದು ಸಹ ಗೊತ್ತಿಲ್ಲ ಎಂದು ತಿಳಿಸಿದರು.

ನಾನು ಸುಮೋಟೊ ಮಂತ್ರಿ ಮಾಡಿ ಅಂತಾ ಎಲ್ಲೂ ಹೋಗಿಲ್ಲ. ಸಿದ್ದರಾಮಯ್ಯ ಅವರು ಚುನಾವಣೆ ಸಂದರ್ಭದಲ್ಲಿ, 'ನನ್ನ ಗೆಳೆಯನನ್ನು ಆಯ್ಕೆ ಮಾಡಿ ಕಳುಹಿಸಿ. ನಾನು ಸಚಿವನನ್ನಾಗಿ ಮಾಡಿ ಕಳುಹಿಸುತ್ತೇನೆ' ಅಂತಾ ಜನತೆಗೆ ಹೇಳಿದ್ದರು.

ನನಗೆ ಬೇಜಾರ್ ಆಗಿದ್ದು ಏನಂದ್ರೆ, ಮಾತು ಕೊಟ್ಟ ಮಾತು ತಪ್ಪಿದ್ರು ಸಿದ್ದರಾಮಯ್ಯ. ಮೂರು ಬಾರಿ ಕರೆದು ಮಂತ್ರಿ ಮಾಡುತ್ತೇನೆ ಅಂತಾ ಹೇಳಿದ್ರು. ಆದರೆ, ಮಾಡಿಲ್ಲ ಎಂದು ಪಾಟೀಲ್ ಅಸಮಾಧಾನ ಹೊರಹಾಕಿದರು.

# ಭಾರತವನ್ನು 'ಹಿಂದೂ ರಾಷ್ಟ್ರ' ಮಾಡುವುದೆಂದರೆ ಶೋಷಣೆಯ ವ್ಯವಸ್ಥೆಯನ್ನು ಮರಳಿ ತರುವಂತೆ

• **ಉದಯವಾಹಿನಿ, ಬೀದರ್:**

ಭಾರತ ಹಿಂದೂ ರಾಷ್ಟ್ರವಾಗುವುದಕ್ಕಿಂತ ಬಹುದೊಡ್ಡ ಅಪಾಯ ಇನ್ನೊಂದಿಲ್ಲ ಎಂದು ಡಾ.ಬಿ.ಆರ್.ಅಂಬೇಡ್ಕರ್ ಎಚ್ಚರಿಸಿದ್ದಾರೆ. ಈ ದೇಶವನ್ನು 'ಹಿಂದೂ ರಾಷ್ಟ್ರ' ಮಾಡುವುದೆಂದರೆ ಶೋಷಣೆಯ ವ್ಯವಸ್ಥೆಯನ್ನು ಮರಳಿ ತರುವಂತೆ ಎಂದು ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ ಟೀಕಿಸಿದರು.

ಬೀದರ್‌ನ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ಗುರುವಾರ ನಡೆದ ಕರ್ನಾಟಕ ದಮನಿತ ಸಮುದಾಯಗಳ ಒಕ್ಕೂಟದ ಸಮ್ಮೇಳನ ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಕೋಮು ಶಕ್ತಿಗಳು ಜನರನ್ನು ಧಾರ್ಮಿಕ ಆಧಾರದ ಮೇಲೆ ವಿಭಜಿಸಲು ಪ್ರಯತ್ನಿಸುತ್ತಿವೆ. ಧರ್ಮ ರಾಜಕೀಯದ ಭಾಗವಾಗುವ ಬದಲು ವೈಯಕ್ತಿಕ ವಿಷಯವಾಗಿ ಉಳಿಯಬೇಕು ಎಂದು ಅವರು ಪ್ರತಿಪಾದಿಸಿದರು.

ಕೋಮುವಾದಿಗಳು ಈ ದೇಶ ಹಿಂದೂ ರಾಷ್ಟ್ರವಾಗಬೇಕು ಎನ್ನುತ್ತಾರೆ. ಆದರೆ, ಅಂಬೇಡ್ಕರ್ ಈ ದೇಶ ಹಿಂದೂ ರಾಷ್ಟ್ರವಾದರೆ ಅದಕ್ಕಿಂತ ದೊಡ್ಡ ಅಪಾಯ ದೇಶಕ್ಕೆ ಮತ್ತೊಂದಿಲ್ಲ ಎಂದು ಎಚ್ಚರಿಸಿರುವುದಾಗಿ ಯತೀಂದ್ರ ಹೇಳಿದರು. ಜಾತಿ ವ್ಯವಸ್ಥೆ ಹಿಂದೂ ಧರ್ಮದಲ್ಲಿ ಆಳವಾಗಿ ಬೇರೂರಿದೆ. ಹಿಂದೂ ರಾಷ್ಟ್ರ ಸಾಮಾಜಿಕ ಅಸಮಾನತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ಇದೇ ಸಂದರ್ಭದಲ್ಲಿ ವಾದಿಸಿದರು. ಹಿಂದೂ ಧರ್ಮದ ಮೂಲ ಪರಿಕಲ್ಪನೆ ಜಾತಿ ವ್ಯವಸ್ಥೆ. ಆ ವ್ಯವಸ್ಥೆ ಮತ್ತೆ ಬಂದರೆ ನಾವೆಲ್ಲರೂ ಮತ್ತೆ ಶೋಷಣೆಗೆ ಒಳಗಾಗುತ್ತೇವೆ. ಅಲ್ಪಸಂಖ್ಯಾತರು ಇರುವುದಿಲ್ಲ. ಅಲ್ಪಸಂಖ್ಯಾತರು ಎರಡನೇ ದರ್ಜೆಯ ನಾಗರಿಕರಾಗಿ ಬದುಕಬೇಕಾಗುತ್ತದೆ. ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಮಾಡುವುದೆಂದರೆ ಶೋಷಣೆಯ ವ್ಯವಸ್ಥೆಯನ್ನು ಮರಳಿ ತರುವಂತೆ ಎಂದರು.

ಧರ್ಮದ ಅಸ್ತ್ರವನ್ನು ಬಳಸಿ ನಮ್ಮನ್ನು ವಿಭಜಿಸಲು ಪ್ರಯತ್ನಿಸುತ್ತಿರುವ ಕೋಮುವಾದಿಗಳ ವಿರುದ್ಧ ನಾವು ಹೋರಾಡಬೇಕು. ಆಗ ಮಾತ್ರ ನಮ್ಮ ಹಕ್ಕುಗಳು ಮತ್ತು ಅಧಿಕಾರವನ್ನು ಪಡೆಯಲು ಸಾಧ್ಯವಿದೆ ಎಂದು ತಿಳಿಸಿದರು.

ಬುದ್ಧ, ಬಸವ, ಅಂಬೇಡ್ಕರ್ ಮತ್ತು ಕನಕದಾಸರು ಸೇರಿದಂತೆ ಅನೇಕ ಮಹನೀಯರು ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿದರು. ಆದರೂ ಇಂದಿಗೂ ಅದರ ನಿರ್ಮೂಲನೆ ಸಾಧ್ಯವಾಗಿಲ್ಲ. ಹಿಂದೂ ಧರ್ಮ ಜಾತಿ ವ್ಯವಸ್ಥೆಗೆ ತನ್ನ ಒಪ್ಪಿಗೆಯ ಮುದ್ರೆ ಒತ್ತಿದೆ ಎಂದು ಆರೋಪಿಸಿದರು.




ಉದಯವಾಹಿನಿ ಚಿತ್ರ

# ಗುಜರಾತ್ ಮೂಲದ ಮೂವರು ಆರೋಪಿಗಳ ಬಂಧನ, 100% ಬೆಳ್ಳಿ ರಿಕವರಿ!

## ಬಸರಕೋಡ ಬಸವೇಶ್ವರ ದೇವಾಲಯದ ಬೆಳ್ಳಿ ಮೂರ್ತಿ ಕಳ್ಳತನ ಪ್ರಕರಣ ಭೇದಿಸಿದ ಪೊಲೀಸರು;

• **ಉದಯವಾಹಿನಿ, ಮುದ್ದೇಬಿಹಾಳ:**

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಬಸರಕೋಡ ಗ್ರಾಮದ ಪ್ರಸಿದ್ಧ ಶ್ರೀ ಪವಾಡ ಬಸವೇಶ್ವರ ದೇವಾಲಯದಲ್ಲಿ ನಡೆದಿದ್ದ ಬೆಳ್ಳಿ ಪ್ರತಿಮೆ ಕಳ್ಳತನದ ರೋಚಕ ಪ್ರಕರಣಕ್ಕೆ ಪೊಲೀಸರು ಯಶಸ್ವಿಯಾಗಿ ತೆರೆಳೆದಿದ್ದಾರೆ. ಈ ಕುರಿತು ಗುರುವಾರ ವಿಜಯಪುರದಲ್ಲಿ ವಿಶೇಷ ಪತ್ರಿಕಾಗೋಷ್ಠಿ ನಡೆಸಿದ ಬೆಳಗಾವಿ ಐಜಿಪಿ ಸಂದೀಪ್ ಪಾಟೀಲ ಹಾಗೂ ವಿಜಯಪುರ ಪೊಲೀಸ್ ವಿಭಾಗದ ಅಧಿಕಾರಿಗಳು ವಿವರಣೆ ನೀಡಿದರು. ದೇವಾಲಯದಲ್ಲಿ ಕಳ್ಳತನವಾಗಿದ್ದ 32 ಕೆ.ಜಿ. ತೂಕದ ಬೆಳ್ಳಿ

1 : ಕೀಲಿ ಮುರಿದು ಒಳನುಗ್ಗಿದ್ದ ಕಳ್ಳರು,
2 : ಜುಲೈ 6ರ ಬೆಳಿಗ್ಗೆ ಈ ಪ್ರಕರಣ ಬೆಳಕಿಗೆ
3 : ನಾಲ್ಕು ವಿಶೇಷ ತಂಡಗಳಿಂದ ಕಾರ್ಯಾಚರಣೆ

ಪ್ರತಿಮೆಯನ್ನು ಶೇ. 100ರಷ್ಟು ರಿಕವರಿ ಮಾಡಲಾಗಿದ್ದು, ಮೂವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ವಿವರಿಸಿದರು.

**ಘಟನೆ ಹಿನ್ನೆಲೆ**
ಜುಲೈ 5ರ ರಾತ್ರಿ ಹಾಗೂ ಜುಲೈ 6ರ ಮುಂಜಾನೆ ನಡುವಿನ ಅವಧಿಯಲ್ಲಿ ಬಸರಕೋಡ ಗ್ರಾಮದ ಶ್ರೀ ಪವಾಡ ಬಸವೇಶ್ವರ ದೇವಸ್ಥಾನದ ಕಬ್ಬಿಣದ ಬಾಗಿಲ ಕೀಲಿ ಮುರಿದು ಒಳನುಗ್ಗಿದ್ದ ಕಳ್ಳರು, ಗರ್ಭಗುಡಿಯ ಗದ್ದಿಗೆಯ ಮೇಲಿದ್ದ ಅಂದಾಜು 32 ಕೆ.ಜಿ. ತೂಕ ಹಾಗೂ 52 ಲಕ್ಷ ರೂಪಾಯಿ ಮೌಲ್ಯದ ಶ್ರೀ ಪವಾಡ ಬಸವೇಶ್ವರ ಬೆಳ್ಳಿಯ ದೇವರ ಮೂರ್ತಿಯನ್ನು ಕಳವು ಮಾಡಿಕೊಂಡು ಹೋಗಿದ್ದರು. ಜುಲೈ 6ರ ಬೆಳಿಗ್ಗೆ ಈ ಪ್ರಕರಣ ಬೆಳಕಿಗೆ ಬಂದಿದ್ದು, ಲಕ್ಷಾಂತರ ಭಕ್ತರನ್ನು ಹೊಂದಿರುವ ಈ ದೇವಾಲಯದ ಕಳ್ಳತನ ಪ್ರಕರಣವನ್ನು ಪೊಲೀಸರು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದರು.

ಬೆಳ್ಳಿ ಪ್ರತಿಮೆ ಕಳ್ಳತನದ ರೋಚಕ ಪ್ರಕರಣ

**ನಾಲ್ಕು ವಿಶೇಷ ತಂಡಗಳಿಂದ ಕಾರ್ಯಾಚರಣೆ**
ಯಾವುದೇ ಸುಳಿವಿಲ್ಲದ ಈ ಅಪರೂಪದ ಪ್ರಕರಣವನ್ನು ಪತ್ತೆ ಹಚ್ಚಲು ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಮಾರ್ಗದರ್ಶನದಲ್ಲಿ ಬಾಗೇವಾಡಿ ಡಿವೈಎಸ್‌ಪಿ ಚಂದ್ರಕಾಂತ ನಂದರೆಡ್ಡಿ, ಮುದ್ದೇಬಿಹಾಳ ಸಿಪಿಐ ಮಹಮ್ಮದ್ ಫಸಿಯುದ್ದೀನ್, ಮುದ್ದೇಬಿಹಾಳ ಪಿಎಸ್‌ಐ ಸಂಜಯ ತಿಪ್ಪರೆಡ್ಡಿ ನೇತೃತ್ವದಲ್ಲಿ ಒಟ್ಟು 04 ವಿಶೇಷ ತನಿಖಾ ತಂಡಗಳನ್ನು ರಚಿಸಲಾಗಿತ್ತು. ನುರಿತ ಸಿಬ್ಬಂದಿ ಕಳೆದ ಒಂದು ತಿಂಗಳಿಂದ ಕಠಿಣ ಪರಿಶ್ರಮ ವಹಿಸಿ ಚಾಣಾಕ್ಷತನದಿಂದ ಈ ಪ್ರಕರಣವನ್ನು ಭೇದಿಸಿದ್ದಾರೆ.

**ಆರೋಪಿಗಳ ಸೆರೆ ಮತ್ತು ಕೃತ್ಯದ ವಿವರ**
ಪ್ರಮುಖ ಆರೋಪಿ ರಾಜಸ್ಥಾನ ಮೂಲದ ಸುರೇಶಕುಮಾರ ತಂ. ಶಾಂತಿಲಾಲ್ ಸೋಣಿ (ವಯಸ್ಸು 51) ಎಂಬಾತ ಅಹಮದಾಬಾದ್‌ನಲ್ಲಿ ವಾಸವಾಗಿದ್ದನು. ಪೊಲೀಸರು ಅಹಮದಾಬಾದ್‌ನಲ್ಲೇ 15 ದಿನಗಳ ಕಾಲ ತಂಗಿ ಈತನನ್ನು ಬಂಧಿಸಿದ್ದಾರೆ. ಉಳಿದ ಇಬ್ಬರು ಆರೋಪಿಗಳಾದ ಬ್ರಹ್ಮರ್ ತಂ. ಟೋಪಿಯಾ ನೇಟ್ (ವಯಸ್ಸು 35) ಹಾಗೂ ಇಂದ್ರಜೀತ್ ತಂ. ಮನಿಯಾರ್ ನೇಟ್ (ವಯಸ್ಸು 33) ಇಬ್ಬರೂ ಗುಜರಾತ್ ರಾಜ್ಯದ ಅಂಬಾಜಿ ಕುಂಬಾರಿಯಾ ವಾಸಿಗಳಾಗಿದ್ದಾರೆ.

ವಿಜಯಪುರ ಎಸ್‌ಪಿ ಲಕ್ಷ್ಮಣ ನಿಂಬರಗಿ ಮಾತನಾಡಿ, ಪ್ರಮುಖ ಆರೋಪಿ ಸುರೇಶಕುಮಾರ್ ಮೇಲೆ ರಾಜಸ್ಥಾನ ಮತ್ತು ಗುಜರಾತ್‌ನಲ್ಲಿ ದೇವಾಲಯ ಕಳ್ಳತನದ ಹಲವು ಪ್ರಕರಣಗಳು ದಾಖಲಾಗಿವೆ ಎಂದು ತಿಳಿಸಿದರು.

ಉದಯವಾಹಿನಿ ಚಿತ್ರ




ಚಾಣಾಕ್ಷ ತನಿಖೆ ನಡೆಸಿ ಯಶಸ್ವಿ ಕಾರ್ಯಾಚರಣೆ ಕೈಗೊಂಡ ಡಿವೈಎಸ್‌ಪಿ ಚಂದ್ರಕಾಂತ ನಂದರೆಡ್ಡಿ, ಸಿಪಿಐ ಮಹಮ್ಮದ್ ಫಸಿಯುದ್ದೀನ್, ಪಿಎಸ್‌ಐ ಸಂಜಯ ತಿಪ್ಪರೆಡ್ಡಿ ಹಾಗೂ ಪೊಲೀಸ್ ಸಿಬ್ಬಂದಿಗಳಿಗೆ ವಿಶೇಷ ಬಹುಮಾನ ಹಾಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು ಎಂದು ತಿಳಿಸಿದ್ದಾರೆ.
-ಎಸ್‌ಪಿ ಲಕ್ಷ್ಮಣ ನಿಂಬರಗಿ

### ದೇವರ ಬೆಳ್ಳಿ ಮುಖವಾಡವನ್ನು ಕಳವು

ಜೂನ್ ತಿಂಗಳಲ್ಲಿಯೇ ಈತ ಬಸರಕೋಡ ಗ್ರಾಮದ ದೇವಾಲಯಕ್ಕೆ ಭೇಟಿ ನೀಡಿ, ದೇವಾಲಯ ಹಾಗೂ ದೇವರ ಪ್ರತಿಮೆಯ ಕುರಿತು ಸಂಪೂರ್ಣ ಮಾಹಿತಿ ಪಡೆದುಕೊಂಡಿದ್ದನು. ಜುಲೈ 5ರ ರಾತ್ರಿ ದೇವರ ಬೆಳ್ಳಿ ಮುಖವಾಡವನ್ನು ಕಳವು ಮಾಡಿ, ಅದನ್ನು ನಾಲ್ಕು ಭಾಗಗಳಾಗಿ ತುಂಡರಿಸಿ ಸಾಗಿಸಿದ್ದನು. ನಂತರ ಅದನ್ನು ಕರಗಿಸಿ ಬೆಳ್ಳಿ ಗಟ್ಟಿಯನ್ನಾಗಿ ಮಾಡಲಾಗಿದ್ದು, ಕಳ್ಳತನ ಮಾಡಿದ ಸಂಪೂರ್ಣ 32 ಕೆಜಿ ಬೆಳ್ಳಿ ಗಟ್ಟಿಯನ್ನು ವಶಪಡಿಸಿಕೊಳ್ಳಲಾಗಿದೆ. ಇದರೊಂದಿಗೆ ಕೃತ್ಯಕ್ಕೆ ಬಳಸಲಾದ ಮೊಬೈಲ್, ಕಾರು ಹಾಗೂ ರಾಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.